16 April 2026 Thursday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

info.varthaman@gmail.com

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 147 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

**ಭಾವನಾಂತರಂಗ**

ನಮ್ಮವರ ತಪ್ಪಿಗೆ ತಕ್ಷಣ ಕ್ಷಮೆ ಕೊಡುತ್ತೇವೆ, ಬೇರೆಯವರ ತಪ್ಪನ್ನು ಮಾತ್ರ ಜಾಸ್ತಿ ಬಿಂಬಿಸುತ್ತೇವೆ, ಇದು ಮನುಷ್ಯನ ಸ್ವಾರ್ಥ ಗುಣದಲ್ಲೊಂದಿರುವ ಅಂಶ!

-ಸ್ನೇಹಾ ಆನಂದ್



ಹ್ಯಾಂಡ್ ಪೋಸ್ಟ್‌ನಲ್ಲಿ ಬೇಕಿದೆ ಬಸ್ ತಂಗುದಾಣ — ಪುಟ ಸಂ. 2



ದೇಶದ ಅಭಿವೃದ್ಧಿಯಲ್ಲೂ ಸ್ತ್ರೀಯರು ನಾಯಕತ್ವಕ್ಕೆ ಮೀಸಲು — ಪುಟ ಸಂ. 3



ಮೆಡಿಕಲ್ ಕಾಲೇಜು ಕೇಂದ್ರ ಪ್ರಯೋಗಾಲಯ ಖಾಸಗೀಕರಣ ಹಿಂಪಡೆಯಿರಿ — ಪುಟ ಸಂ. 4

# ಶಾಸಕ ವಿನಯ್ ಕುಲಕರ್ಣಿ ದೋಷಿ

## ಯೋಗೀಶಗೌಡ ಕೊಲೆ ಪ್ರಕರಣ: ಜನಪ್ರತಿನಿಧಿಗಳ ಕೋರ್ಟ್‌ನಿಂದ ಇಂದು ಶಿಕ್ಷೆ ಪ್ರಕಟ

**ಬೆಂಗಳೂರು:** ಧಾರವಾಡ ಜಿಲ್ಲಾ ಪಂಚಾಯ್ತಿ ಬಿಜೆಪಿ ಸದಸ್ಯ ಯೋಗೀಶಗೌಡ ಗೌಡರ ಕೊಲೆ ಪ್ರಕರಣದಲ್ಲಿ ಧಾರವಾಡ ಕ್ಷೇತ್ರದ ಕಾಂಗ್ರೆಸ್ ಶಾಸಕ ವಿನಯ ಕುಲಕರ್ಣಿ ಸೇರಿದಂತೆ 19 ಮಂದಿಯನ್ನು ಅಪರಾಧಿಗಳು ಎಂದು ಜನಪ್ರತಿನಿಧಿಗಳ ಸೆಷನ್ಸ್ ನ್ಯಾಯಾಲಯ ಘೋಷಿಸಿದೆ. ನಾಳೆ ಶಿಕ್ಷೆ ಪ್ರಕಟ ಆಗಲಿದೆ.

ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣಾ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಅವರು ಕಾಯ್ದಿರಿಸಿದ್ದ ತೀರ್ಪನ್ನು ಬುಧವಾರ ಸಂಜೆ ಪ್ರಕಟಿಸಿದರು. ಪ್ರಕರಣದಲ್ಲಿ ವಿನಯ ಕುಲಕರ್ಣಿ ಸೇರಿದಂತೆ ಒಟ್ಟು 21 ಆರೋಪಿಗಳ ವಿರುದ್ಧ ಸಿಬಿಐ ತನಿಖಾ ತಂಡ ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿತ್ತು. ಇವರಲ್ಲಿ ಇಬ್ಬರನ್ನು ನಿರ್ದೋಷಿಗಳು ಎಂದು ಪ್ರಕಟಿಸಲಾಗಿದೆ. ಶಿಕ್ಷೆ ಪ್ರಮಾಣವನ್ನು ನಾಳೆ ಗುರುವಾರ ಪ್ರಕಟಿಸುವುದಾಗಿ ತಿಳಿಸಿದ ನ್ಯಾಯಾಧೀಶರು, ಅಪರಾಧಿಗಳನ್ನು ಕೂಡಲೇ ವಶಕ್ಕೆ ತೆಗೆದುಕೊಳ್ಳುವಂತೆ ಸಿಬಿಐ ತನಿಖಾಧಿಕಾರಿಗಳಿಗೆ ನಿರ್ದೇಶಿಸಿದರು.




ಧಾರವಾಡ ಉಪನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ 2016ರ ಜೂನ್ 15ರಂದು ಯೋಗೀಶಗೌಡ ಗೌಡರ್ ಕೊಲೆ ನಡೆದಿತ್ತು. ಈ ಪ್ರಕರಣವನ್ನು ಸಿಬಿಐ ತನಿಖೆ ನಡೆಸಿದ್ದು, ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

2016ರ ಜೂನ್ 15ರಂದು ನಡೆದ ಧಾರವಾಡ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯ ಯೋಗೇಶ್ ಗೌಡ ಕೊಲೆ ಪ್ರಕರಣದ ಸುದೀರ್ಘ ಪುಟ 2ಕ್ಕೆ

### ಕೊಲೆ ನಡೆದಿದ್ದು ಹೇಗೆ?: ಸುಳಿವಿಗಾಗಿ ಹುಡುಕಾಟ...

**ಧಾರವಾಡ:** ಧಾರವಾಡದ ಸಪ್ತಾಪುರದಲ್ಲಿದ್ದ ಜಿಮ್ ಒಂದರಲ್ಲಿ ಜಿಲ್ಲಾ ಪಂಚಾಯ್ತಿ ಸದಸ್ಯ ಯೋಗೀಶಗೌಡ ಬರ್ಬರ ಹತ್ಯೆಯಾಗಿದೆ ಎನ್ನುವ ಸುದ್ದಿ ಕಾಡ್ಗಿಚ್ಚಿನಂತೆ ಹರಡಿ ಆತಂಕದ ಛಾಯೆ ಮೂಡಿಸಿತ್ತು. ಆರೋಪಿಗಳು ಘಟನೆ ನಡೆದ ಸ್ಥಳದಲ್ಲಿ ಯಾವುದೇ ಸುಳಿವು ಬಿಟ್ಟು ಹೋಗಿರಲಿಲ್ಲ. ಅಲ್ಲಿದ್ದ ಯೋಗೀಶಗೌಡ ಅವರ ಚಪ್ಪಲಿಗಳು ಹಾಗೂ ಕೆಲ ವಸ್ತುಗಳನ್ನು ಪೊಲೀಸರು ವಶಕ್ಕೆ ಪಡೆದಿದ್ದರು.

ಕೊಲೆಗೆ ದುಷ್ಕರ್ಮಿಗಳು ತಲವಾರ ಹಾಗೂ ಚಾಕುಗಳನ್ನು ಬಳಸಿದ್ದರು. ಯೋಗೀಶಗೌಡ ಅವರ ತಲೆ, ಕೈ, ಕುತ್ತಿಗೆ ಹಾಗೂ ಕಾಲು ಸೇರಿದಂತೆ ಒಟ್ಟು 26 ಕಡೆಗಳಲ್ಲಿ ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಹಲ್ಲೆ ಮಾಡಿದ್ದರು. ಹಣೆ ಮೇಲೆ 4 ಪುಟ 2ಕ್ಕೆ

# ಕಾಂಗ್ರೆಸ್‌ನಲ್ಲಿ ಬಿರುಗಾಳಿ: ಜೆಡಿಎಸ್‌ಗೆ ತಂಗಾಳಿ

**ವರ್ತಮಾನ ವಿಶೇಷ**

**ಬೆಂಗಳೂರು:** ರಾಜ್ಯದ ಕೈಪಾಳೆಯದಲ್ಲಿ ದಾವಣಗೆರೆಯ ಉಪ ಚುನಾವಣೆ ನಂತರ ತಲೆ ಎತ್ತಿರುವ ಬಿರುಗಾಳಿಯನ್ನು ಜೆಡಿಎಸ್ ತಂಗಾಳಿಯಾಗಿ ಪರಿವರ್ತನೆ ಮಾಡಿಕೊಳ್ಳುವ ಸಾಧ್ಯತೆ ಇದೆ ಇದೇ ಸಮಯಕ್ಕೆ ಸರಿಯಾಗಿ ದೇಹಲಿಯಿಂದ ಪ್ರಧಾನಿ ಆದಿಚುಂಚನಗಿರಿಯಲ್ಲಿ ದಳ ಪತಿಗಳಿಗೆ ಛತ್ರ ಚಾಮರ ಬೀಸಿ ಹೋಗಿದ್ದಾರೆ. ಇದೇ ಖುಷಿಯಲ್ಲಿ ವೀಲ್‌ಚೇರ್‌ನಲ್ಲಿ ಬಂದ ದೇವೇಗೌಡರು, ಕುಮಾರಣ್ಣ ಮತ್ತೆ ಸಿಎಂ ಆಗುವ ಕನಸು ಕಾಣುವುದಕ್ಕೆ ಆರಂಭಿಸಿದ್ದಾರೆ.





ರಾಜ್ಯ ಕಾಂಗ್ರೆಸ್ ಅಧ್ಯಕ್ಷ ಡಿಕೆ ಶಿವ ಕುಮಾರ್ ಸಿಎಂ ಪರ ಇರುವ ಎಲ್ಲಾ ಮುಸ್ಲಿಂ ನಾಯಕರನ್ನು ಒಬ್ಬೊಬ್ಬರನ್ನೇ ಹಿಡಿದು ತಲೆದಂಡ ತೆಗೆದುಕೊಳ್ಳುತ್ತಿರುವುದು. ತಾನೊಬ್ಬನೇ ಮಾಡುವುದು ಸರಿಯಲ್ಲ ಎಂದು ಸಿಎಂ ತಾವೇ ಸಾಕಿದ ಕುರಿಯನ್ನು ಪಕ್ಷದ ಶಿಸ್ತಿನ ಹೆಸರಿನಲ್ಲಿ ಬಲಿಕೊಡುವಂತೆ ಮಾಡು ತ್ತಿದ್ದಾರೆ. ಇದು ಮೇಲು ನೋಟಕ್ಕೆ ಕಾಣುವ ದೃಶ್ಯ. ಇದರ ಹಿಂದೆ ಮತ್ತೊಂದು ಆಘಾ ತಕಾರಿ ಸಂದರ್ಭ ರೂಪುಗೊಳ್ಳುತ್ತಿದೆ.

ರಾಜ್ಯದಲ್ಲಿ ಅಸ್ತಿತ್ವ ಹೊಂದಿಲ್ಲದ ಎಸ್‌ಡಿಪಿಐ ಈಗ ದಾವಣಗೆರೆ ಉಪ ಚುನಾವಣೆ ಮೂಲಕ ಮಹತ್ವ ಪಡೆಯುತ್ತಿರುವುದು. ಇದು ಮೂಲತಃ ಕೇರಳದಲ್ಲಿ ಜನ್ಮ ಪಡೆಯಿತು. ಈಗ ಕರಾವಳಿಯಲ್ಲಿ ಹಲವು ಗಲಭೆಗಳಿಗೆ ಕಾರಣವಾಗಿದೆ. ಬೆಂಗಳೂರಿನಲ್ಲಿ ಶಾಸಕರೊಬ್ಬರ ಮನೆ ಮೇಲೆ ದಾಳಿ ನಡೆದಾಗ ಈ ಸಂಘಟನೆಯವರು ಸಕ್ರಿಯ ಪಾತ್ರವಹಿಸಿದ್ದರು. ಇವರ ಮೇಲೆ ಹಲವು ಕ್ರಿಮಿನಲ್ ಮೊಕದ್ದಮೆಗಳಿದ್ದವು. ಸಿದ್ದರಾ ಮಯ್ಯ ಇವುಗಳನ್ನು ಹಿಂದಕ್ಕೆ ಪಡೆಯಲು ಒಪ್ಪಿದ್ದರು. ಅದರೆ ಹೈಕೋರ್ಟ್ ಅನು ಮೋದನೆ ಸಿಗಲಿಲ್ಲ.

ಇಂತಹ ಸಂಘಟನೆ ದಾವಣಗೆರೆಯಲ್ಲಿ ತಲೆಎತ್ತಲು ಕಾಂಗ್ರೆಸ್ ಅಲ್ಪಸಂಖ್ಯಾತ ನಾಯಕರೇ ಕಾರಣ ಎಂದು ಕಾಂಗ್ರೆಸ್ ನಾಯಕರೇ ಆರೋಪಿಸಿದ್ದಾರೆ. ವಿಚಿತ್ರ ಎಂದರೆ ಇದರ ಎಸ್‌ಡಿಪಿಐ ಅಧ್ಯಕ್ಷ ಮೈಸೂರಿನಲ್ಲಿ ಕಾಂಗ್ರೆಸ್ ಅಭ್ಯರ್ಥಿ ವಿರುದ್ಧವೇ ಸ್ಪರ್ಧಿಸಿದ್ದರು. ಈಗ ಇದು ಸಾಕಷ್ಟು ಕಾಂಗ್ರೆಸ್ ಮತ ಕಿತ್ತರೆ ಅಲ್ಪಸಂಖ್ಯಾತರ ಪಕ್ಷವಾಗಿ ಹೊರಹೊಮ್ಮಲಿದೆ. ಮುಸ್ಲಿಮರಿಗೆ ಕೈ ಬಿಟ್ಟರೆ ಬೇರೆ ಪಕ್ಷವಿಲ್ಲ. ಅದಕ್ಕೆ ಎಸ್‌ಡಿಪಿಐ ಆಸರೆ ನೀಡಬಹುದು. ಒಂದು ವೇಳೆ ಕೈನಿಂದ ಮುಸ್ಲಿಮರು ಹೊರಬಂದರೆ ಆಗ ಜೆಡಿಎಸ್‌ಗೆ ಅನುಕೂಲ.ಅಲ್ಲಿಮುಸ್ಲಿಮರು ಆಶ್ರಯ ಪಡೆಯುತ್ತಾರೆ.

ಡಿಕೆಶಿಗೆ ಅಧಿಕಾರ ಸಿಗದೇ ಹೋದಲ್ಲಿ ಒಕ್ಕಲಿಗರು ದೇವೇಗೌಡರತ್ತ ತಿರುಗಿ ನೀಡುವುದು ಸಹಜ. ಅವರು ಮುಸ್ಲಿಮರಿಗೆ ಆಶ್ರಯ ನೀಡಿದರೆ ಪುಟ 2ಕ್ಕೆ

# ವಸೂಲಿ ದಂಧೆಗೆ ಸಾಕ್ಷಿ ಕೊಡಿ

### ಎಚ್.ಡಿ.ಕುಮಾರಸ್ವಾಮಿ ಹೇಳಿಕೆಗೆ ಯತೀಂದ್ರ ತಿರುಗೇಟು



**ಮೈಸೂರು:** ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ನನ್ನ ಮೇಲಿನ ಆರೋಪಕ್ಕೆ ಒಂದೇ ಒಂದು ಸಾಕ್ಷಿ ಕೊಡಲಿ. ವರ್ಗಾವಣೆ ದಂಧೆ ಮಾಡುತ್ತಿದ್ದೇನೆ ಎನ್ನುತ್ತಾರೆ. ಇದಕ್ಕೆ ನಿಮ್ಮಲ್ಲಿ ಸಾಕ್ಷಿ ಇದೆಯೆ? ಕಮಿಷನ್ ದಂಧೆ ಎನ್ನುತ್ತಾರೆ ಇದಕ್ಕೆ ಸಾಕ್ಷಿ ಇದೆಯೆ? ಎಂದು ಯತೀಂದ್ರ ಸಿದ್ದರಾಮಯ್ಯ ತಿರುಗೇಟು ನೀಡಿದರು.

ನಗರದಲ್ಲಿ ಬುಧವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಸಿದ್ದರಾಮಯ್ಯ ತಮ್ಮ ಪುತ್ರನನ್ನು ವಸೂಲಿಗೆ ಇಟ್ಟುಕೊಂಡಿದ್ದಾರೆ ಎಂಬ ಆರೋಪಕ್ಕೆ ಗರಂ ಆಗಿ ಉತ್ತರಿಸಿದರು.

ಕುಮಾರಸ್ವಾಮಿ ಸಾಕ್ಷಿ ಇಲ್ಲದೆ ಎರಡೂವರೆ ವರ್ಷದಿಂದ ಕೇವಲ ಆರೋಪ ಮಾಡುತ್ತಿದ್ದಾರೆ. ಸಾಕ್ಷಿ ಕೊಟ್ಟು ಆರೋಪ

### ಕುಟುಂಬ ರಾಜಕಾರಣ ಅಲ್ಲ!

**ಮೈಸೂರು:** ತಮ್ಮ ವಿರುದ್ಧ ಕುಟುಂಬ ರಾಜಕಾರಣ ಆರೋಪ ಮಾಡಿದ್ದ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿಗೆ ವಿಧಾನಪರಿಷತ್ ಸದಸ್ಯ ಯತೀಂದ್ರ ಸಿದ್ದರಾಮಯ್ಯ ತಿರುಗೇಟು ನೀಡಿದರು.

ನಾನು ಎಂಎಲ್ಸಿ ಆಗಿರುವುದು ಕುಟುಂಬ ರಾಜಕಾರಣಕ್ಕಾಗಿ ಅಲ್ಲ. ನಮ್ಮ ತಂದೆಯ ರಾಜಕೀಯ ಜೀವನ ಮುಂದುವರಿಕೆ ಭಾಗವಾಗಿ ನಾನು ಎಂಎಲ್ಸಿ ಆಗಿದ್ದೇನೆ. ನಮ್ಮ ಕ್ಷೇತ್ರದ ಜನರ ರಕ್ಷಣಗೆಗೆ ನಮ್ಮ ತಂದೆಯ ಅಭಿಮಾನಿಗಳ ರಕ್ಷಣಗೆಗಾಗಿ ನಾನು ರಾಜಕೀಯಕ್ಕೆ ಬಂದಿದ್ದೇನೆ. ನಮ್ಮ ಅಣ್ಣ ಇಲ್ಲದ ಕಾರಣಕ್ಕೆ ನಾನು ಬಂದೆ. ನಮ್ಮ ತಂದೆ ನನ್ನನ್ನು ಪಕ್ಷದ ರಾಜ್ಯಾಧ್ಯಕ್ಷ ಮಾಡಿಲ್ಲ. ಮಕ್ಕಳನ್ನೇ

# ಇಲವಾಲದಲ್ಲಿ ಅಂಬೇಡ್ಕರ್ ಮ್ಯೂಸಿಯಂ

### 10 ಎಕರೆಯಲ್ಲಿ ನಿರ್ಮಾಣ | ಸಚಿವ ಡಾ.ಮಹದೇವಪ್ಪ ಸೂಚನೆ




**ಮೈಸೂರು:** ತಾಲ್ಲೂಕಿನ ಇಲವಾಲ ಹೋಬಳಿಯ ಯಲಚಹಳ್ಳಿಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಹೋರಾಟ, ಸಾಧನೆ, ರಾಜತಾಂತ್ರಿಕತೆ ಮತ್ತು ತತ್ವಗಳನ್ನು ತಿಳಿಸುವ ಥೀಮ್‌ಪಾರ್ಕ್ (ಮ್ಯೂಸಿಯಂ) ನಿರ್ಮಾಣ ಮಾಡಲಾಗುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಸಭಾಂಗದಲ್ಲಿ ಬುಧವಾರ ಯೋಜನೆ ಸಂಬಂಧ ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ಸಭೆ ನಡೆಸಿ ಮಾತನಾಡಿದ ಅವರು, ಮ್ಯೂಸಿಯಂ ನಿರ್ಮಾಣಕ್ಕೆ ಈಗಾಗಲೇ 10 ಎಕರೆ ಭೂಮಿಯನ್ನು ಕಾಯ್ದಿರಿಸಲಾಗಿದೆ. ಡಿ.ಪಿ.ಆರ್. ತಯಾರಿಸಿ ನೀಲಿನಕ್ಷೆಯೊಂದಿಗೆ ಮ್ಯೂಸಿಯಂ ನಿರ್ಮಾಣಕ್ಕೆ ಬೇಕಿರುವ ಅನುದಾನದೊಂದಿಗೆ ಯೋಜನೆ ಸಿದ್ಧವಾಗಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅಂಬೇಡ್ಕರ್ ಅವರು ರಚಿಸಿರುವ ಸಂವಿಧಾನದಲ್ಲಿ ದೇಶದ ಆರ್ಥಿಕತೆ, ನಿರುದ್ಯೋಗ, ನೀರಿನ ಕೊರತೆ ಸೇರಿದಂತೆ ಹಲವು ಜ್ವಲಂತ ಸಮಸ್ಯೆಗಳಿಗೆ ಪರಿಹಾರವಿದೆ. ಅವುಗಳನ್ನು ಸಾಮಾನ್ಯ ಜನರಿಗೆ ಅರ್ಥವಾಗುವ ರೀತಿ ವಿಷಯಗಳನ್ನು ತಿಳಿಸಬೇಕು ಎಂದು ಹೇಳಿದರು. ಪುಟ 2ಕ್ಕೆ

# ಮೋದಿಗೆ ಸಿದ್ದು ಸ್ವಾಗತ

### ರಾಜ್ಯಕ್ಕೆ ಸಂಬಂಧಿಸಿದ 18 ಬೇಡಿಕೆಗಳ ಮನವಿ ಸಲ್ಲಿಕೆ

**ಬೆಂಗಳೂರು:** ರಾಜ್ಯಕ್ಕೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ಅವರನ್ನು ವಿಮಾನ ನಿಲ್ದಾಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ವಾಗತ ಮಾಡಿದ್ದಾರೆ. ಸಿದ್ದರಾಮಯ್ಯ ಅವರು ಪ್ರಧಾನಿಗಳಿಗೆ ರಾಜ್ಯಕ್ಕೆ ಸಂಬಂಧಿಸಿದ 18 ಬೇಡಿಕೆಗಳ ಮನವಿಯನ್ನು ಸಲ್ಲಿಸಿದರು. ಪ್ರಧಾನಿ ಮೋದಿ ಮತ್ತು ಕೇಂದ್ರ ಸರ್ಕಾರ ಕೂಡಲೇ ರಾಜ್ಯದ ಸಮಸ್ಯೆಗಳಿಗೆ ಸ್ಪಂದಿಸಬೇಕು ಎಂದು ಪತ್ರದಲ್ಲಿ ಸಿಎಂ ಮನವಿ ಮಾಡಿದ್ದಾರೆ.

**ಸಿಎಂ ಪತ್ರದ ಸಾರಾಂಶ:** ಕರ್ನಾಟಕ ಶ್ರೀಮಂತ ಸಾಂಸ್ಕೃತಿಕ ಪರಂಪರೆ ಮತ್ತು ನಾವೀನ್ಯತೆ ಮನೋಭಾವದಿಂದ ರಾಷ್ಟ್ರೀಯ ಅಭಿವೃದ್ಧಿಯ ಪ್ರಮುಖ ಸ್ತಂಭವಾಗಿ ಮುಂದುವರೆದಿದೆ. ಮಾಹಿತಿ ತಂತ್ರಜ್ಞಾನ, ಉತ್ಪಾದನೆ, ಕೃಷಿ ಮತ್ತು ಸೇವಾವಲಯಗಳಲ್ಲಿ ಗಮನಾರ್ಹ ಕೊಡುಗೆ ನೀಡುತ್ತಿದೆ.

ನಮ್ಮ ರಾಜ್ಯವು ಪ್ರಗತಿಪರ ಮತ್ತು ಒಳಗೊಳ್ಳುವ ಭಾರತದ ಆಕಾಂಕ್ಷೆಗಳನ್ನು ಪ್ರತಿಬಿಂಬಿಸುತ್ತದೆ. ಸಹಕಾರಿ ಒಕ್ಕೂಟ ವ್ಯವಸ್ಥೆಯ ಆಶಯಗಳಿಗೆ ರಾಜ್ಯ ಬದ್ಧವಾಗಿದೆ. ರಾಷ್ಟ್ರೀಯ ಬೊಕ್ಕಸಕ್ಕೆ ಅತಿ ಹೆಚ್ಚು ಕೊಡುಗೆ ನೀಡುವ ರಾಜ್ಯಗಳಲ್ಲಿ ಒಂದಾಗಿದೆ. ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕದ ಕೆಲವು ದೀರ್ಘಕಾಲದ ಬಾಕಿ ಉಳಿದಿರುವ ಸಮಸ್ಯೆಗಳಿಗೆ ಕೇಂದ್ರ ಸರ್ಕಾರದ ತುರ್ತು ಗಮನದ ಅಗತ್ಯವಿದೆ ಎಂದು ತಿಳಿಸಿದ್ದಾರೆ.



ಈ ಕಳಕಳಿಗಳನ್ನು ಈಡೇರಿಸುವುದರಿಂದ ಕರ್ನಾಟಕದ ಪ್ರಗತಿ ವೇಗಗೊಳ್ಳುತ್ತದೆ. ಆದರೆ ಅನುಮೋದನೆಗಳು ಮತ್ತು ಹಣಕಾಸು ಬಿಡುಗಡೆಯಲ್ಲಿ ಮರುಕಳಿಸುವ ವಿಳಂಬ ವ್ಯವಸ್ಥಿತ ಅಸಮಾನತೆಯ ಭಾವನೆಯನ್ನು ಮೂಡಿಸಿವೆ. ಈ ಸಮಸ್ಯೆಗಳನ್ನು ಪುಟ 2ಕ್ಕೆ

# ಬಿಹಾರ ಸಿಎಂ ಸಾಮ್ರಾಟ್ ಪ್ರಮಾಣ

**ಪಾಟ್ನಾ:** ಬಿಹಾರದ ನೂತನ ಮುಖ್ಯಮಂತ್ರಿಯಾಗಿ ಬಿಜೆಪಿ ನಾಯಕ ಸಾಮ್ರಾಟ್ ಚೌಧರಿ ಬುಧವಾರ ಪ್ರಮಾಣವಚನ ಸ್ವೀಕರಿಸಿದರು. ಈ ಮೂಲಕ ಬಿಹಾರದ ಬಿಜೆಪಿಯ ಮೊದಲ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ.

ಪಾಟ್ನಾದ ಲೋಕಭವನದಲ್ಲಿ ರಾಜ್ಯಪಾಲ ಸೈಯದ್ ಅತಾ ಹಸ್ನೈನ್ ಅವರು ಸಾಮ್ರಾಟ್ ಚೌಧರಿ ಅವರಿಗೆ ಪ್ರಮಾಣವಚನ ಬೋಧಿಸಿದರು. ಉಪ ಮುಖ್ಯಮಂತ್ರಿಗಳಾಗಿ ಜೆಡಿಯು ಪುಟ 2ಕ್ಕೆ




# ರಾಹುಲ್ ವಿರುದ್ಧವೇ ಮಾಜಿ ಸಚಿವ ರಾಜಣ್ಣ ಪ್ರಶ್ನೆ

**ತುಮಕೂರು:** ಕಾಂಗ್ರೆಸ್ ಶಿಸ್ತಿನ ಪಕ್ಷ. ಈ ಹಿಂದೆ ಸದ್ಗುರು, ರಾಹುಲ್ ಗಾಂಧಿ ಯಾರು, ನನಗೆ ಗೊತ್ತಿಲ್ಲ ಎಂದು ಹೇಳಿದ್ದರು. ಈಗ ರಾಹುಲ್ ಗಾಂಧಿಯೇ ಸದ್ಗುರು ಜೊತೆ ಹೋಗಿ ಕುಳಿತುಕೊಳ್ಳುತ್ತಾರೆ. ಇದು ಶಿಸ್ತು ಮೀರಿದಂತೆ ಅಲ್ವಾ ಎಂದು ಮಾಜಿ ಸಚಿವ ಕೆ.ಎನ್.ರಾಜಣ್ಣ ಪ್ರಶ್ನೆ ಮಾಡಿದರು.


ಮುಖ್ಯಮಂತ್ರಿ ಸಿದ್ದರಾಮಯ್ಯ ಪರವಾಗಿ ಧ್ವನಿ ಎತ್ತಿದ ನಾಯಕರನ್ನೇ ಟಾರ್ಗೆಟ್ ಮಾಡಲ ಗುತ್ತಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಕೆ.ಎನ್.ರಾಜಣ್ಣ, ಕಾಂಗ್ರೆಸ್ ಹೈಕಮಾಂಡ್ ವಿರುದ್ಧ ಆಕ್ರೋಶ ಹೊರಹಾಕಿದರು.

ದೊರೆ ಮಾಡಿದ್ದಕ್ಕೆ ದಂಡ ಇಲ್ಲ ಅನ್ನೋಗಾದೆ ಮಾತಿದೆ. ಕಾಂಗ್ರೆಸ್‌ನಲ್ಲಿ ಹಾಗೆಯೇ ನಡೆಯುತ್ತಿದೆ ಎನ್ನುವ ಮೂಲಕ ರಾಜಣ್ಣ ಕಾಂಗ್ರೆಸ್ ಶಿಸ್ತು ಕ್ರಮದ ವಿರುದ್ಧ ಅಸಮಾಧಾನ ಹೊರ ಹಾಕಿದರು. ನಾನು ಪಕ್ಷಕ್ಕಾಗಿ ದುಡಿದವನು. ಯಾವತ್ತು ಅಧಿಕಾರ ಹುಡುಕಿಕೊಂಡು ಹೋದವನಲ್ಲ. ಅಧಿಕಾರ ಸಿಕ್ಕರೆ ಸ್ವೀಕರಿಸುತ್ತೇನೆ. ಅಧಿಕಾರದ ಲಾಭ ಬಡಜನರಿಗೆ ತಲುಪಿಸುತ್ತೇನೆ. ಅದನ್ನು ಸ್ವಂತಕ್ಕೆ ಬಳಸಿಕೊಳ್ಳಲ್ಲ ಎಂದು ರಾಜಣ್ಣ ಹೇಳಿದರು.



# ಪಕ್ಷ ವಿರೋಧಿ ಚಟುವಟಿಕೆ: ಅಬ್ದುಲ್ ಜಬ್ಬಾರ್ ತಲೆದಂಡ

**ಬೆಂಗಳೂರು:** ವಿಧಾನ ಪರಿಷತ್ ಸದಸ್ಯ ಅಬ್ದುಲ್ ಜಬ್ಬಾರ್ ಅವರನ್ನು ಕಾಂಗ್ರೆಸ್ ಪಕ್ಷದಿಂದ ಅಮಾನತುಗೊಳಿಸಿ ಕೆಪಿಸಿಸಿ ಅಧ್ಯಕ್ಷರಾದ ಡಿಸಿಎಂ ಡಿ.ಕೆ.ಶಿವಕುಮಾರ್ ಆದೇಶ ಹೊರಡಿಸಿದ್ದಾರೆ.



ದಾವಣಗೆರೆ ದಕ್ಷಿಣ ಕ್ಷೇತ್ರದ ಉಪ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ಮಾಡಿದ ಹಿನ್ನೆಲೆಯಲ್ಲಿ ಕಾಂಗ್ರೆಸ್‌ನ ಪ್ರಾಥಮಿಕ ಸದಸ್ಯತ್ವದಿಂದ ಉಚ್ಚಾಟನೆ ಮಾಡಿ ಡಿಕೆಶಿ ಆದೇಶ ಹೊರಡಿಸಿದ್ದಾರೆ. ಅಬ್ದುಲ್ ಜಬ್ಬಾರ್ ಅವರು ಕೆಪಿಸಿಸಿ ಅಲ್ಪಸಂಖ್ಯಾತ ವಿಭಾಗದ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ಡಿ.ಕೆ.ಶಿವಕುಮಾರ್ ಅವರು ರಾಜೀನಾಮೆ ಅಂಗೀಕಾರ ಮಾಡಿದ್ದರು.

ಇದಕ್ಕೂ ಮುನ್ನ ಸುರ್ಜೇವಾಲಾ ಅವರು ಸಚಿವರಾದ ಜಮೀರ್ ಅಹಮದ್, ಪರಿಷತ್ ಸದಸ್ಯರಾದ ಅಬ್ದುಲ್ ಜಬ್ಬಾರ್ ಪುಟ 2ಕ್ಕೆ

# ಆದಿಚುಂಚನಗಿರಿ ಮಠ ನೈತಿಕ ಮೌಲ್ಯಗಳ ದಾರಿದೀಪ

## ಪ್ರಧಾನಿ ನರೇಂದ್ರ ಮೋದಿ ಬಣ್ಣನೆ | ಆದಿಚುಂಚನಗಿರಿಯಲ್ಲಿ ಶ್ರೀಗುರು ಭೈರವೈಕ್ಯ ಮಂದಿರ ಉದ್ಘಾಟನೆ

**ಮಂಡ್ಯ:** ಆದಿಚುಂಚನಗಿರಿ ಮಠ ಆಧ್ಯಾತ್ಮಿಕ ಪರಂಪರೆ ಹೊಂದಿರುವ ಮತ್ತು ನೈತಿಕ ಮೌಲ್ಯಗಳ ದಾರಿದೀಪ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದರು.

ನಾಗಮಂಗಳ ತಾಲ್ಲೂಕಿನ ಆದಿಚುಂಚನಗಿರಿಯಲ್ಲಿ ನಿರ್ಮಿಸಿರುವ ಶ್ರೀ ಗುರು ಭೈರವೈಕ್ಯ ಮಂದಿರವನ್ನು ಬುಧವಾರ ಉದ್ಘಾಟನೆ ಮಾಡಿ, ಕರ್ನಾಟಕದ ಎಲ್ಲಾ ಸಹೋದರ, ಸಹೋದರಿಯರಿಗೆ ನನ್ನ ನಮಸ್ಕಾರಗಳು ಎಂದು ಕನ್ನಡದಲ್ಲೇ ಮಾತು ಆರಂಭಿಸಿದರು. ಕಾಲಭೈರವನ ದರ್ಶನ ಪಡೆದು ಭೈರವೈಕ್ಯ ಮಂದಿರ ಉದ್ಘಾಟಿಸಿದ್ದೇನೆ. ಶಬ್ದದಲ್ಲಿ ಈ ಭಾವವನ್ನು ಹೇಳಲು ಸಾಧ್ಯವಿಲ್ಲ. ಪ್ರತಿ ಸಲ ಕರ್ನಾಟಕಕ್ಕೆ ಬಂದಾಗ ಪ್ರೇರಣೆ ಸಿಗುತ್ತದೆ ಎಂದು ತಿಳಿಸಿದರು.

ಭೈರವೈಕ್ಯ ಮಂದಿರ ಕೇವಲ ಕಟ್ಟಡ ಮಾತ್ರವಲ್ಲ. ಭಾವನೆಗಳ ಸಾಕಾರ. ಸೇವೆ ಸಾಧನ, ಪ್ರೇರಣೆಯ ಕೇಂದ್ರ ಆಗಿದೆ. ಇಲ್ಲಿ ಅನ್ನ ಅಕ್ಷರ, ಆರೋಗ್ಯ, ಪುಟ 3ಕ್ಕೆ




### ಮಂದಿರದ ವಿಶೇಷವೇನು?

**ಮಂಡ್ಯ:** ಆದಿಚುಂಚನಗಿರಿ ಕ್ಷೇತ್ರದಲ್ಲಿ ಪ್ರಧಾನಿ ನರೇಂದ್ರ ಮೋದಿ ಗುರು ಭೈರವೈಕ್ಯ ಮಂದಿರವನ್ನು ಬುಧವಾರ ಉದ್ಘಾಟಿಸಿದರು. ಬಾಲಗಂಗಾಧರನಾಥ ಸ್ವಾಮೀಜಿ ಗದ್ದುಗೆ ಸ್ಥಳದಲ್ಲಿ ನಿರ್ಮಾಣವಾಗಿರುವ ಭೈರವೈಕ್ಯ ಮಂದಿರವು 3 ಆಲಯಗಳನ್ನು ಹೊಂದಿದೆ. ಭೈರವೈಕ್ಯರ ಭವ್ಯ ಮಂದಿರವು ಅನ್ನ, ಪ್ರಾಣ, ಮನೋಮಯ, ವಿಜ್ಞಾನ ಮತ್ತು ಆನಂದಮಯದ ಐದು ಕೋಶಗಳನ್ನು ಮಂದಿರ ಹೊಂದಿದೆ. ದ್ರಾವಿಡ ಶೈಲಿಯಲ್ಲಿ ಮಂದಿರ ನಿರ್ಮಾಣವಾಗಿದೆ. ಹೊಯ್ಸಳ, ಚಾಲುಕ್ಯ, ಚೋಳರು ಮತ್ತು ಗಂಗರ ಕಾಲದ ಶಿಲ್ಪಕಲೆಯ ಸಮಾಗಮದಲ್ಲಿ ಮೂಡಿಬಂದಿರುವ ಪುಟ 3ಕ್ಕೆ



### ಮಂಡ್ಯ ಜನರ ಮಾತು ಸಿಹಿ

**ಮಂಡ್ಯ:** ಕಬ್ಬಿನಂತೆ ಮಂಡ್ಯ ಜನರ ಮಾತೂ ಸಿಹಿ. ಸಕ್ಕರೆ ನಾಡು ಮಂಡ್ಯ ಮಹತ್ವಪೂರ್ಣವಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದರು.

ಆದಿಚುಂಚನಗಿರಿ ಮಠದ ಶ್ರೀಗುರು ಪುಟ 3ಕ್ಕೆ

# ಹ್ಯಾಂಡ್ ಪೋಸ್ಟ್‌ನಲ್ಲಿ ಬೇಕಿದೆ ಬಸ್ ತಂಗುದಾಣ

## ಶೌಚಾಲಯಕ್ಕೂ ಪರದಾಟ । ಸಾರ್ವಜನಿಕರ ಸುರಕ್ಷತೆ ಮರೆತ ಜನಪ್ರತಿನಿಧಿಗಳು

**ಶಿವಕುಮಾರ ತುಂಬಸೋಗೆ**

ಎಚ್.ಡಿ.ಕೋಟೆ: ತಾಲೂಕಿನ ಎಲ್ಲ ಗ್ರಾಮಗಳಿಗೂ ಸಂಪರ್ಕ ಬೆಸೆಯುವ ಹ್ಯಾಂಡ್ ಪೋಸ್ಟ್ ವೃತ್ತದಲ್ಲಿ ಬಸ್ ನಿಲ್ದಾಣವಿಲ್ಲದೆ ಪ್ರಯಾಣಿಕರು ಪರಿತಪಿಸುತ್ತಿದ್ದಾರೆ. ಶಾಲಾ, ಕಾಲೇಜು, ಕೋರ್ಟು, ಕಚೇರಿ, ಉದ್ಯೋಗ, ವೈದ್ಯಕೀಯ, ಸಭೆ, ಸಮಾರಂಭ, ಸಾವು, ನೋವು ಸೇರಿದಂತೆ ಇತರೆ ಕಾರಣಗಳಿಗಾಗಿ ಪ್ರಯಾಣ ಬೆಳೆಸುವವರು ಹ್ಯಾಂಡ್ ಪೋಸ್ಟ್ ಅನ್ನು ಅವಲಂಭಿಸಿದ್ದಾರೆ.

ತಾಲೂಕು ಭೌಗೋಳಿಕವಾಗಿ ವಿಸ್ತೀರ್ಣದಲ್ಲಿ ಮೈಸೂರು ಜಿಲ್ಲೆಯಲ್ಲಿಯೇ ದೊಡ್ಡದಿರುವುದರಿಂದ ಹಾಗೂ ತಾಲೂಕಿನ ಕೇಂದ್ರ ಸ್ಥಾನ, ಒಂದು ಹಳ್ಳಿ, ಮತ್ತೊಂದು ಹಳ್ಳಿಗಳಿಗೂ ಅಂತರವಿರುವುದರಿಂದ, ಜಿಲ್ಲಾ, ತಾಲೂಕು ಕೇಂದ್ರ ಸ್ಥಾನದಿಂದ ಸಾರಿಗೆ ಸಂಪರ್ಕ ಕಲ್ಪಿಸುವುದು ಕಷ್ಟ ಸಾಧ್ಯವಾಗಿದೆ. ಬಹುತೇಕ ಹ್ಯಾಂಡ್ ಪೋಸ್ಟ್ ಅನ್ನು ಸಂಪರ್ಕಿಸಿಯೇ ವಾಹನಗಳು ಚಲಿಸಬೇಕಿರುವುದರಿಂದ ತಾಲೂಕಿನಲ್ಲಿ ಹ್ಯಾಂಡ್ ಪೋಸ್ಟ್ ಕೇಂದ್ರ ಸ್ಥಾನವಾಗಿದೆ.

ಸ್ವಂತ ವಾಹನ ಉಳ್ಳವರು ಯಾವುದೇ ಸಮಸ್ಯೆಯಿಲ್ಲದೆ ತೆರಳುತ್ತಾರೆ. ತಾಲೂಕಿನಲ್ಲಿ ಬಹುತೇಕರು ಬಡವರಿರುವುದರಿಂದ ಸಾರ್ವಜನಿಕ ಸಾರಿಗೆಯನ್ನೇ ಅವಲಂಭಿಸಿದ್ದಾರೆ. ಬಸ್‌ಗಾಗಿ ಮೈಸೂರು, ಸರಗೂರು, ಎಚ್.ಡಿ.ಕೋಟೆ ಮಾರ್ಗ ಫುಟ್‌ಪಾತ್‌ಗಳಲ್ಲಿ ವಯೋವೃದ್ಧರು, ಮಕ್ಕಳು, ಗರ್ಭಿಣಿ, ಬಾಣಂತಿಯರು ಗಂಟೆಗಟ್ಟಲೆ ಕಾದು ನಿಂತಿರುತ್ತಾರೆ.

ಇತ್ತೀಚಿನ ದಿನಗಳಲ್ಲಿ 33, 34, 35 ಡಿಗ್ರಿ ತಾಪಮಾನ ಎಲ್ಲರ ನೆತ್ತಿ ಸುಡುತ್ತಿದೆ. ಮುಂದಿನ ದಿನಗಳಲ್ಲಿ ಬಿಸಿಲಿನ ತಾಪ ಹೆಚ್ಚಾಗಲಿದೆ. ಇದಾವುದರ ಪರಿವಿಲ್ಲದೆ ನಾವು ತಲುಪಿದರೆ ಸಾಕು ಎಂಬಂತೆ ಬಿಸಿಲಿಗೆ ಮೈಯೊಡ್ಡಿ ಬಸ್ ಗಾಗಿ ಕಾಯುತ್ತಿರುತ್ತಾರೆ. ಬಿಸಿಲಿನ ತಾಪ ಹೆಚ್ಚಾದಂತೆ ಪಾರ್ಶ್ವವಾಯು, ನಿರ್ಜಲೀಕರಣ ಸೇರದಂತೆ ಚರ್ಮ ಕಾಯಿಲೆಗಳು ಬರುವ ಸಾಧ್ಯತೆಯಿದೆ. ಮಳೆಗಾಲದಲ್ಲಿ ಶೀತ, ನೆಗಡಿ ಮಾನವನ ದೇಹಕ್ಕೆ ದಾಂಗುಡಿಯಿಟ್ಟು, ಆರೋಗ್ಯ ಸಮಸ್ಯೆ ಉಲ್ಬಣಗೊಳ್ಳಲಿದೆ. ಇಷ್ಟೆಲ್ಲ ಸಮಸ್ಯೆಗಳ ಅರಿವಿದ್ದರೂ ಹಲವು ವರ್ಷಗಳಿಂದ ಈ ಭಾಗದಲ್ಲಿ ಜನರ ಸುರಕ್ಷತೆಗೆ ಬಸ್ ನಿಲ್ದಾಣವಿಲ್ಲದೆ ಜನತೆ ಹೈರಾಣ ಆಗಿದ್ದಾರೆ. ಶಾಸಕರ ಪ್ರದೇಶಾಭಿವೃದ್ಧಿ ನಿಧಿಯಿಂದಲೂ ಬಸ್ ತಂಗುದಾಣ ನಿರ್ಮಾಣಕ್ಕೆ ಅವಕಾಶವಿದ್ದರೂ, ಈವರೆಗೂ ಯಾವೊಬ್ಬ ಶಾಸಕರು ಈ ಕಾರ್ಯಕ್ಕೆ ಮುಂದಾಗಿಲ್ಲ. ಎರಡೂವರೆ ದಶಕಗಳ ಹಿಂದೆ ಸ್ಥಳೀಯ ಪತ್ರಿಕೆ ಸಂಪಾದಕರೊಬ್ಬರು (ಖಾಸಗೀ) ಯವರು ಅಂತರಸಂತೆ ಮಾರ್ಗದಲ್ಲಿ ಪ್ರಯಾಣಿಕರು ಕೂರಲು ತಂಗುದಾಣ ನಿರ್ಮಿಸಿದ್ದರ ಹೊರತು ಈ ಭಾಗದಲ್ಲಿ ಸರ್ಕಾರದ ಸಹ ಭಾಗಿತ್ವದಲ್ಲಿ ಬಸ್ ನಿಲ್ದಾಣ ನಿರ್ಮಾಣಕ್ಕೆ ಜನಪ್ರತಿನಿಧಿಗಳು ಮುಂದಾಗಿಲ್ಲ.








> ಪ್ರಯಾಣಿಕರ ಸಂಕಷ್ಟ ನೋಡಿ, ಶೌಚಾಲಯ ತೆರೆಯುವಂತೆ ಪುರಸಭೆಗೆ ಲಿಖಿತ ಮನವಿ ಮಾಡಿ ವರ್ಷಗಳೇ ಕಳೆದಿದೆ. ಆದರೂ ಯಾವುದೇ ಪ್ರಯೋಜನವಾಗಿಲ್ಲ. ಪ್ರಯಾಣಿಕರ ಜೊತೆಗೆ ವಾಹನ ಚಾಲಕರಿಗೂ ತೊಂದರೆಯಾಗಿದೆ. ಲಕ್ಷಾಂತರ ರೂ. ವ್ಯಯಿಸಿ ಶೌಚಾಲಯ ನಿರ್ಮಿಸಿ, ಸಾರ್ವಜನಿಕರಿಗೆ ಸದ್ಬಳಕೆಯಾಗದೆ ನಿರುಪಯುಕ್ತವಾಗಿರುವುದು ಸಾರ್ವಜನಿಕರ ತೆರಿಗೆ ಹಣ ಪೋಲಾಗಿದೆ.
>
> **–ನಾಗೇಂದ್ರ, ಅಧ್ಯಕ್ಷ** ವಿಶ್ವಜ್ಞಾನಿ ಆಟೋ ಚಾಲಕರ ಸಂಘ, ಅಂತರಸಂತೆ.

### ಶೌಚಕ್ಕೂ ಸಂಕಷ್ಟ: ಪರದಾಡುತ್ತಿರುವ ಪ್ರಯಾಣಿಕರು




ದೂರದೂರುಗಳಿಂದ ಪ್ರಯಾಣ ಮುಗಿಸಿ ಬರುವ, ಹ್ಯಾಂಡ್ ಪೋಸ್ಟ್ ನಿಂದ ಕಿ.ಮೀ ಗಟ್ಟಲೆ ಪ್ರಯಾಣ ಮಾಡುವ ಪ್ರಯಾಣಿಕರು, ಹ್ಯಾಂಡ್ ಪೋಸ್ಟ್ ನ ಮೈಸೂರು, ಸರ ಗೂರು ಮಾರ್ಗ ಶೌಚಾಲಯಗಳಿಲ್ಲದೆ ಮಲ, ಮೂತ್ರ ವಿಸರ್ಜನೆಗೆ ಪರದಾಡುತ್ತಿದ್ದಾರೆ. ಸಾರ್ವಜನಿಕರ ತೆರಿಗೆ ಹಣದಿಂದ 2011ರಲ್ಲಿ ಹೈರಿಗೆ ಗ್ರಾ.ಪಂ ವತಿಯಿಂದ 3.5 ಲಕ್ಷ ರೂ. ವೆಚ್ಚದಲ್ಲಿ ಅಂತರಸಂತೆ ಮಾರ್ಗದಲ್ಲಿ ಸಾರ್ವಜನಿಕ ಶೌಚಾಲಯ ನಿರ್ಮಿಸಿದ್ದು, 2018ರಲ್ಲಿ ಎಚ್.ಡಿ. ಕೋಟೆ ಪುರಸಭೆಗೆ ಹಸ್ತಾಂತರಿಸಲಾಗಿದೆ. ಆದರೆ, ನಿರ್ವಹಣೆ ಮಾಡದೆ ಐದು ವರ್ಷಗಳಿಂದ ಬೀಗ ಜಡಿದಿದ್ದಾರೆ. ಸಕ್ಕರೆ ಕಾಯಿಲೆ ಇರುವವರಿಗೆ ಆಗ್ಗಿಂದಾಗೆ ಮೂತ್ರ ವಿಸರ್ಜನೆ ಮಾಡಬೇಕಾದ ಅನಿವಾರ್ಯತೆಯಿರುವುದರಿಂದ ಶೌಚಾಲಯದ ಹುಡುಕಾಟದಲ್ಲಿ ಸಮಯ ಕಳೆಯುತ್ತಿದ್ದಾರೆ. ಬೇರೆಡೆ ಶೌಚಾಲಯಗಳಲ್ಲಿ ಸಮಾನ್ಯವಾಗಿ ಮೂತ್ರ ವಿಸರ್ಜನೆಗೆ ಯಾವುದೇ ದರ ನಿಗದಿಪಡಿಸಿರುವುದಿಲ್ಲ. ಆದರೆ, ಎಚ್.ಡಿ.ಕೋಟೆ ಮಾರ್ಗದಲ್ಲಿರುವ ಶೌಚಾಲಯದಲ್ಲಿ ಮೂತ್ರ ವಿಸರ್ಜನೆಗೆ 2ರೂ. ಶುಲ್ಕ ವಿಧಿಸಲಾಗಿದೆ. ಅಂತರಸಂತೆ, ಸರಗೂರು, ಮೈಸೂರು ಮಾರ್ಗ ಪುರುಷ ಪ್ರಯಾಣಿಕರು ಅರ್ಧ ಮೈಲಿ ನಡೆದು ಮೂತ್ರ ವಿಸರ್ಜಿಸಿದರೆ, ಮಹಿಳೆಯರ ಸ್ಥಿತಿ ಹೇಳತ್ತೀರದ್ದಾಗಿದೆ. ಸರಗೂರು, ಅಂತರಸಂತೆ ಮಾರ್ಗ ಕಾಡಂಚಿನ ಹಾಗೂ ಗಡಿ ಭಾಗದ ಗ್ರಾಮಗಳಿಗೆ ಗಂಟೆ ಗಟ್ಟಲೆ ವಾಹನದಲ್ಲಿ ಕುಳಿತು ಪ್ರಯಾಣ ಮಾಡುವುದರಿಂದ, ಅನಿವಾರ್ಯವಾಗಿ ಮಲ, ಮೂತ್ರ ತಡೆದುಕೊಂಡೇ ಸಾರ್ವಜನಿಕರು ಪ್ರಯಾಣ ಮಾಡುತ್ತಿದ್ದಾರೆ. ಹೊರಬರುವ ಮೂತ್ರವನ್ನು ಬಲವಂತವಾಗಿ ತಡೆದರೆ, ಕಿಡ್ನಿಗಳ ಮೇಲೆ ಅದರ ಒತ್ತಡ ಹೆಚ್ಚಾಗಿ ಕಿಡ್ನಿ ವೈಫಲ್ಯ ಆಗಬಹುದು. ಮಲ ತಡೆಯುವುದರಿಂದ ಅದರ ಸೋಂಕು ಹರಡಿ ಇನ್ನಷ್ಟು ಸಮಸ್ಯೆಗೆ ಕಾರಣವಾಗಲಿದೆ. ಆದ್ದರಿಂದ, ಹ್ಯಾಂಡ್ ಪೋಸ್ಟ್ ವೃತ್ತದ ಮೂರು ಮಾರ್ಗಗಳಲ್ಲಿ ಶೌಚಾಲಯ ನಿರ್ಮಾಣದ ಹೊಣೆ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಮೇಲಿದೆ.




### ವ್ಯಾಪಾರ ವಹಿವಾಟಿಗೆ ಅಡಚಣೆ

ಬಸ್ ಗಾಗಿ ಪ್ರಯಾಣಿಕರು ಬಿಸಲು, ಮಳೆಯಿಂದ ರಕ್ಷಿಸಿಕೊಳ್ಳಲು ಫುಟ್ ಫಾತ್ ಸಮೀಪದ ಅಂಗಡಿಗಳ ಮುಂಭಾಗ ಆಶ್ರಯ ಪಡೆಯುತ್ತಿರುತ್ತಾರೆ. ಜನರು ನಿಲ್ಲುವುದರಿಂದ ಗ್ರಾಹಕರಿಗೆ ಅಂಗಡಿಗಳು ಕಾಣದಿರುವುದರಿಂದ, ವ್ಯಾಪಾರ, ವಹಿವಾಟು ಕುಸಿಯುವುದರಿಂದ ಅಂಗಡಿ ಮಾಲೀಕರು ಗೊಣಗಾಡುತ್ತಾ ಪ್ರಯಾಣಿಕರನ್ನು ಬೈಯುವ ದೃಶ್ಯಗಳು ಸಾಮಾನ್ಯವಾಗಿರುತ್ತವೆ. ತಾಲೂಕಿನಲ್ಲಿ ಪ್ರಮುಖ ವಾಣಿಜ್ಯ ಕೇಂದ್ರವಾಗಿರುವ ಹ್ಯಾಂಡ್ ಪೋಸ್ಟ್ ಅಲ್ಲಿ ಬಸ್ ತಂಗುದಾಣಗಳಿಲ್ಲದೆ ವ್ಯಾಪಾರ, ವಹಿವಾಟು ಕುಂಠಿತವಾಗಲು ಕಾರಣವಾಗಿದೆ. ಇತ್ತ ಸಮಯಕ್ಕೆ ಸರಿಯಾಗಿ ಸಾರಿಗೆ ವ್ಯವಸ್ಥೆಯಿಲ್ಲದೆ, ಅತ್ತ ಸುರಕ್ಷತೆಯೂ ಇಲ್ಲದೇ ಪ್ರಯಾಣಿಕರ ಸ್ಥಿತಿ ಚಿಂತಾಜನಕವಾಗಿದೆ.

ಮೊದಲ ಪುಟದಿಂದ

### ವಸೂಲಿ ದಂಧೆಗೆ ಸಾಕ್ಷಿ ಕೊಡಿ

ಮಾಡಲಿ. ಆಗ ಅದಕ್ಕೆ ಬೆಲೆ ಇರುತ್ತದೆ. ನಾನು ಈಗ ಕುಮಾರಸ್ವಾಮಿ ವಸೂಲಿ ಮಾಡುತ್ತಿದ್ದಾರೆ ಎಂದು ಹೇಳಬಹುದೇ? ಸಾಕ್ಷಿಯಿಲ್ಲದೆ ಆರೋಪ ಮಾಡುವುದು ಸುಲಭ. ನಾನು ಅನಗತ್ಯವಾಗಿ ಸಾಕ್ಷಿಗಳಿಲ್ಲದೆ ಯಾರ ಮೇಲೂ ಆರೋಪ ಮಾಡುವುದಿಲ್ಲ ಎಂದು ಛೇಡಿಸಿದರು.

ಕಾಂಗ್ರೆಸ್ ಸರ್ಕಾರ ಬಂದಾಗಿನಿಂದಲೂ ವಿರೋಧ ಪಕ್ಷಗಳು ಇಲ್ಲ ಸಲ್ಲದ ಆರೋಪ ಮಾಡಿ ಸಾರ್ವಜನಿಕರಲ್ಲಿ ನಮ್ಮ ಬಗ್ಗೆ ಕೆಟ್ಟ ಅಭಿಪ್ರಾಯ ಮೂಡಿಸಬೇಕೆಂದು ಪ್ರಯತ್ನಿಸುತ್ತಿದ್ದಾರೆ. ನನ್ನ ತಂದೆ ನನ್ನನ್ನ ವಸೂಲಿಗಾಗಿ ನೇಮಿಸಿಕೊಂಡಿಲ್ಲ. ನನ್ನ ತಂದೆಯ ಪರವಾಗಿ ನಮ್ಮ ಕ್ಷೇತ್ರದಲ್ಲಿ ನಾನು ಕೆಲಸ ಮಾಡುತ್ತಿದ್ದೇನೆ ಎಂದು ಕಿಡಿಕಾರಿದರು.

ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಒತ್ತಡಕ್ಕೆ ಮಣಿದು ಮೇಲ್ಮನವಿ ಹಾಕಿದ್ದಾರೆ. ಅವರಿಗೆ ಮೇಲ್ಮನವಿ ಸಲ್ಲಿಸಲು ಇಡಿಗೆ ಅರ್ಹತೆಯೇ ಇಲ್ಲ ಎಂದು ಟೀಕಿಸಿದರು.

### ಕುಟುಂಬ ರಾಜಕಾರಣ ಅಲ್ಲ!

ಪಕ್ಷದ ರಾಜ್ಯಾಧ್ಯಕ್ಷ, ಎಂಎಲ್‌ಎ, ಎಂಪಿ ಮಾಡುವುದು ಕುಟುಂಬ ರಾಜಕಾರಣ. ನಮ್ಮದಲ್ಲ ಎಂದು ಕುಟುಂಬ ರಾಜಕಾರಣಕ್ಕೆ ಹೊಸ ವ್ಯಾಖ್ಯಾನವನ್ನು ಡಾ.ಯತೀಂದ್ರ ನೀಡುವ ಮೂಲಕ ಕುಮಾರಸ್ವಾಮಿ ಅವರಿಗೆ ತಿರುಗೇಟು ನೀಡಿದರು.

ನಮ್ಮ ತಂದೆಯೇ 5 ವರ್ಷ ಸಿಎಂ ಎಂದು ಪುನರುಚ್ಚರಿಸಿದ ಯತೀಂದ್ರ, ಅಧಿವೇಶನದಲ್ಲಿ ಖುದ್ದು ಸಿಎಂ ಈ ವಿಚಾರವನ್ನ ಸ್ಪಷ್ಟಪಡಿಸಿದ್ದಾರೆ. ಸಿಎಂ ಖುದ್ದಾಗಿ ಹೇಳಿದ ಮೇಲೆ ಮತ್ತೆ ಚರ್ಚೆ ಇಲ್ಲ. ಸಚಿವ ಸಂಪುಟ ಪುನಾರಚನೆಗಾಗಿ ಶಾಸಕರು ದೆಹಲಿಗೆ ಹೋಗಿದ್ದಾರೆ. ಶಾಸಕರ ದೆಹಲಿ ಪ್ರವಾಸಕ್ಕೂ ಸಿಎಂ ಸ್ಥಾನಕ್ಕೂ ಸಂಬಂಧವಿಲ್ಲ ಎಂದರು. ಉಪ ಚುನಾವಣೆ ಫಲಿತಾಂಶಕ್ಕೂ ಸಿಎಂ ಸ್ಥಾನಕ್ಕೂ ಸಂಬಂಧವಿಲ್ಲ. ಸರಕಾರ ಭದ್ರವಾಗಿದೆ. ಸಿಎಂ ಸ್ಥಾನವೂ ಭದ್ರವಾಗಿದೆ. ರಾಜ್ಯ ಸರ್ಕಾರಕ್ಕೆ ಎರಡೂವರೆ ವರ್ಷ ಪೂರ್ಣಗೊಂಡಿರುವ ಹಿನ್ನಲ್ಲೆಯಲ್ಲಿ ಸಂಪುಟ ಪುನಾರಚನೆ ಆಗಬೇಕೆಂದು ಕೆಲವು ಶಾಸಕರು ಕೇಳುತ್ತಿದ್ದಾರೆ. ಸಂಪುಟ ಪುನರ್ ರಚನೆ ಆಗಬೇಕಿದೆ. ಅದು ಯಾವಾಗ ಎಂದು ಹೈಕಮಾಂಡ್ ತೀರ್ಮಾನ ಮಾಡುತ್ತದೆ. ಆದರೆ, ಸಚಿವ ಸ್ಥಾನದ ಆಕಾಂಕ್ಷಿ ನಾನಲ್ಲ. ನಮ್ಮ ತಂದೆ ಸಿಎಂ ಆಗಿರುವವರೆಗೂ ನಾನು ಸಚಿವ ಸ್ಥಾನ ಕೇಳುವುದಿಲ್ಲ ಎಂದು ಹೇಳಿದರು.

### ಬಿಹಾರ ಸಿಎಂ ಸಾಮ್ರಾಟ್ ಪ್ರಮಾಣ

ನಾಯಕರಾದ ವಿಜಯ್ ಚೌಧರಿ ಮತ್ತು ಬಿಜೇಂದ್ರ ಯಾದವ್ ಪ್ರಮಾಣ ವಚನ ಸ್ವೀಕರಿಸಿದರು. ರಾಜ್ಯಸಭೆಗೆ ಆಯ್ಕೆಯಾದ ಹಿನ್ನೆಲೆ ಸಿಎಂ ಸ್ಥಾನಕ್ಕೆ ನಿತೀಶ್ ಕುಮಾರ್ ರಾಜೀನಾಮೆ ನೀಡಿದ್ದರು. ತಮ್ಮ ಸಚಿವ ಸಂಪುಟವನ್ನು ವಿಸರ್ಜಿಸಿದ ನಂತರ ಅವರು ಏ.14ರ ಮಧ್ಯಾಹ್ನ ಲೋಕಭವನದಲ್ಲಿ ರಾಜ್ಯಪಾಲರಾದ ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸೈಯದ್ ಅತಾ ಹಸ್ನೈನ್ ಅವರಿಗೆ ರಾಜೀನಾಮೆ ಸಲ್ಲಿಸಿದ್ದರು.

### ಕಾಂಗ್ರೆಸ್‌ನಲ್ಲಿ ಬಿರುಗಾಳಿ

ಜಾತ್ಯತೀತ ಹಣಪಟ್ಟಿಗೆ ಸಹಕಾರಿ. ಇದಕ್ಕೆಲ್ಲ ಕೈ ನಾಯಕರೇ ಅಡಿಪಾಯ ಹಾಕಿಕೊಡುತ್ತಿದ್ದಾರೆ ಎಂಬುದು ಖಚಿತ. ದಾವಣಗೆರೆ ಮುಸ್ಲಿಮರು ಅಚ್ಚ ಕನ್ನಡಿಗರು. ಗೋಕಾಕ್ ಚಳವಳಿಯಲ್ಲಿ ಕನ್ನಡದ ಪರ ನಿಂತವರು ಎಂಬುದನ್ನು ಮರೆಯಬಾರದು.

### ಶಾಸಕ ವಿನಯ್ ಕುಲಕರ್ಣಿ ದೋಷಿ

ವಿಚಾರಣೆ ನಡೆಸಿದ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಪು ಪ್ರಕಟಿಸಿದೆ. ನಾಳೆ ಶಿಕ್ಷೆ ಪ್ರಮಾಣ ಕುರಿತಂತೆ ವಾದ ಮಂಡನೆ ನಡೆಯಲಿದೆ.

ಕಳೆದ ಮಾರ್ಚ್ ಕೊನೆಯ ವಾರದಲ್ಲಿ ವಾದ, ಪ್ರತಿವಾದ ಆಲಿಸಿದ್ದ ನ್ಯಾಯಾಲಯ, ಪ್ರಾಸಿಕ್ಯೂಷನ್ ಮತ್ತು ಆರೋಪಿಗಳ ಪರ ವಕೀಲರಿಗೆ ಹೆಚ್ಚುವರಿ ಲಿಖಿತ ವಾದ ಸಲ್ಲಿಕೆ ಮಾಡಲು ಅವಕಾಶ ನೀಡಿತ್ತು. ಅದರಂತೆ ಏಪ್ರಿಲ್ 2 ರಂದು ಎಲ್ಲರೂ ಲಿಖಿತ ವಾದ ಸಲ್ಲಿಸಿದ ಬಳಿಕ ಏಪ್ರಿಲ್ 15ಕ್ಕೆ ತೀರ್ಪು ಪ್ರಕಟ ಮಾಡುವುದಾಗಿ ಕೋರ್ಟ್ ಹೇಳಿತ್ತು. ಇಂದು ಪ್ರಕರಣ ಎಲ್ಲಾ 21 ಆರೋಪಿಗಳು ನ್ಯಾಯಾಲಯದ ಮುಂದೆ ಹಾಜರಿದ್ದರು.

ಧಾರವಾಡ ಜಿಲ್ಲಾ ಪಂಚಾಯತ್ ಸದಸ್ಯ ಯೋಗೇಶ್ ಗೌಡ ಅವರನ್ನು 2016ರ ಜೂನ್ 15ರಂದು ಅವರ ಮಾಲಿಕತ್ವದ ಜಿಮ್‌ನಲ್ಲಿ ಭೀಕರವಾಗಿ ಹತ್ಯೆ ಮಾಡಲಾಗಿತ್ತು. ಆ ಸಮಯದಲ್ಲಿ ಕುಲಕರ್ಣಿ ಅಂದಿನ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಸಚಿವರಾಗಿದ್ದರು. ವಿನಯ್ ಕುಲಕರ್ಣಿ ಎ15 ಆರೋಪಿಯಾಗಿದ್ದರು. ಒಳಸಂಚು ಹಿನ್ನೆಲೆಯಲ್ಲಿ ಅಪರಾಧಿ ಎಂದು ಘೋಷಿಸಲಾಗಿದೆ.

ಸೆಪ್ಟೆಂಬರ್ 2019ರಲ್ಲಿ ರಾಜ್ಯ ಸರ್ಕಾರ ಪ್ರಕರಣದ ತನಿಖೆಯನ್ನು ಸಿಬಿಐಗೆ ಹಸ್ತಾಂತರಿಸಿತ್ತು. ಈ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಕೈವಾಡ ಇದೆ ಎಂದು ಆರೋಪಿಸಿ 2020ರ ನವೆಂಬರ್ 5ರಂದು ಸಿಬಿಐ ಅಧಿಕಾರಿಗಳು ಅವರನ್ನು ಬಂಧಿಸಿದ್ದರು. ಒಂಬತ್ತು ತಿಂಗಳ ಕಾಲ ಜೈಲಿನಲ್ಲಿದ್ದ ನಂತರ, ಕುಲಕರ್ಣಿ ಅವರನ್ನು 2021ರ ಆಗಸ್ಟ್ 13ರಂದು ಬಿಡುಗಡೆ ಮಾಡಲಾಯಿತು.

### ಇಲವಾಲದಲ್ಲಿ ಮ್ಯೂಸಿಯಂ

ಮೈಸೂರು ಐತಿಹಾಸಿಕ ಪ್ರವಾಸಿ ತಾಣವಾಗಿದೆ. ಥೀಮ್ ಪಾರ್ಕ್ (ಮ್ಯೂಸಿಯಂ) ಹೆಚ್ಚಿನ ಜನರನ್ನು ಆಕರ್ಷಿಸುವ ಜೊತೆಗೆ ಹೊಸತನದಿಂದ ಕೂಡಿರಬೇಕು. ಯೋಜನೆಯ ನೀಲಿನಕ್ಷೆ ತಯಾರಿಸುವ ಮೊದಲು, ಮುಖ್ಯ ವ್ಯಕ್ತಿಗಳಿಂದ ಮಾಹಿತಿ ಕ್ರೋಢೀಕರಿಸಬೇಕು. ಉತ್ತಮವಾಗಿ ಮೂಡಿ ಬರುವಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

ಬಾಬಾಸಾಹೇಬರ ಹುಟ್ಟಿನಿಂದ ಪರಿನಿರ್ವಾಣದವರೆಗೆ ಅವರ ಕಾಲಘಟ್ಟದ ಮುಖ್ಯ ಸಂಗತಿಗಳು ಸೇರಿದಂತೆ ಶಾಹೂ ಮಹಾರಾಜರು ಹಾಗೂ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಚಿಂತನೆಗಳನ್ನೂ ಮ್ಯೂಸಿಯಂನಲ್ಲಿ ಅನಾವರಣಗೊಳಿಸಬೇಕು. ಸಾಮಾಜಿಕ ನ್ಯಾಯ ನೀಡಲು ಅಂಬೇಡ್ಕರ್ ರಚಿಸಿರುವ ಸಂವಿಧಾನದ ಬಗ್ಗೆ ವಿಶ್ವದ ಹಲವು ಗಣ್ಯರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಅವೂ ಮ್ಯೂಸಿಯಂನಲ್ಲಿ ಅನಾವರಣವಾಗಬೇಕು ಎಂದು ನಿರ್ದೇಶನ ನೀಡಿದರು.

ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಲ್ಲಾ ಪಂಚಾಯಿತಿ ಸಿಇಒ ಎಸ್.ಯುಕೇಶ್‌ಕುಮಾರ್, ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸೀಫ್, ಮೈಸೂರು ಅಭಿವೃದ್ಧಿ ಪ್ರಾಧಿಕಾರದ (ಎಂಡಿಎ) ಆಯುಕ್ತ ಕೆ.ಆರ್.ರಕ್ಷಿತ್ ಇತರರು ಭಾಗವಹಿಸಿದ್ದರು.

### ಕೊಲೆ ನಡೆದಿದ್ದು ಹೇಗೆ?

ಬಲವಾದ ಹೊಡೆತಗಳು, ಕುತ್ತಿಗೆಗೆ ಮೂರು, ಎದೆಯ ಮೇಲೆ, ಬಲಗೈಗೆ, ಪಕ್ಕಡಿಗಳಿಗೆ, ಮೊಣಕಾಲಿಗೆ ಸೇರಿದಂತೆ ಒಟ್ಟು 26 ಕಡೆಗಳಲ್ಲಿ ದುಷ್ಕರ್ಮಿಗಳು ಹೊಡೆದಿದ್ದರು. ಸ್ಥಳಕ್ಕೆ ಆಗಮಿಸಿದ್ದ ಪತ್ನಿ ಮಲ್ಲಮ್ಮ ಮತ್ತು ಸಹೋದರ ಗುರುನಾಥಗೌಡ ಅವರ ರೋದನ ಮುಗಿಲು ಮುಟ್ಟಿತ್ತು. ಶವವನ್ನು ಜಿಲ್ಲಾ ಆಸ್ಪತ್ರೆ ಸಾಗಿಸಲಾಯಿತ್ತು. ನಂತರ ಮರಣೋತ್ತರ ಪರೀಕ್ಷೆ ನಡೆಸಿ ಅಲ್ಲೇ ಸಾರ್ವಜನಿಕ ದರ್ಶನಕ್ಕೆ ಅನುವು ಮಾಡಿಕೊಡಲಾಗಿತ್ತು.

### ಜಬ್ಬಾರ್ ತಲೆದಂಡ

ಹಾಗೂ ನಸೀರ್ ಅಹಮದ್ ವಿರುದ್ಧ ಎರಡು ಪುಟಗಳ ಸಂಪೂರ್ಣ ವರದಿ ಸಮೇತ ಹೈಕಮಾಂಡ್‌ಗೆ ದೂರು ಸಲ್ಲಿಸಿದ್ದಾರೆ. ಮೂವರ ವಿರುದ್ಧ ಕ್ರಮವಹಿಸುವಂತೆ ಉಲ್ಲೇಖಿಸಿದ್ದರು. ಈಗಾಗಲೇ ಇಬ್ಬರ ವಿರುದ್ಧ ಕ್ರಮಕ್ಕೈಗೊಳ್ಳಲಾಗಿದೆ. ಸಚಿವ ಜಮೀರ್ ಅಹ್ಮದ್ ತಲೆದಂಡಕ್ಕೆ ವೇದಿಕೆ ಸಿದ್ಧವಾಗಿದೆ ಎನ್ನಲಾಗಿದೆ.

## ಏ.18ರಿಂದ ವಿಜ್ಞಾನ ಶಿಬಿರ




ಮೈಸೂರು: ಆರ್ಷಾ ಸ್ಪೇಸ್ ಸ್ಕೂಲ್ಸ್ ಹಾಗೂ ಭಾರತೀಯ ಬಾಹ್ಯಾಕಾಶ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆ(ಐಐಎಸ್‌ಟಿ) ಸಹಯೋಗದಲ್ಲಿ ಇಲ್ಲಿನ ಹೆಬ್ಬಾಳದ ವಿವೇಕಾನಂದ ಲೀಡರ್‌ಶಿಪ್ ಡೆವಲಪ್‌ಮೆಂಟ್ ಸಂಸ್ಥೆಯಲ್ಲಿ ಏ.18ರಿಂದ 20ರವರೆಗೆ ವಸತಿಯುತ ಬ್ಯಾಹ್ಯಾಕಾಶ ವಿಜ್ಞಾನ ಶಿಬಿರ ಆಯೋಜಿಸಲಾಗುತ್ತಿದೆ' ಎಂದು ಆರ್ಷಾ ಸ್ಕೂಲ್ಸ್ ಸ್ಥಾಪಕ ಡೆನ್ನಿ ಅಮೃತಗಿರಿ ತಿಳಿಸಿದರು.

ನಗರದಲ್ಲಿ ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ವಿಜ್ಞಾನದಲ್ಲಿ ಆಸಕ್ತಿ ಹೊಂದಿರುವ 7ರಿಂದ 9 ತರಗತಿಯ ವಿದ್ಯಾರ್ಥಿಗಳಿಗೆ ಶಿಬಿರ ಆಯೋಜಿಸುತ್ತಿದ್ದು, ಹೆಣ್ಣುಮಕ್ಕಳು ಹಾಗೂ ಗ್ರಾಮೀಣ ಹಿನ್ನೆಲೆಯ, ಆರ್ಥಿಕವಾಗಿ ಹಿಂದುಳಿದವರನ್ನು ಆಯ್ಕೆ ಮಾಡಲಾಗಿದೆ. ಐಐಎಸ್‌ಟಿ, ಇಸ್ರೋ ವಿಜ್ಞಾನಿಗಳು ಮಕ್ಕಳಿಗೆ ಮಾಹಿತಿ ನೀಡುವರು' ಎಂದರು. 'ಆರ್ಯಭಟ ಜನ್ಮದಿನಾಚರಣೆ ಪ್ರಯುಕ್ತ ನಡೆಯುವ ಈ ಶಿಬಿರ ಸಂಪೂರ್ಣ ಉಚಿತವಾಗಿರುತ್ತದೆ. ಭವಿಷ್ಯದಲ್ಲೂ ಅನೇಕ ಯೋಜನೆಯಲ್ಲಿ ಹಮ್ಮಿಕೊಂಡಿದ್ದು, ಸ್ಕೂಲ್ ಬಗ್ಗೆ ತಿಳಿದುಕೊಳ್ಳಲು ಮೊ.88845 51521 ಸಂಪರ್ಕಿಸಬಹುದು' ಎಂದು ತಿಳೀಸಿದರು.

ಸುದ್ದಿಗೋಷ್ಠಿಯಲ್ಲಿ ಕಾರ್ಯಾಚರಣೆ ವಿಭಾಗದ ನಿರ್ದೇಶಕ ನಿಶಾಂತ್, ಸ್ವಯಂಸೇವಕ ಚಿರಾಗ್ ಇದ್ದರು.

## ಶತಮಾನದ ಮಹಾಸಂತ ಶಿವಕುಮಾರ ಸ್ವಾಮೀಜಿ

ಮೈಸೂರು: ಪದ್ಮಭೂಷಣ ಪ್ರಶಸ್ತಿ ಪುರಸ್ಕೃತ ಡಾ.ಶಿವಕುಮಾರ ಸ್ವಾಮೀಜಿ ಈ ಶತಮಾನದ ಮಹಾ ಸಂತ ಎಂದು ಮೈಸೂರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಡಾ.ಜಯಪ್ಪ ಹೊನ್ನಾಳಿ ಹೇಳಿದರು.

ನಮನ ಕಲಾ ಮಂಟಪದಲ್ಲಿ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ ಏರ್ಪಡಿಸಿದ್ದ ಶಿವಕುಮಾರ ಸ್ವಾಮೀಜಿ 119ನೇ ಜಯಂತಿ ಮಹೋತ್ಸವ ಹಾಗೂ ಶ್ರೀ ಸಿದ್ಧಗಂಗಾ ಸಿರಿ ಪ್ರಶಸ್ತಿ ಪ್ರದಾನ ಸಮಾರಂಭದ ಪ್ರಧಾನ ಭಾಷಣಕಾರರಾಗಿ ಮಾತನಾಡಿದರು. ತ್ರಿವಿಧ ದಾಸೋಹಿ ಅಷ್ಟೇ ಅಲ್ಲ, ದಿವ್ಯ ದಾರ್ಶನಿಕರು, ಶ್ರೇಷ್ಠ ಶಿಕ್ಷಣ ತಜ್ಞರೂ ಮತ್ತು ಮಹಾ ಮಾನವತಾವಾದಿಗಳೂ ಆಗಿದ್ದರೆಂದರು.

ಹಿರಿಯ ವೀರಗಾಸೆ ಕಲಾವಿದ ಅಂಬಳೆ ಶಿವಣ್ಣ ಅಧ್ಯಕ್ಷತೆ ವಹಿಸಿದ್ದರು. ಈ ಸಮಾರಂಭದಲ್ಲಿ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಕಾಂಗ್ರೆಸ್ ಮುಖಂಡರಾದ ಎನ್.ಎಂ.ನವೀನ್ ಕುಮಾರ್, ಅರಸು ಜಾಗೃತಿ ಅಕಾಡೆಮಿಯ ಗೌರವ ಕಾರ್ಯದರ್ಶಿ ಮತ್ತು ಸಾಹಿತಿ ಡಾ.ಎಂ.ಜಿ.ಆರ್.ಅರಸ್ ಹಾಗೂ ಕದಳಿ ವೇದಿಕೆ ಅಧ್ಯಕ್ಷೆ ಶೋಭಾರಾಣಿ ಜೈಪ್ರ ಕಾಶ್, ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾ ನದ ಸಂಸ್ಥಾಪಕ ಅಧ್ಯಕ್ಷರಾದ ಬಸವರಾಜೇಂದ್ರ ಸ್ವಾಮಿ ಮುಂತಾದವರಿದ್ದರು. ಸಾಹಿತ್ಯ ಕ್ಷೇತ್ರದ ಡಾ.ಕೆ.ಲೀಲಾ ಪ್ರಕಾಶ್, ವೈದ್ಯಕೀಯ ಕ್ಷೇತ್ರದ ಗಿರೀಶ್ ಎಸ್.ಇ., ಶಿಕ್ಷಣ ಕ್ಷೇತ್ರದ ಎಂ.ಸಿ. ಮಂಜುಳ, ಕಲಾ ಮತ್ತು ಧಾರ್ಮಿಕ ಕ್ಷೇತ್ರದ ಸುಮ ರಾವ್, ಸಾರ್ವಜನಿಕ ಸೇವಾಕ್ಷೇತ್ರದ ಗೋಪಾಲ್, ಸಮಾಜ ಸೇವಾಕ್ಷೇತ್ರದ ತನುಜ ಮಹೇಶ್, ಗೋಲ್ಡನ್ ಟಿ.ಸುರೇಶ್ ಹಾಗೂ ಮಾಧ್ಯಮ ಕ್ಷೇತ್ರದ ಲೋಕೇಶ್ ಹಾಲಹಳ್ಳಿಗೆ ಶ್ರೀ ಸಿದ್ಧಗಂಗಾ ಸಿರಿ ಪ್ರಶಸ್ತಿ ಪ್ರದಾನ ಮಾಡಲಾಯಿತು. ಚನ್ನಬಸಪ್ಪ ಪ್ರಾರ್ಥನೆ ಮಾಡಿದರು, ಸುಗಂಧಮ್ಮ ಜಯಪ್ಪ ಹಾಡಿದರು. ಬಸವರಾಜೇಂದ್ರ ಸ್ವಾಮಿ ನಿರೂಪಿಸಿದರು.




### ಡಾ. ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ

## ಡಾ.ಬಿ.ಆರ್.ಅಂಬೇಡ್ಕರ್ ಮಹತ್ವದ ಚಿಂತನೆಗಳ ಗಣಿ: ಡಾ.ರೂಪಾ ರೈನಾ

ರಾಮನಗರ/ಕನಕಪುರ: ಭಾರತ ದೇಶದ ಇತಿಹಾಸದಲ್ಲಿ ಅನೇಕ ಮಹಾನ್ ವ್ಯಕ್ತಿತ್ವಗಳು ಉದಯಿಸಿ ತಮ್ಮ ಚಿಂತನೆಗಳ ಮೂಲಕ ಸಮಾಜದ ಮೇಲೆ ಅಚ್ಚಳಿಯದ ಗುರುತು ಮೂಡಿಸಿದ್ದಾರೆ. ಅಂತಹ ಮಹಾನ್ ಚೇತನರಲ್ಲಿ ಪ್ರಮುಖರಾದವರು ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಎಂದು ರಾಜ್ಯಶಾಸ್ತ್ರ ಪ್ರಾಧ್ಯಾಪಕಿ ಡಾ.ರೂಪೊ ರೈನ ತಿಳಿಸಿದರು.

ಕನಕಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ ಡಾ. ಅಂಬೇಡ್ಕರ್ ಅವರ 135ನೇ ಜನ್ಮದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಅವರು ಮಾತನಾಡಿದರು. ಅಂಬೇಡ್ಕರ್ ಕೇವಲ ಸಂವಿಧಾನ ರಚನೆಗಾರರಷ್ಟೇ ಅಲ್ಲ, ಸಾಮಾಜಿಕ ನ್ಯಾಯ, ಸಮಾನತೆ ಮತ್ತು ಮಾನವ ಹಕ್ಕುಗಳ ಪರ ಹೋರಾಡಿದ ಕ್ರಾಂತಿಕಾರಿ ಚಿಂತಕರೂ ಹೌದು. ಅವರ ಜೀವನ ಮತ್ತು ಚಿಂತನೆಗಳು ಇಂದಿಗೂ ನಮ್ಮ ಸಮಾಜಕ್ಕೆ ದಾರಿದೀಪವಾಗಿವೆ ಎಂದು ತಿಳಿಸಿದರು.




ಅಂಬೇಡ್ಕರ್ ಅವರ ಚಿಂತನೆಗಳನ್ನು ವಿಶ್ಲೇಷಿಸಿದ ಅವರು, ಅಂಬೇಡ್ಕರ್ ಕೇವಲ ಒಂದು ಸಮುದಾಯದ ನಾಯಕನಲ್ಲ, ಸಂಪೂರ್ಣ ಮಾನವಕುಲದ ಮಾರ್ಗದರ್ಶಕ. ಅವರ ದೃಷ್ಟಿಯಲ್ಲಿ ಶಿಕ್ಷಣವೇ ಸಮಾಜದ ಪರಿವರ್ತನೆಯ ಪ್ರಮುಖ ಸಾಧನ. "ಶಿಕ್ಷಣ ಪಡೆಯಿರಿ, ಸಂಘಟಿತರಾಗಿ, ಹೋರಾಡಿ" ಎಂಬ ಅವರ ಘೋಷಣೆ ಇಂದಿಗೂ ಯುವಜನತೆಗೆ ಪ್ರೇರಣೆ ನೀಡುತ್ತದೆ ಎಂದು ತಿಳಿಸಿದರು.

ಅಂಬೇಡ್ಕರ್ ಅವರು ಸಮಾಜದಲ್ಲಿ ಸಮಾನತೆ ಸಾಧಿಸಲು ಶಿಕ್ಷಣವನ್ನು ಅತ್ಯಂತ ಪ್ರಮುಖ ಆಯುಧವೆಂದು ಪರಿಗಣಿಸಿದರು. ಅವರು ತಮ್ಮ ಜೀವನದಲ್ಲಿ ಎಷ್ಟೇ ಅಡೆತಡೆಗಳು ಬಂದರೂ, ವಿದ್ಯಾಭ್ಯಾಸವನ್ನು ಕೈಬಿಡಲಿಲ್ಲ. ಕೊಲಂಬಿಯಾ ವಿಶ್ವವಿದ್ಯಾಲಯ ಮತ್ತು ಲಂಡನ್ ಶಾಲಾ ಆಫ್ ಎಕಾನಾಮಿಕ್ಸ್ ನಲ್ಲಿ ಅವರು ಉನ್ನತ ಶಿಕ್ಷಣ ಪಡೆದರು. ಅವರ ಈ ಸಾಧನೆಗಳು ಶೋಷಿತ ಸಮುದಾಯದ ಯುವಕರಿಗೆ ಹೊಸ ದಾರಿಯನ್ನು ತೋರಿಸಿವೆ ಎಂದವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲ ಡಾ. ಶಾಮಲ ಬಿ ಅವರು ಮಾತನಾಡಿ, ಅಂಬೇಡ್ಕರ್ ದೇಶಕ್ಕೆ ಸೈದ್ಧಾಂತಿಕ ತಿರುವು ಕೊಟ್ಟ ಮಹಾನ್ ಚೇತನ ಎಂದು ಹೇಳಿದರು. ನಿಜಕ್ಕೂ, ಅಂಬೇಡ್ಕರ್ ಅವರ ಚಿಂತನೆಗಳು ಭಾರತದ ರಾಜಕೀಯ ಮತ್ತು ಸಾಮಾಜಿಕ ವ್ಯವಸ್ಥೆಗೆ ಹೊಸ ದಿಕ್ಕನ್ನು ನೀಡಿದವು. ಅವರು ರೂಪಿಸಿದ ಭಾರತೀಯ ಸಂವಿಧಾನವು ವಿಶ್ವದಲ್ಲೇ ಅತ್ಯಂತ ಪ್ರಗತಿಪರ ಸಂವಿಧಾನಗಳಲ್ಲಿ ಒಂದಾಗಿದೆ ಎಂದು ಹೇಳಿದರು. ಕಾರ್ಯಕ್ರಮದಲ್ಲಿ ಇತಿಹಾಸ ವಿಭಾಗದ ಮುಖ್ಯಸ್ಥರಾದ ಸಾವಿತ್ರಿ ಅವರು ಪ್ರಾಸ್ತಾವಿಕ ನುಡಿಗಳನ್ನು ಆಡಿದರು. ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ವಿಶ್ವರಾಧ್ಯ ಅವರು ಸ್ವಾಗತಿಸಿದರು. ದೈಹಿಕ ಶಿಕ್ಷಣ ನಿರ್ದೇಶಕ ಆರ್. ನಂಜುಂಡ ಅವರು ಕಾರ್ಯಕ್ರಮವನ್ನು ನಿರೂಪಿಸಿದರು. ಗ್ರಂಥಪಾಲಕರಾದ ಡಾ. ಮುಕ್ತಾಯಿ ಅವರು ಸಂವಿಧಾನದ ಪೀಠಿಕೆಯನ್ನು ವಾಚಿಸಿದರು. ಕಾರ್ಯಕ್ರಮದ ಅಂಗವಾಗಿ ಅಂಬೇಡ್ಕರ್ ಅಧ್ಯಯನ ಕೇಂದ್ರದ ವತಿಯಿಂದ ವಿದ್ಯಾರ್ಥಿಗಳಿಗೆ ವಿವಿಧ ಸ್ಪರ್ಧೆಗಳು ಆಯೋಜಿಸಲಾಗಿತ್ತು. ಅಂಬೇಡ್ಕರ್ ಅವರ ಜೀವನ ಮತ್ತು ಚಿಂತನೆಗಳ ಕುರಿತಾಗಿ ನಡೆದ ಭಾಷಣ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಇದು ವಿದ್ಯಾರ್ಥಿಗಳಲ್ಲಿ ಅಂಬೇಡ್ಕರ್ ಅವರ ಚಿಂತನೆಗಳ ಬಗ್ಗೆ ಹೆಚ್ಚಿನ ಅರಿವು ಮೂಡಿಸುವಲ್ಲಿ ಸಹಾಯಕವಾಯಿತು. ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕರಾದ ಡಾ. ಕೋಮಲ ಎ.ಸಿ, ಡಾ. ಅಕ್ಷತಾ ಪರಂಜತಿ ಕುಮಾರ್, ಡಾ. ಗೀತಾಬಾಯಿ ಬಸವರಾಜು, ಡಾ. ಮುಕ್ತಾರ್ ಪಾಷಾ, ಮಹಮ್ಮದ್ ಪಾಷಾ, ಪ್ರಸನ್ನ ಕುಮಾರ್, ಲೋಕೇಶ್, ಮಂಜುನಾಥ್, ಚಂದ್ರಶೇಖರ್ ಸೇರಿದಂತೆ ಕಾಲೇಜಿನ ಬೋಧಕರು ಬೋಧಕೇತರ ಸಿಬ್ಬಂದಿ ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

# ಅಪಾರ್ಟ್‌ಮೆಂಟ್ ಕೊಡುವುದಾಗಿ ವಂಚನೆ




ಮೈಸೂರು: ಚಾಮರಾಜ ಮೊಹಲ್ಲಾದಲ್ಲಿ ಅಪಾರ್ಟ್ಮೆಂಟ್ ನಿರ್ಮಿಸಿ ಎಲ್ಲರಿಗೂ ಫ್ಲಾಟ್ ಕೊಡುವುದಾಗಿ ನಂಬಿಸಿ ಓರ್ವರು ಹಣ ಪಡೆದು ಹಲವಾರು ವರ್ಷಗಳಾದರೂ ಅಪಾರ್ಟ್ಮೆಂಟ್ ಪೂರ್ಣಗೊಳಿಸದೇ ತಮಗೆ ವಂಚಿಸಿದ್ದಾರೆ ಹಲವಾರು ಸಂತ್ರಸ್ತರು ಅಳಲು ತೋಡಿಕೊಂಡರು.

ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗಾರರೊಡನೆ ಸಂತ್ರಸ್ತರಲ್ಲೊಬ್ಬರಾದ ರಾಮಸ್ವಾಮಿ ಮಾತನಾಡಿ, ಅಪಾರ್ಟ್ಮೆಂಟ್ ನಿರ್ಮಾನ 2016 ರಲ್ಲಿ ಪ್ರಾರಂಭಗೊಂಡು 2024ರಲ್ಲಿ ಪೂರ್ಣಗೊಳಿಸಬೇಕೆಂದು ರೇರಾ ನಿಬಂಧನೆ ಹೇರಿತ್ತು. ಆದರೆ ಅದನ್ನು ಉಲ್ಲಂಘಿಸಲಾಗಿದ್ದು, ಈ ಯೋಜನೆ ಕಪ್ಪು ಪಟ್ಟಿಗೆ ಸೇರಿದೆ. ಇದೇ ವೇಳೆ ತಾವೆಲ್ಲ ತಮ್ ಜೀವಮಾನದ ಉಳಿತಾಯದ ಹಣವನ್ನು ಫ್ಲಾಟ್ ದೊರೆಯುತ್ತದೆಂಬ ಆಸೆಯಿಂದ ನೀಡಿದ್ದು, ಇದುವರೆಗೂ ಹಸ್ತಾಂತರಿಸಿಲ್ಲ. ಜೊತೆಗೆ, ಒಂದೊಂದೂ ಫ್ಲಾಟನ್ನು ಹಲವರಿಗೆ ಮಾರಾಟ ಮಾಡಿದ ಒಪ್ಪಂದ ಆರೋಪಿ ಮಾಡಿಕೊಂಡಿದ್ದಾರೆ ಎಂದು ದೂರಿದರು. ಅಲ್ಲದೆ, ಈ ಅಪಾರ್ಟ್ಮೆಂಟ್ 24 ಫ್ಲಾಟ್‌ನದಾಗಿದ್ದು, ಇದರಲ್ಲಿ 15ಅನ್ನು ಬಿಲ್ಡರ್ ಹೊಂದಿದ್ದು, ಉಳಿಕೆ 9 ಅನ್ನು ಇತರರಿಗೆ ಭೂಮಾಲೀಕರನ್ನಾಗಿಸಲಾಗಿದೆ. ಇದೇ ವೇಳೆ ಆರೋಪಿ ತನಗೆ ಬಂದ 6 ಫ್ಲಾರ್ಟ್ಗಳನ್ನು ಪೂರ್ಣ ಹಣ ವಸೂಲಿ ಮಾಡಿ ವಾಸಕ್ಕೆ ಯೋಗ್ಯವಲ್ಲದ ಸ್ಥಿತಿಯಲ್ಲಿ ಕ್ರಯಪತ್ರ ಮಾಡಿಕೊಟ್ಟಿದ್ದಾನೆ. ಇವುಗಳನ್ನು ಪಡೆಯಲು ತಾವು ಬ್ಯಾಂಕ್‌ಗಳಿಂದ ಸಾಲ ಪಡೆದಿದ್ದು, ತಮಗೆ ಫ್ಲಾಟ್ ದೊರಕದೇ ಇದ್ದರೂ ಸಹಾ ಬ್ಯಾಂಕಿನವರ ಕಿರುಕುಳ ತಾಳದಂತಾಗಿದೆ. ಹೀಗಾಗಿ ಪೊಲೀಸರು ಕೂಡಲೇ ತಲೆಮರೆಸಿಕೊಂಡಿರುವ ಆರೋಪಿಯನ್ನು ಪತ್ತೆಹಚ್ಚಿ ತಮಗೆ ನ್ಯಾಯ ದೊರಕಿಸಿಕೊಡಬೇಕೆಂದು ಕೋರಿದರು. ಇನ್ನಿತರ ಸಂತ್ರಸ್ತರಾದ ಸರೋಜಿನಿ, ಕುಮುದಾ, ರತ್ನಚಿಕ್ಕರಂಯ್ಯ, ಶಶಿಕಲಾ ಪವನ್‌ಕುಮಾರ್, ಜಯಾನಂದ್ ಪ್ರಸಾದ್ ಮೊದಲಾದವರು ಇದ್ದರು.

# ಶಿಕ್ಷಕರನ್ನು ಗಣತಿ ಕಾರ್ಯಕ್ಕೆ ನಿಯೋಜಿಸಿ



ಚಾಮರಾಜನಗರ, ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ಆಯಾಯ ಗ್ರಾಮಗಳಲ್ಲೇ ಗಣತಿ ಕಾರ್ಯಕ್ಕೆ ನಿಯೋಜಿಸುವಂತೆ ಒತ್ತಾಯಿಸಿ ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದ ವತಿಯಿಂದ ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಚಂದ್ರಪಾಟೀಲ್ ಅವರಿಗೆ ಮನವಿ ಸಲ್ಲಿಸಲಾಯಿತು.

ಈಗಾಗಲೇ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರನ್ನು ದೂರದ ಗ್ರಾಮಗಳ ಗಣತಿ ಕಾರ್ಯಕ್ಕೆ ನಿಯೋಜನೆ ಮಾಡಿರುವುದರಿಂದ ತುಂಬಾ ತೊಂದರೆ ಉಂಟಾಗಿದೆ ಆಗಾಗಿ ಅವರು ಕರ್ತವ್ಯ ನಿರ್ವಹಿಸುತ್ತಿರುವ ಗ್ರಾಮಗಳಲ್ಲೆ ಗಣತಿ ಕಾರ್ಯಕ್ಕೆ ನಿಯೋಜಿಸಿಕೊಡುವಂತೆ ಉಪನಿರ್ದೇಶಕರಿಗೆ ಸಲ್ಲಿಸಿರುವ ಮನವಿಯಲ್ಲಿ ಸಂಘದ ಜಿಲ್ಲಾಧ್ಯಕ್ಷ ಕೆ.ಎಸ್.ಮಾದಪ್ಪ, ಪ್ರಧಾನ ಕಾರ್ಯದರ್ಶಿ ಮಹಾದೇವಸ್ವಾಮಿ ಮನವಿ ಮಾಡಿದ್ದಾರೆ

ತಾಲೂಕು ಅಧ್ಯಕ್ಷ ಸಿ.ಕೆ.ರಾಮಸ್ವಾಮಿ, ಕಾರ್ಯದರ್ಶಿ ಎನ್.ಸುಧಾ, ಪದಾಧಿಕಾರಿಗಳಾದ ಎಂ.ಡಿ ಮಹಾದೇವಯ್ಯ ಡಿ ಎನ್. ಭಾರತ್ , ಬಿ. ಕೃಷ್ಣಮೂರ್ತಿ ,ರಾಜು ,ಎಸ್ ಜಿ ವಿ ಶಾಂತರಾಜ್, ಶಿವಕುಮಾರ್ , ಎಸ್.ಬಿ ರಾಜು , ಸಮೀಉಲ್ಲಾ, ಧನಂಜಯ್, ಎಂ.ಪುಟ್ಟಸ್ವಾಮಿ, ಸಿ.ಎಂ. ಮುರುಗೇಶ್ ಕುಮಾರ್, ನಂಜುಂಡಸ್ವಾಮಿ, ಎನ್.ಎಸ್.ಮಹಾದೇವಸ್ವಾಮಿ, ಎಂ.ಶಿವಕುಮಾರ್, ಪಿ.ಪುಟ್ಟಸ್ವಾಮಿ, ರಾಜು,

ಭವಾನಿ ದೇವಿ, ಸಿ.ಎಂ.ಸುಶೀಲಾ, ಶ್ವೇತ, ಬಿ.ಎಸ್.ಲತಾ, ಇತರರು ಹಾಜರಿದ್ದರು.



## ಕೃಷ್ಣ ವಂದನ

ಸ್ನೇಹಾ ಆನಂದ್



### ಹೇ ಕೃಷ್ಣಾ!

ಕೃಷ್ಣನು ಬಂದನು ಎನ್ನಲು ಭಟರು
ಭಾಮಿಯು ನಿಂತಳು ಮುದದಿಂದ
ರುಕ್ಮಿಣಿ ಚಿನ್ನದ ಮಣಿಯನು ರಾಶಿ
ಬಡಿದಾಳಾಚೆ ಭರದಿಂದ !

ಅರಮನೆಯಾಯಿತು ಸಂತಸ ಕಡಲು,
ನೆಮ್ಮದಿಗೊಂಡಿತು ಯಶೋದೆಯ ಮಡಿಲು!
ದೇವಕಿ ಮನಸು ನಂದನವಾಯಿತು,
ಮನಸದು ಸಡಗರ ಸ್ವಾಗತ ಬಯಸಿತು !

ರಾಧೆಯು ಇತ್ತ ವಿರಹವ ತಾಳದೆ,
ಕಣ್ಣೀರಾದಳು ಗೋಕುಲದೆಡೆಗೆ ನೋಡುತಲಿ!
ಮುರಳಿಯ ನಾದವ ಕೇಳಲು ನಿಂತವು, ಹಸುಗಳ
ದಂಡು ಕೃಷ್ಣನ ಕಾಯುತಲಿ!

ತಟ್ಟನೆ ನಾದವು ಹೊಮ್ಮಿತು ಬಯಲೊಳು,
ಕುಣಿದವು ಹಸು,ಕರುಗಳು ಸಂಭ್ರಮದಿ!
ರಾಧೆಯು ಕಂಡಳು ಕೃಷ್ಣನ ಛಾಯೆ
ಇಣುಕಿದ ಕೊಳದೊಳಗೆ ವಿಸ್ಮಯದಿ!

# ಮಠ ಬೀಡಲ್ಲವೆಂದು ವಚನಾನಂದ ಶ್ರೀ ಪಟ್ಟು



ದಾವಣಗೆರೆ: ಹರಿಹರ ವೀರಶೈವ ಲಿಂಗಾಯತ ಪಂಚಮಸಾಲಿ ಪೀಠದ ಜಗಳ ಬೀದಿ ರಂಪಾಟವಾಗಿದೆ. ವಚನಾನಂದ ಶ್ರೀ ಮಠ ಬಿಡಲ್ಲ ಎಂದು ಪಟ್ಟು ಹಿಡಿದಿದ್ದಾರೆ. ಮಠ ತೊರೆಯದಿದ್ದರೆ ಎಳೆದು ಮಠದಿಂದ ಹೊರಗೆ ಹಾಕ್ತೀವಿ ಎಂದು ಟ್ರಸ್ಟಿಗಳು ಎಚ್ಚರಿಕೆ ನೀಡಿದ್ದಾರೆ. ಸ್ವಾಮೀಜಿ ಮಠದಲ್ಲಿ ಆಚಾರ ವಿಚಾರಗಳಲ್ಲಿ ಸರಿಯಾಗಿ ನಡೆದುಕೊಳ್ಳುತ್ತಿಲ್ಲ ಎಂದು ಆರೋಪಿಸಿ ಟ್ರಸ್ಟಿಗಳು ಉಚ್ಚಾಟಿಸಿದ್ದಾರೆ. ಆದರೆ ವಚನಾನಂದ ಸ್ವಾಮೀಜಿ ಹಾಗೂ ಮಠದ ಭಕ್ತರು ಯಾವುದೇ ಕಾರಣಕ್ಕೂ ಶ್ರೀಗಳು ಮಠವನ್ನು ಬಿಟ್ಟು ಹೋಗುವುದಿಲ್ಲ ಎಂದು ಪಟ್ಟುಹಿಡಿದಿದ್ದಾರೆ.

# ವಿಜ್ಞಾನ ವಿಭಾಗದಲ್ಲಿ ರೈತನ ಮಗಳ ಸಾಧನೆ



ಗುಂಡ್ಲುಪೇಟೆ: ತಾಲೂಕಿನ ಕೋಡಹಳ್ಳಿ ಗ್ರಾಮದ ಮೂರ್ತಿ ಮತ್ತು ಪಂಕಜ ಎಂಬ ದಂಪತಿಗಳ ಪುತ್ರಿ ಭಾಗ್ಯಶ್ರೀ ಎಂಬ ವಿದ್ಯಾರ್ಥಿನಿ ವಿಜ್ಞಾನ ವಿಭಾಗದಲ್ಲಿ 563 ಅಂಕ ಪಡೆದು ಪೋಷಕರಿಗೆ ಶಾಲೆಗೆ ಹೆಮ್ಮೆ ತಂದಿದ್ದಾಳೆ.

ಮೈಸೂರಿನ ಸರಸ್ವತಿಪುರಂ ಕಾಲೇಜಿನಲ್ಲಿ ಸೈನ್ಸ್ ಇಂಟಿಗ್ರೇಟೆಡ್ ನಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡಿ 563 ಅಂಕ ಪಡೆದಿದ್ದು. ತಂದೆ ವ್ಯವಸಾಯ ಮಾಡಿ ಜೀವನ ಸಾಗಿಸುತಿದ್ದು ರೈತನ ಮಗಳ ಸಾಧನೆಗೆ ಎಲ್ಲರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ದೇಶದ ಅಭಿವೃದ್ಧಿಯಲ್ಲೂ ಸ್ತ್ರೀಯರು ನಾಯಕತ್ವಕ್ಕೆ ಮೀಸಲು

## ಬಿಜೆಪಿ ಮಹಿಳಾ ಘಟಕದ ಉಪಾಧ್ಯಕ್ಷೆ ಮಾಳವಿಕ ಅವಿನಾಶ್ ಹೇಳಿಕೆ



ಮೈಸೂರು: 2047ರ ವಿಕಸಿತ ಭಾರತದಲ್ಲಿ ಮಹಿಳೆಯರ ಸಬಲೀಕರಣದ ಜತೆಗೆ ದೇಶದ ಅಭಿವೃದ್ಧಿಯಲ್ಲೂ ಮಹಿಳೆಯರು ನಾಯಕತ್ವ ವಹಿಸಬೇಕು ಎಂಬ ಕಾರಣಕ್ಕಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಸರ್ಕಾರ ಮಹಿಳೆಯರಿಗಾಗಿ ಶೇ.33ರಷ್ಟು ಮೀಸಲಾತಿ ನೀಡುತ್ತಿದೆ ಎಂದು ರಾಜ್ಯ ಬಿಜೆಪಿ ಮಹಿಳಾ ಘಟಕದ ಉಪಾಧ್ಯಕ್ಷೆ ಮಾಳವಿಕ ಅವಿನಾಶ್ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆರ್ಥಿಕವಾಗಿ, ಶೈಕ್ಷಣಿಕವಾಗಿ ಮಾತ್ರವಲ್ಲದೆ ರಾಜಕೀಯವಾಗಿಯೂ ಮಹಿಳೆಯರು ಸಬಲೀಕರಣಗೊಳ್ಳಬೇಕು. ಇದಕ್ಕಾಗಿ ಹಲವಾರು ಕಾರ್ಯಕ್ರಮ, ಯೋಜನೆಗಳನ್ನು ಜಾರಿಗೆ ತಂದಿದ್ದಾರೆ ಎಂದು ತಿಳಿಸಿದರು. 2021ರಲ್ಲೇ ಜನಗಣತಿ ಮಾಡಬೇಕಿತ್ತು. ಆದರೆ, ಕೋವಿಡ್ ಕಾರಣದಿಂದ ಜಗಣಗತಿಯನ್ನು 2027ರಲ್ಲಿ ಮಾಡಲಾಗುತ್ತಿದೆ. 2029ರ ಲೋಕಸಭೆ ಚುನಾವಣೆಯೊಳಗೆ ಜನಗಣತಿ ಮುಗಿಯುವುದು ಕಷ್ಟವಾಗುತ್ತಿರುವ ಕಾರಣ ವಿಶೇಷ ಅಧಿವೇಶನದಲ್ಲಿ ನಾರಿಶಕ್ತಿ ವಂದನ ಅಭಿಯಾನ ಕಾನೂನಾಗಲಿದೆ ಎಂದು ತಿಳಿಸಿದರು.

ಈಗಾಗಲೇ ಅಧಿವೇಶನದಲ್ಲಿ 543 ಸೀಟ್‌ಗಳಿವೆ. ಅದನ್ನು ಹೆಚ್ಚಿಸಿ 816ಕ್ಕೆ ಹೆಚ್ಚಿಸುತ್ತಿದ್ದಾರೆ. ಇದರಿಂದ ಪುರುಷರಿಗೂ ತಮ್ಮ ಸ್ಥಾನ ತಪ್ಪಿ ಹೋಗುವ ಭಯವೂ ಇರುವುದಿಲ್ಲ. ಜನಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಸ್ಥಾನಗಳನ್ನು ಹೆಚ್ಚಿಸುವ ಅನಿವಾರ್ಯತೆ ಇದೆ. ಇದು ಸಂಭ್ರಮದ ಕ್ಷಣ. ಭಾರತದ ಮಹಿಳೆಯರಲ್ಲದೆ ವಿಶ್ವದ ಮಹಿಳೆಯರು ಸಂಭ್ರಮಿಸುವ ಕ್ಷಣ ಎಂದರು.

> ಕಾಂಗ್ರೆಸ್‌ನಲ್ಲಿ ಇರುವಂತೆ ಬಿಜೆಪಿಯಲ್ಲಿ ವಂಶಪಾರಂಪರ್ಯ ಆಡಳಿತವಿಲ್ಲ. ಕಾಂಗ್ರೆಸ್‌ನಲ್ಲಿ ಒಂದೇ ಕುಟುಂಬ ಸಬಲೀಕರಣವಾಗುತ್ತಿದೆ. ಬಿಜೆಪಿಯಲ್ಲಿ ಹಾಗೆ ಆಗಿಲ್ಲ. ಇಲ್ಲಿ ತಳಮಟ್ಟದ ಕಾರ್ಯಕರ್ತರೂ ಉನ್ನತ ಹುದ್ದೇಗೇರುತ್ತಾರೆ.
>
> ▸▸ **ಮಾಳವಿಕ ಅವಿನಾಶ್** ಬಿಜೆಪಿ ರಾಜ್ಯ ಮಹಿಳಾ ಘಟಕದ ಉಪಾಧ್ಯಕ್ಷೆ

21ನೇ ಶತಮಾನದ ಪ್ರಮುಖ ನಿರ್ಣಯಗಳಲ್ಲಿ ಈ ನಿರ್ಣಯವೂ ಒಂದಾಗಿರುತ್ತದೆ. ವಿಶ್ವದ ಅನೇಕ ಮುಂದುವರೆದ ರಾಷ್ಟ್ರಗಳಲ್ಲಿ ಈ ರೀತಿಯ ಮೀಸಲಾತಿ ಇಲ್ಲವೆ ಇಲ್ಲ. ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ರಾಜಕಾರಣ ಮಾಡಬಾರದು. ರಾಜಕೀಯವಾಗಿ ಭಿನ್ನಾಭಿಪ್ರಾಯಗಳು ಇರಬಹುದು. ಆದರೆ, ಮಹಿಳಾ ಮೀಸಲಾತಿ ವಿಚಾರದಲ್ಲಿ ಎಲ್ಲರೂ ಒಕ್ಕೊರಲಿನಿಂದ ಈ ಕಾಯ್ದೆಯನ್ನು ಸ್ವಾಗತಿಸಬೇಕು. 77 ವರ್ಷಗಳ ಕಾಲ ಮಹಿಳೆಯರು ಕಾದಂತಹ ಕ್ಷಣ ಇದಾಗಿದೆ. ರಾಜಕಾರಣದಲ್ಲಿ ಅವಕಾಶಗಳಿಸಿಕೊಳ್ಳುವುದು ಸಾಮಾನ್ಯ ವಿಷಯವಲ್ಲ. ಹೀಗಾಗಿ ಒಂದು ವಾರಗಳ ಕಾಲ ಜನಜಾಗೃತಿ ದೃಷ್ಟಿಯಲ್ಲಿ ರಾಜ್ಯದ 15 ಭಾಗಗಳಲ್ಲಿ ನಾರಿಶಕ್ತಿ ಸಮ್ಮೇಳನ, ನಾರಿಶಕ್ತಿ ಪಾದಯಾತ್ರೆ, ಬೈಕ್ ಮತ್ತು ಸ್ಕೂಟಿ ರ‍್ಯಾಲಿ ನಡೆಯುತ್ತಿದೆ. ಜತೆಗೆ ಲೇಖನಗಳ, ಮಾನವ ಸರಪಳಿ, ಸಾಮಾಜಿಕ ಮಾಧ್ಯಮದ ಮೂಲಕ ಜಾಗೃತಿ ಮೂಡಿಸುವ ಕೆಲಸ ಮಾಡಲಾಗುತ್ತಿದೆ ಎಂದರು. ಈ ಸಂಭ್ರಮದ ಕ್ಷಣದಲ್ಲಿ ಮಹಿಳೆರು ಭಾಗವಹಿಸಬೇಕೆಂಬ ದೃಷ್ಟಿಯಿಂದ ಹಾಗೂ ತಮ್ಮ ಅನುಭವವನ್ನು ತಿಳಿಸಬೇಕೆಂಬ ದೃಷ್ಟಿಯಿಂದ 9667173333 ದೂರವಾಣಿ ಸಂಖ್ಯೆಗೆ ಮಿಸ್ಡ್‌ಕಾಲ್ ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದರ ಜತೆಗೆ ಸಹಿ ಸಂಗ್ರಹ ಅಭಿಯಾನವನ್ನೂ ಮಾಡಲಾಗುತ್ತಿದೆ ಎಂದು ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಮಹಿಳಾ ಬಿಜೆಪಿ ಮೋರ್ಚಾದ ಕಾರ್ಯದರ್ಶಿ ಲಕ್ಷ್ಮೀ ಅಶ್ವಿನಿ, ನಿಕಟಪೂರ್ವ ರಾಜ್ಯಾಧ್ಯಕ್ಷೆ ವೀಣಾ ಪ್ರಕಾಶ್, ನಗರ ಮಹಿಳಾ ಮೋರ್ಚಾ ಅಧ್ಯಕ್ಷೆ ರೇಣುಕಾ ರಾಜ್ ಸೇರಿ ಇತರರು ಹಾಜರಿದ್ದರು.

# ಸಿಎಂ ಸಿದ್ದರಾಮಯ್ಯಗೆ ಕಪ್ಪು ಬಾವುಟ ಪ್ರದರ್ಶನ



ಗುಂಡ್ಲುಪೇಟೆ: ಏಪ್ರಿಲ್ 21ರಂದು ಗುಂಡ್ಲುಪೇಟೆಗೆ ಆಗಮಿಸಲಿರುವ ಸಿಎಂ ಸಿದ್ದರಾಮಯ್ಯನವರಿಗೆ ಕಪ್ಪು ಬಾವುಟ ಪ್ರದರ್ಶನ ಮಾಡುವುದಾಗಿ ಕರ್ನಾಟಕ ರಾಜ್ಯ ರೈತ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಡಾ.ಗುರುಪ್ರಸಾದ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಎರಡೂ ವರ್ಷಗಳ ಹಿಂದೆಯೇ ಜಿಲ್ಲೆಯ ಹಲವು ಅಕ್ರಮಗಳನ್ನು ಕುರಿತು ಸಿಎಂ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ ಪತ್ರವನ್ನ ಕಸದ ಬುಟ್ಟಿಗೆ ಎಸೆದು ಹೋಗಿದ್ದ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ವಿರುದ್ಧ ಪ್ರತಿಭಟನೆ ನಡೆಸಿದ ವೇಳೆ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದರು. ಆದರೆ ಇದುವರೆಗೂ ಯಾವುದೇ ಕ್ರಮಕೈಗೊಂಡಿಲ್ಲ ಎಂದು ಕಿಡಿಕಾರಿದರು. ತಾಲೂಕಿನಲ್ಲಿ ಕೇರಳ ರಾಜ್ಯದವರು ಸಾವಿರಾರು ಎಕರೆ ಜಮೀನನ್ನು ಖರೀದಿ ಮಾಡುತ್ತಿದ್ದಾರೆ. ಯಾವುದೇ ಸಮರ್ಪಕ ದಾಖಲೆಗಳು ಇಲ್ಲದಿದ್ದರೂ ಕೇರಳಿಗರ ಲಂಚದ ಆಸೆಗೆ ಅಧಿಕಾರಿಗಳು ಕೇವಲ ಎರಡೇ ದಿನಕ್ಕೆ ಜಮೀನುಗಳು ರಿಜಿಸ್ಟರ್ ಆಗುತ್ತಿದ್ದು. ಮುಂದಿನ ದಿನಗಳಲ್ಲಿ ತಾಲೂಕನ್ನು ಮಾರಾಟ ಮಾಡಿದರು ಆಶ್ಚರ್ಯವಿಲ್ಲ ಎಂದು ಆತಂಕ ವ್ಯಕ್ತಪಡಿಸಿದರು.

ಬಂಡೀಪುರದ ಅರಣ್ಯದಿಂದ ಸುರಂಗ ಮಾರ್ಗಕ್ಕೆ ಯೋಜನೆ ರೂಪಿಸುತ್ತಿರುವ ರಾಜಕಾರಣಿಗಳು ಮೂಲೆಹೊಳೆ ಮುಖಾಂತರ ಗುಂಡ್ಲುಪೇಟೆಗೆ ಕುಡಿಯುವ ನೀರಿನ ಯೋಜನೆಗೆ ಯಾಕೆ ಚಾಲನೆ ನೀಡುತ್ತಿಲ್ಲ. ಕೇರಳ ರಾಜ್ಯದ ಬಗ್ಗೆ ವಿಶೇಷ ಸ್ಥಾನಮಾನ ನೀಡಿ ತಾಲೂಕಿನ ಖನಿಜ ಸಂಪತ್ತು ಪರರಾಜ್ಯಗಳಿಗೆ ಲೂಟಿಯಾಗುತ್ತಿದ್ದರು ಅಧಿಕಾರಿಗಳು ಮೌನವಾಗಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಕೊಳ್ಳೇಗಾಲದ ಉಪವಿಭಾಗಾಧಿಕಾರಿ ರೈತರ ಜೊತೆ ಸೌಜನ್ಯವಾಗಿ ವರ್ತಿಸುವುದಿಲ್ಲ. ಈ ಅಧಿಕಾರಿಗೆ ಕನ್ನಡ ಬಾರದೇ ಕಡತಗಳನ್ನು ಪರಿಶೀಲಿಸಲು ಎಐ ತಂತ್ರಜ್ಞಾನವನ್ನು ಬಳಸಿ ರೈತರ ಹಲವು ಅರ್ಜಿಗಳನ್ನು ಪೂರ್ಣಗೊಳಿಸದೇ ಕಾಲಹರಣ ಮಾಡುತಿದ್ದಾರೆ. ಜನರ ಸಮಸ್ಯೆ ಆಲಿಸಿದ ನಾಲಯಕ್ ಅಧಿಕಾರಿ ಎಂದು ದೂರಿದರು.

ಸಿಎಫ್ ಅವರು ಸರ್ಕಾರಿ ವಾಹನದಲ್ಲಿ ಸಂಬಂದಿಕರನ್ನ ಬೆಟ್ಟದ ಮೇಲೆ ಕಳುಹಿಸುತ್ತಾರೆ. ಹಲವು ವಲಯ ಅರಣ್ಯಾಧಿಕಾರಿಗಳು ಹತ್ತಾರು ವರ್ಷಗಳಿಂದ ಒಂದೇ ಜಾಗದಲ್ಲಿ ನಿಯೋಜನೆ ಮಾಡಲು ಕಾರಣವೇನು. ಚೆಕ್ ಪೋಸ್ಟ್ ಗಳಿಗೆ ತಮಗೆ ಬೇಕಾದವರನ್ನ ಡ್ಯೂಟಿಗೆ ನಿಯೋಜನೆ ಮಾಡಿ ಹಣ ವಸೂಲಿ ಮಾಡಿಸುತ್ತಿದ್ದಾರೆ ಎಂದು ಆರೋಪಿಸಿದರು. ರೈತ ಮುಖಂಡ ಕುಂದಕೆರೆ ಸಂಪತ್ತು ಮಾತನಾಡಿ, ಗಣಿಗಾರಿಕೆ ಉದ್ಯಮಿಯಾಗಿರುವ ಶಾಸಕರಿಂದ ಅಕ್ರಮಕ್ಕೆ ಬೆಂಬಲವಾಗಿದ್ದಾರೆ. ಕ್ಷೇತ್ರದಲ್ಲಾಗುವ ಅದ್ವಾನದ ಕುರಿತು ಕಾಳಜಿ ಇಲ್ಲ, ನಿರಂತರ ಅಪಘಾತ ಸಾವು ನೋವುಗಳಿಗೆ ಶಾಸಕರು ಸ್ಪಂದಿಸುತ್ತಿಲ್ಲ. ಪುಟ್ಟರಂಗಶೆಟ್ಟಿ ಜವಾಬ್ದಾರಿ ಅರಿತು ಚಾಮರಾಜನಗರ ಭಾಗದ ಕೆರೆಗಳಿಗೆ ಎರಡೆರಡು ಬಾರಿ ನೀರು ತುಂಬಿಸಿ. ಜೀವಕಳೆ ತಂದಿದ್ದಾರೆ. ಅಧಿಕಾರಿಗಳನ್ನ ಹದ್ದುಬಸ್ತಿನಲ್ಲಿಡಲಾಗದ ಶಾಸಕರು ತಾಲ್ಲೂಕಿನಲ್ಲಿ ಅಭಿವೃದ್ಧಿ ರೈತ ಪರ ಕೆಲಸ ನಿರೀಕ್ಷೆ ಮಾಡಲು ಸಾಧ್ಯವೇ ಎಂದರು. ಸುದ್ದಿಗೋಷ್ಟಿಯಲ್ಲಿ ಜಿಲ್ಲಾಧ್ಯಕ್ಷ ಮಾಡ್ರಳ್ಳಿ ಮಹಾದೇವಪ್ಪ ,ಜಿಲ್ಲಾ ಸಂಚಾಲಕ ಲೋಕೇಶ್, ತಾಲೂಕು ಅಧ್ಯಕ್ಷ ಕೆಎಸ್ ಮಹೇಶ್, ಹಿರಿಕಾಟಿ ಚಿಕ್ಕಣ್ಣ , ದೊಡ್ಡತುಪ್ಪೂರು ಪ್ರಸಾದ್, ಬೆಟ್ಟಹಳ್ಳಿ ಗುರು, ಶಂಭುಲಿಂಗಪ್ಪ, ಮಣಿಕಂಠ, ನಂದೀಶ, ಮಹೇಶ, ದೊರೆಸ್ವಾಮಿ, ಕೋಡಹಳ್ಳಿ ರಘು, ಮಹೇಶ, ಸುರೇಶ ಹಾಜರಿದ್ದರು

# ಖಾಲಿ ಬಿಂದಿಗೆ ಹಿಡಿದು ಪ್ರತಿಭಟನೆ



ಹನೂರು: ಕಳೆದ ಹಲವಾರು ದಿನಗಳಿಂದ ಸಮರ್ಪಕ ಕುಡಿಯುವ ನೀರು ಪೂರೈಕೆ ಮಾಡದೆ ಇರುವುದರಿಂದ ಈ ಬಾರಿಯ ಚುನಾವಣೆಯನ್ನು ಬಹಿಷ್ಕಾರ ಮಾಡುವುದಾಗಿ ಪಿಜಿ ಪಾಳ್ಯ ಗ್ರಾಮದ ಕ್ರಿಶ್ಚಿಯನ್ ಸಮುದಾಯದ ಮಹಿಳೆಯರು ಖಾಲಿ ಬಿಂದಿಗೆ ಹಿಡಿದು ಪ್ರತಿಭಟನೆ ನಡೆಸಿದ್ದಾರೆ.

ಹನೂರು ತಾಲ್ಲೂಕಿನ ಪಿಜಿ ಪಾಳ್ಯ ಗ್ರಾಮ ಪಂಚಾಯಿತಿ ಕೇಂದ್ರ ಸ್ಥಾನದ ಕ್ರಿಶ್ಚಿಯನ್ ಸಮುದಾಯದ ಬಡಾವಣೆಯಲ್ಲಿ ಕಳೆದ ಹಲವಾರು ತಿಂಗಳಿನಿಂದ ಸಮರ್ಪಕ ಕುಡಿಯುವ ನೀರು ಪೂರೈಕೆ ಮಾಡದೇ ಇರುವುದರಿಂದ ಕುಡಿಯುವ ನೀರಿಗೆ ಹಾಹಾಕಾರ ಉಂಟಾಗಿದೆ.

ಈ ಸಂಬಂಧ ಕಳೆದ ವರ್ಷವೂ ಸಹ ನಮ್ಮ ಕ್ರಿಶ್ಚಿಯನ್ ಸಮುದಾಯದ ಬಡಾವಣೆಗೆ ಕೊಳವೆ ಬಾವಿ ಒರೆಸುವಂತೆ ಮನವಿ ಮಾಡಲಾಗಿತ್ತು. ಆದರೂ ಕೊಳವೆಬಾವಿ ಕೂರೆಸಲಿಲ್ಲ. ಇದೀಗ ಮತ್ತೆ ಕುಡಿಯುವ ನೀರಿನ ಸಮಸ್ಯೆ ಉಂಟಾಗಿದೆ. ಸಮಸ್ಯೆಯನ್ನು ಬಗೆಹರಿಸುವಂತೆ ಮನವಿ ಮಾಡಿದ್ದರೂ ಇದುವರೆಗೂ ಯಾವುದೇ ಪ್ರಯೋಜನ ಆಗಿಲ್ಲ. ನಮ್ಮ ಸಮಸ್ಯೆಯನ್ನು ಆಲಿಸುವವರು ಯಾರು ಎಂದು ಪ್ರಶ್ನಿಸಿದ್ದಾರೆ.

ಇನ್ನು ಗ್ರಾಮದ ಮಹಿಳೆಯರು ಮಾತನಾಡಿ, ನಮ್ಮ ಕ್ರಿಶ್ಚಿಯನ್ ಸಮುದಾಯದ ಬಡಾವಣೆಗೆ ಸಮರ್ಪಕ ಕುಡಿಯುವ ನೀರು ಪೂರೈಕೆ ಮಾಡುತ್ತಿಲ್ಲ. ಚುನಾವಣೆ ಸಂದರ್ಭದಲ್ಲಿ ಮತಭಿಕ್ಷೆಗಾಗಿ ಎಲ್ಲರೂ ಮನೆ ಬಳಿ ಬರುತ್ತಾರೆ. ಆದರೆ ಇದೀಗ ಸಮಸ್ಯೆಯನ್ನು ಆಲಿಸುವವರು ಯಾರು ಇಲ್ಲ. ಆದ್ದರಿಂದ ಈ ಬಾರಿಯ ಚುನಾವಣೆಯನ್ನು ಬಹಿಷ್ಕಾರ ಮಾಡುತ್ತಿದ್ದೇವೆ ಎಂದು ಆಕ್ರೋಶ ಹೊರಹಾಕಿದ್ದಾರೆ. ಪ್ರತಿಭಟನೆಯಲ್ಲಿ 50ಕ್ಕೂ ಹೆಚ್ಚು ಮಹಿಳೆಯರು ಪಾಲ್ಗೊಂಡಿದ್ದರು

# ಎಸ್ಸಿ ಪಟ್ಟಿಗೆ ಸಮುದಾಯಗಳ ಸೇರಿಸಿ




ಮೈಸೂರು: ರಾಜ್ಯದ ಎಸ್‌ಸಿ ಪಟ್ಟಿಯಲ್ಲಿ ನೈಜ ಅಸ್ಪೃಶ್ಯರಾದ ಹೊಲೆಯ, ಮಾದಿಗ ಸಮುದಾಯಗಳೊಡನೆ ಅಸಂವಿಧಾನಿಕವಾಗಿ ಸೇರ್ಪಡೆಗೊಂಡಿರುವ ಸ್ಪರ್ಶ ಓಬಿಸಿ ಜಾತಿಗಳಾದ ಬಂಜಾರ, ಲಂಬಾಣಿ, ಭೋವಿ, ಕೊರಮ, ಕೊರಚನ, ಬೇಡ– ಬುಡ್ಗ ಜಂಗಮಗಳನ್ನು ರಾಜ್ಯ ಸಚಿವ ಸಂಪುಟದ ಸದ್ಯದಲ್ಲೇ ನಡೆಯಲಿರುವ ಸಭೆಯಲ್ಲಿ ಬೇರ್ಪಡಿಸಬೇಕು ಎಂದು ಡಾ.ಬಿ.ಆರ್. ಅಂಬೇಡ್ಕರ್ ಸ್ವಾಭಿಮಾನ– ಜಾಗೃತಿ ಅಭಿಯಾನ ಸಮಿತಿ ಅಧ್ಯಕ್ಷ ಕೃಷ್ಣ ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಒಳ ಮೀಸಲಾತಿಗೆ ಈ ಸ್ಪರ್ಶ ಜಾತಿಗಳೇ ಅಡ್ಡಿಯಾಗಿವೆ. ಇವುಗಳನ್ನು ಪಟ್ಟಿಯಿಂದ ಹೊರ ತೆಗೆಯದ ಹೊರತು ಒಳ ಮೀಸಲಾತಿ ಸಮಸ್ಯೆ ಬಗೆಹರಿಯುವುದಿಲ್ಲ. ಜೊತೆಗೆ, ಶಾಶ್ವತ ಪರಿಹಾರವೂ ಅಸಾಧ್ಯ ಎಂದು ಹೇಳಿದರು. ಅಲ್ಲದೆ, ನೈಜ ಪರಿಶಿಷ್ಟ ಜಾತಿ ಸಮುದಾಯಗಳ ಸಾಂವಿಧಾನಿಕ ಹಕ್ಕು, ಅವಕಾಶ, ಸವಲತ್ತುಗಳನ್ನು ಸಂರಕ್ಷಣೆ ಮಾಡುವಲ್ಲಿ ವಿಫಲರಾಗಿರುವ ಎಸ್‌ಸಿ ಮೀಸಲು ಕ್ಷೇತ್ರದ ಶಾಸಕರು, ಸಂಸದರು, ಸಚಿವರು ಈ ಕೂಡಲೇ ತಮ್ಮ ಬೇಜವಾಬ್ದಾರಿತನ, ಕರ್ತವ್ಯ ಲೋಪ, ಸೋಗಲಾಡಿತನಗಳ ನೈತಿಕ ಹೊಣೆಗಾರಿಕೆ ಹೊತ್ತು ರಾಜೀನಾಮೆ ನೀಡಬೇಕೆಂದು ಆಗ್ರಹಿಸಿದರು. ಇನ್ನಿತರ ಮುಖಂಡರಾದ ನಂಜುಂಡ ಮೌರ್ಯ, ಸ್ವಾಮಿ, ರಾಚಪ್ಪ, ಸತೀಶ್ ಮೊದಲಾದವರು ಹಾಜರಿದ್ದರು.

## ಮೊದಲ ಪುಟದಿಂದ

### ಮಠ ನೈತಿಕ ಮೌಲ್ಯಗಳ ದಾರಿದೀಪ

ಅರಣ್ಯ, ಆಕಳು, ಅನುಗ್ರಹ, ಅನುಕಂಪದ ಸಿದ್ಧಾಂತದ ಮೇಲೆ ಕೆಲಸ ಮಾಡುತ್ತಿದೆ. ಇದಕ್ಕಾಗಿ ನಾವು ಸಾಮೂಹಿಕ ಸಂಕಲ್ಪ ಮಾಡಬೇಕು ಎಂದು ತಿಳಿಸಿದರು.

ಶ್ರೀ ಆದಿಚುಂಚನಗಿರಿ ಮಠದಂತಹ ಆಧ್ಯಾತ್ಮಿಕ ಕೇಂದ್ರ ಈ ರಾಜ್ಯದಲ್ಲಿದೆ. ಇವೆಲ್ಲವೂ ಸಮಾಜಕ್ಕೆ ದಾರಿ ದೀಪವಾಗಿವೆ. ಜಗತ್ತಿನಲ್ಲಿ ಎಲ್ಲೂ ಇಂತಹ ದೊಡ್ಡ ಪರಂಪರೆ ಇಲ್ಲ. ಶ್ರೀ ಮಠದಲ್ಲಿ ನಿರಂತರತೆ ರೂಪದಲ್ಲಿ ಪರಂಪರೆ ಮುಂದುವರಿದಿದೆ ಎಂದು ಮೋದಿ ಹೇಳಿದರು. ಬಾಲಗಂಗಾಧರನಾಥ ಸ್ವಾಮೀಜಿ ಅವರಂತಹ ಮಹಾತ್ಮರು ಈ ಮಣ್ಣಿನಲ್ಲಿ ಹುಟ್ಟಿದ್ದಾರೆ. ಶಿಕ್ಷಣ ಕ್ಷೇತ್ರದಲ್ಲಿ ಸಾವಿರಾರು ಸಂಸ್ಥೆಗಳನ್ನು ಸ್ಥಾಪಿಸಿದ್ದಾರೆ. ಆರೋಗ್ಯ ಕ್ಷೇತ್ರದಲ್ಲಿ ದೂರದೃಷ್ಟಿಯ ಹೆಜ್ಜೆಯನ್ನು ಇಟ್ಟಿದ್ದಾರೆ. ಸ್ವಾಮೀಜಿಗಳು ಕೇವಲ ಮನುಷ್ಯರ ಉದ್ಧಾರ ಮಾಡ್ತಿಲ್ಲ. ಜೀವ ಸಂಕುಲದ ರಕ್ಷಣೆ ಮಾಡಿದ್ದಾರೆ. ನವಿಲಿನ ರಕ್ಷಣೆಯನ್ನು ಮಾಡಿದ್ದಾರೆ. ಅದಕ್ಕಾಗಿ ನವಿಲಿನ ಕಲಾಕೃತಿಯ ಉಡುಗೊರೆ ನೀಡಿದ್ದಾರೆ. ನವಿಲು ನಮ್ಮಲ್ಲೂ ಇವೆ ಎಂದು ಹೇಳಿದರು.

ಸ್ವಾಮಿ ಪರಮಾತ್ಮಾನಂದ ಸರಸ್ವತಿ ಜೀ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್, ಕೇಂದ್ರ ಸಚಿವರಾದ ಎಚ್.ಡಿ.ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ಸಚಿವ ಚಲುವರಾಯಸ್ವಾಮಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಉಪಸ್ಥಿತರಿದ್ದರು. ನವಿಲು ಆಕೃತಿ ಉಡುಗೊರೆ: ಭೈರವೈಕ್ಯ ಮಂದಿರ ಉದ್ಘಾಟಿಸಿದ ಬಳಿಕ ಪ್ರಧಾನಿ ಮೋದಿ ಅವರನ್ನು ನಿರ್ಮಲಾನಂದನಾಥ ಶ್ರೀಗಳು ಗೌರವಿಸಿದರು. ರೇಷ್ಮೆ ಶಾಲು ಹಾಕಿ, ಹಾರ ಹಾಕಿ ಅಭಿನಂದನೆ ಸಲ್ಲಿಸಿದರು. ಬಳಿಕ ಮೋದಿ ಅವರಿಗೆ ನವಿಲಿನ ಆಕೃತಿ ಉಡುಗೊರೆ ನೀಡಿದರು.

### ಮಂದಿರದ ವಿಶೇಷವೇನು?

**ಮಂದಿರವಾಗಿದೆ. ಒಡಿಶಾದ ಸೂರ್ಯ ದೇಗುಲದ ಕಲೆಯ ನಿರೂಪಣೆ. ಗೋಪುರಗಳು, ಶಿಲ್ಪಕಲೆಯ ಅದ್ಭುತ ಕೆತ್ತನೆಗಳು ಬ್ರಹ್ಮಾಂಡದ ಕೆತ್ತನೆಗಳು ಮಂದಿರಕ್ಕೆ ಮೆರಗು ನೀಡಿವೆ. ಮಂದಿರದ ನಿರ್ಮಾಣಕ್ಕೆ ಕ್ರೈರಾ ಎಂಬ ಕಲ್ಲು ಹೆಚ್ಚು ಬಳಕೆ ಮಾಡಲಾಗಿದೆ. ಇಳಕಲ್ ಹಾಗೂ ಸಂತೆಕಲ್ ಎಂಬ ಮಾದರಿ ಕಲ್ಲುಗಳು ಕೆತ್ತನೆಗೆ ಬಳಕೆಯಾಗಿವೆ. ಸತತ ಆರೇಳು ವರ್ಷಗಳ ಪರಿಶ್ರಮದಿಂದ ಭವ್ಯ ಮಂದಿರ ನಿರ್ಮಾಣಗೊಂಡಿದೆ. ಶಂಕರಸ್ತಪತಿ ಎಂಬ ಶಿಲ್ಪಿಯ ಕೈಚಳದಿಂದ ಮಂದಿರ ಮೂಡಿ ಬಂದಿದೆ. ಬೆಳಗಾವಿಸೌಧ, ಬೆಂಗಳೂರಿನ ವಿಕಾಸಸೌಧ ಸೇರಿದಂತೆ ಮೊದಲಾದ ಭವ್ಯ ಕಟ್ಟಡ ನಿರ್ಮಿಸಿದ ಕೀರ್ತಿ ಶಂಕರ ಸ್ತಪತಿಗಿದೆ.**

### ಮೋದಿಗೆ ಸಿದ್ದು ಸ್ವಾಗತ

ಪರಿಹರಿಸುವುದರಿಂದ ಒಕ್ಕೂಟ ವ್ಯವಸ್ಥೆಯ ಸ್ಫೂರ್ತಿಯನ್ನು ಪುನರುಚ್ಚರಿಸಿದಂತಾಗುತ್ತದೆ. ಭಾರತದ ಅಭಿವೃದ್ಧಿಯ ನಮ್ಮ ಹಂಚಿಕೆಯ ದೃಷ್ಟಿಕೋನವನ್ನು ಬಲಪಡಿಸುತ್ತದೆ. ಈ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ನಿಮ್ಮ ಹಸ್ತಕ್ಷೇಪವನ್ನು ಕರ್ನಾಟಕದ ಜನರು ಭರವಸೆ ಮತ್ತು ವಿಶ್ವಾಸದಿಂದ ಎದುರು ನೋಡುತ್ತಿದ್ದಾರೆ ಎಂದು ಪತ್ರದಲ್ಲಿ ಸಿಎಂ ಉಲ್ಲೇಖ ಮಾಡಿದ್ದಾರೆ.

ಮೈಸೂರಿಗೆ ಹೈಸ್ಪೀಡ್ ರೈಲು ವಿಸ್ತರಣೆ ಮನವಿ ಮಾಡಿದ್ದಾರೆ. ಪ್ರಸ್ತಾವಿತ ಹೈ–ಸ್ಪೀಡ್ ರೈಲು ಕಾರಿಡಾರ್‌ನಲ್ಲಿ ಬೆಂಗಳೂರು– ಮೈಸೂರು ವಿಭಾಗವನ್ನು ಸೇರಿಸಬೇಕು. ಬೆಂಗಳೂರಿನ ಕುಡಿಯುವ ನೀರಿನ ಅಗತ್ಯಕ್ಕಾಗಿ ಮೇಕೆದಾಟು ಕುಡಿಯುವ ನೀರಿನ ಯೋಜನೆಗೆ ಅನುಮೋದನೆ ನೀಡುವುದು ಸೇರಿದಂತೆ 18 ಬೇಡಿಕೆಗಳನ್ನು ಈಡೇರಿಸಲು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

### ಜನರ ಮಾತು ಸಿಹಿ

ಭೈರವೈಕ್ಯ ಮಂದಿರ ಉದ್ಘಾಟಿಸಿ ಮಾತನಾಡಿದ ಮೋದಿ, ಸಕ್ಕರೆ ನಗರ ಮಧುರ ಮಂಡ್ಯ ಎಂದು ಕನ್ನಡದಲ್ಲಿ ಹೇಳಿದರು. ಈ ಜಾಗ ಕಬ್ಬಿನ ಸಿಹಿಗೆ ಫೇಮಸ್. ಜನರು ಕೂಡ ಕಬ್ಬಿನಂತೆ ಸಿಹಿಯ ಮನಸ್ಸಿನವರು. ಕರ್ನಾಟಕ ರಾಜ್ಯ ತಂತ್ರಜ್ಞಾನ, ತತ್ವಜ್ಞಾನ ಎರಡರಲ್ಲೂ ಸಮೃದ್ಧವಾಗಿದೆ ಎಂದು ಮೋದಿ ಬಣ್ಣಿಸಿದರು. ಮಂಡ್ಯ ಜಿಲ್ಲೆ ರಾಗಿ ಮುದ್ದೆಗೂ ಜನಪ್ರಿಯ ಎಂಬುದು ತಿಳಿದಿದೆ. ನಮ್ಮ ಮುಂದೆ ದೇವೇಗೌಡರು ಇದ್ದಾರೆ. ಅವರು ರಾಗಿ ಮುದ್ದೆ ಯನ್ನು ಫೇಮಸ್ ಮಾಡಿದ್ದಾರೆ. ರಾಗಿಯನ್ನು ಆಹಾರದಲ್ಲಿ ಬಳಸಿದರೆ ಬೊಜ್ಜು ಇರಲ್ಲ. ಎಣ್ಣೆ ಪದಾರ್ಥಗಳ ಸೇವನೆ ಕಡಿಮೆ ಮಾಡಿ. ಆಹಾರದಲ್ಲಿ ಸಿರಿಧಾನ್ಯ ಸೇವನೆ ರೂಢಿಸಿಕೊಳ್ಳಿ ಎಂದು ಮೋದಿ ಕರೆ ನೀಡಿದರು. ಮಂಡ್ಯದ ನೀರಿನ ಮಹತ್ವ ಗೊತ್ತಿದೆ. ಈ ಕ್ಷೇತ್ರ ಕಾವೇರಿಯ ಪವಿತ್ರ ಭೂಮಿ. ನಾವು ನೀರನ್ನು ಉಳಿಸುವ ಕೆಲಸ ಮಾಡಬೇಕು. ಕಾವೇರಿಗಾಗಿ ನಿಮ್ಮ ಅಮ್ಮನ ಹೆಸರಿನಲ್ಲಿ ಕೋಟಿ ಗಿಡಗಳನ್ನು ನೆಡುವಂತೆ ಮೋದಿ ಕರೆ ನೀಡಿದರು. ನಿಮ್ಮ ಗ್ರಾಮದಲ್ಲಿ ಸ್ವಚ್ಛತೆ ಕಾಪಾಡಿ. ಸ್ವದೇಶಿ ಉತ್ಪಾದನೆಯನ್ನು ಬೆಂಬಲಿಸಿ. ವೋಕಲ್ ಫಾರ್ ಲೋಕಲ್ ಗಾಗಿ ಬದುಕಿ. ಸ್ವದೇಶಿ ಟೂರಿಸಂ ಅನ್ನು ಬೆಂಬಲಿಸಿ. ಕೆಮಿಕಲ್ ಮುಕ್ತ ಕೃಷಿಯನ್ನು ಮಾಡಿ ಎಂದರು.

**ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರ**
ದೊಡ್ಡಕೆರೆ ಮೈದಾನ, ಇಂದಿರಾನಗರ, ಮೈಸೂರು–570010.
ದೂ: 0821–2523626, ಇ–ಮೇಲ್: exhibitionauthority@gmail.com

ಸಂಖ್ಯೆ: ಕವಪ್ರಾ/ಮುಕಾನಿ/2026–27 ದಿನಾಂಕ: 15.04.2026

**ಪ್ರಕಟಣೆ**

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣವನ್ನು ಅಭಿವೃದ್ಧಿಗೊಳಿಸುವ ಕಾಮಗಾರಿಗಳಿಗೆ Architectural consultancyಗೆ Short Term Quatation Notification ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ಸದರಿ ಟೆಂಡರ್‌ನ ವಿವರಗಳು ಈ ಕೆಳಕಂಡಂತಿದೆ.

| ಕ್ರ. ಸಂ. | ಕಾಮಗಾರಿ ಹೆಸರು | ಟೆಂಡರ್ ಸಲ್ಲಿಸುವ ಕೊನೆ ದಿನಾಂಕ |
|---|---|---|
| 1 | Architectural consultancy for rendering comprehensive architecture & Engineering design Services for the Mysuru International Exhibition Centre (MICE) Project inside Karnataka Exhibition Authority Premises, Mysuru. | 24.04.2026ರ ಸಂಜೆ 4.00ಕ್ಕೆ |
| 2 | Architectural consultancy for rendering comprehensive architecture & Engineering design Services for the Food court and Commercial area Project inside Karnataka Exhibition Authority Premises, Mysuru. | 24.04.2026ರ ಸಂಜೆ 4.00ಕ್ಕೆ |

ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾಗಿದ್ದಲ್ಲಿ ಕಚೇರಿ ವೇಳೆಯಲ್ಲಿ ಕಚೇರಿಯ ಸಹಾಯಕ ಕಾರ್ಯಪಾಲಕ ಅಭಿಯಂತರರು (ಸಿವಿಲ್) ರವರನ್ನು ಸಂಪರ್ಕಿಸಿ ಮಾಹಿತಿ ಪಡೆಯಬಹುದು ಎಂದು ಈ ಮೂಲಕ ಕೋರಿದೆ. **ಮೊಬೈಲ್ ಸಂಖ್ಯೆ :** 7892920878. **ಇ–ಮೇಲ್ ಸಂಖ್ಯೆ:** exhibitionauthority@gmail.com

ಸಹಿ/–
**ಸಹಾಯಕ ಕಾರ್ಯಪಾಲಕ ಅಭಿಯಂತರರು**
ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ, ಮೈಸೂರು

DIPR/MYS/60/SA/2025-26

# ಮೆಡಿಕಲ್ ಕಾಲೇಜು ಕೇಂದ್ರ ಪ್ರಯೋಗಾಲಯ ಖಾಸಗೀಕರಣ ಹಿಂಪಡೆಯಿರಿ



ಚಾಮರಾಜನಗರ, ನಗರದ ಎಡಬೆಟ್ಟದಲ್ಲಿರುವ ಸರ್ಕಾರಿ ಮೆಡಿಕಲ್ ಕಾಲೇಜಿನ ಕೇಂದ್ರ ಪ್ರಯೋಗಾಲಯದ ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸುವುದು ಬೇಡ ಎಂದು ಸರಕಾರಿ ಆಸ್ಪತ್ರೆ ಉಳಿಸಿ ಹೋರಾಟ ಸಮಿತಿಯ ರಾಜ್ಯ ಸಂಚಾಲಕ ಎಂ.ಬಿ.ನಾಗಣ್ಣಗೌಡ ಒತ್ತಾಯಿಸಿದರು.

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿ, ಚಾಮರಾಜನಗರ ಸರ್ಕಾರಿ ಮೆಡಿಕಲ್ ಕಾಲೇಜು ಕೇಂದ್ರ ಪ್ರಯೋಗಾಲಯದ ನಿರ್ವಹಣೆಯನ್ನು ಖಾಸಗಿಯವರಿಗೆ ವಹಿಸಿರುವ ಕಾಲೇಜು ನಿರ್ದೇಶಕರ ಕ್ರಮ ಜನವಿರೋಧಿಯಾಗಿದ್ದು, ಇದು ಸಾರ್ವಜನಿಕರ ಜೇಬಿಗೆ ಕನ್ನ ಹಾಕುವ ತಮ್ಮ ಜೇಬು ತುಂಬಿಸುವ ಕೆಲಸವಾಗಿದ್ದು, ಇದರ ಬಗ್ಗೆ ಸ್ಥಳೀಯ ಶಾಸಕರು, ಸಂಸದರು, ಜಿಲ್ಲಾಧಿಕಾರಿಗಳು ಗಮನ ಹರಿಸಿ ಸರ್ಕಾರದ ವ್ಯವಸ್ಥೆಯಲ್ಲಿ ಮುಂದುವರಿಸಬೇಕು ಇಲ್ಲದಿದ್ದರೆ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಸಿದರು.ಈ ಹಿಂದೆ ಮೆಡಿಕಲ್ ಕಾಲೇಜಿಗೆ ಸೇರಿದ ಪ್ರಯೋಗಾಲಯದ ನಿರ್ವಹಣೆಯನ್ನು ಕಾಲೇಜು ವತಿಯಿಂದಲೆ ನಿರ್ವಹಿಸಲಾಗುತಿತ್ತು.ವಾರ್ಷಿಕ ಮೂರು ಕೋಟಿ ರೂಗಳಲ್ಲಿ ಎಲ್ಲ ಬಗೆಯ ಖಾಯಿಲೆಗಳ ತಪಾಸಣೆ ಸಾಧ್ಯವಾಗಿತ್ತು. ಆದರೆ ಖಾಸಗಿ ಲ್ಯಾಬೊರೇಟರಿಗಳ ಲಾಭಿಗೆ ಮಣಿದಿರುವ ನಿರ್ದೇಶಕ ಮಂಜುನಾಥ್ ಪ್ರಯೋಗಾಲಯದ ನಿರ್ವಹಣೆಯನ್ನು ಮ್ಯಾಕ್ಸಿಂ ಬಯೋಮೆಡಿಕಲ್ಸ್ ಎಂಬ ಖಾಸಗಿ ಏಜೆನ್ಸಿಗೆ ವಹಿಸುವ ದುಬಾರಿ ತೀರ್ಮಾನದ ಮೂಲಕ ಆರೋಗ್ಯ ವ್ಯವಸ್ಥೆಯನ್ನು ಖಾಸಗೀಕರಿಣಗೊಳಿಸುವ ಪ್ರಯತ್ನ ನಡೆಸಿದ್ದಾರೆ.ಕಾಲೇಜಿಗೆ ಸೇರಿದ ಪ್ರಯೋಗಾಲಯ ಸುಸ್ಥಿತಿಯಲ್ಲಿದ್ದು ಅದರ ಮೂಲಕವೇ ಪ್ರಯೋಗಾಲಯದ ನಿರ್ವಹಣೆ ನಡೆಸಿದ್ದರೆ ಕಾಲೇಜಿಗೆ ಯಾವುದೆ ಹೆಚ್ಚುವರಿ ಹೊರೆ ಬೀಳುತ್ತಿರಲಿಲ್ಲ.ಆದರೆ ಈಗಿನ ಖಾಸಗೀಕರಣದ ಪ್ರಯತ್ನದಿಂದ ಕಾಲೇಜಿಗೆ ವಾರ್ಷಿಕ ನಾಲ್ಕು ಕೋಟಿ ಹೆಚ್ಚುವರಿ ಹೊರೆ ಬೀಳಲಿದೆ.ಇದರ ಪರಿಣಾಮ ಆಸ್ಪತ್ರೆಯ ಎಲ್ಲ ಚಿಕಿತ್ಸೆಗಳು ತಪಾಸಣೆಗಳು ದುಬಾರಿಯಾಗಿವೆ.

ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದಿರುವ ಮಾಹಿತಿಯಲ್ಲಿ ಪ್ರಯೋಗಾಲಯದ ಯಂತ್ರಗಳು ಸುಸ್ಥಿತಿಯಲ್ಲಿರುವುದನ್ನು ಸ್ವತ ನಿರ್ದೇಶಕರು ಒಪ್ಪಿಕೊಂಡಿದ್ದಾರೆ.ಹೀಗಿರುವಾಗ ಸರಕಾರದ ಯಾವುದೆ ಆದೇಶ ನಿರ್ದೇಶನವಿಲ್ಲದೆ ಖಾಸಗಿಯವರಿಗೆ ಪ್ರಯೋಗಾಲಯದ ನಿರ್ವಹಣೆ ಗುತ್ತಿಗೆ ನೀಡಿ ಖಾಸಗಿ ಏಜೆನ್ಸಿಗೆ ಲಾಭ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.ಖಾಸಗೀಕರಣದ ಮೂಲಕ ಖಾಸಗಿ ಕಂಪನಿಗೆ ಹಾಗೂ ನಿರ್ದೇಶಕರ ಜೇಬು ಭರ್ತಿಗೊಳಿಸಲು ಮೆಡಿಕಲ್ ಕಾಲೇಜು ಆಸ್ಪತ್ರೆಗೆ ಬರುವ ಸಾರ್ವಜನಿಕರ ಜೇಬಿಗೆ ದರ ಏರಿಕೆಯ ಹೊರೆಯಾಗಲಿದೆ ಎಂದರು.

ಮ್ಯಾಕ್ಸಿಂ ಬಯೋ ಮೆಡಿಕಲ್ಸ್ ಎಂಬ ಖಾಸಗಿ ಏಜೆನ್ಸಿಗೆ ಗುತ್ತಿಗೆ ನೀಡಿದ್ದು.ಈ ಸಂಬಂಧ ಅಗತ್ಯ ಮಾಹಿತಿ ಒದಗಿಸದೆ ವಿಳಂಬಗೊಳಿಸಿ ಮಾಹಿತಿ ನೀಡಲಾಗಿದೆ.

ಈಗಾಗಲೇ ಪ್ರಭಾರ ಹುದ್ದೆಯಲ್ಲಿರುವ ನಿರ್ದೇಶಕರು ತಮ್ಮ ಪತ್ನಿ ಹೆಸರಿನಲ್ಲಿ ಬೇನಾಮಿ ಏಜೆನ್ಸಿ ಸೃಷ್ಟಿಸಿ ಕಾಲೇಜಿನಿಂದ ಔಷಧ ಇತ್ಯಾದಿ ಖರೀದಿಗಳ ಟೆಂಡರ್ ನೀಡಿದ ಆರೋಪ ಎದುರಿಸುತ್ತಿದ್ದಾರೆ.ಮಾಹಿತಿ ಹಕ್ಕು ಕಾಯ್ದೆಯಡಿ ಮಾಹಿತಿ ಕೋರಿದರೆ ಸಕಾಲಕ್ಕೆ ಮಾಹಿತಿ ನೀಡುವುದಿಲ್ಲ.ವೈದ್ಯಕೀಯ ಶಿಕ್ಷಣ ಸಚಿವರು ಕೂಡಲೇ ಅನರ್ಹ ನಿರ್ದೇಶಕರನ್ನು ಹುದ್ದೆಯಿಂದ ಕೈಬಿಟ್ಟು ಅರ್ಹರನ್ನು ಪೂರ್ಣ ಪ್ರಮಾಣದ ನಿರ್ದೇಶಕರಾಗಿ ನೇಮಕಗೊಳಿಸಿ ಆಡಳಿತದಲ್ಲಿ ದಕ್ಷತೆ ತರಬೇಕು.ಹಾಲಿ ನಿರ್ದೇಶಕರ ಅವಧಿಯಲ್ಲಿ ನಿಯಮಬಾಹಿರವಾಗಿ ನಡೆಸಿರುವ ಖರೀದಿ.ಕಾಮಗಾರಿಗಳ ಹುದ್ದೆಗಳ ಬಡ್ತಿ ಸಂಬಂದ ರಾಜ್ಯ ಸರ್ಕಾರ ನಿವೃತ್ತ ನ್ಯಾಯಧೀಶರ ನೇತೃತ್ವದಲ್ಲಿ ತನಿಖಾ ಸಮಿತಿ ರಚಿಸಬೇಕು. ಪ್ರಯೋಗಾಲಯದ ನಿರ್ವಹಣೆಯನ್ನು ಖಾಸಗಿ ಏಜೆನ್ಸಿಗೆ ವಹಿಸಿರುವ ತೀರ್ಮಾನವನ್ನು ಹಿಂಪಡೆಯಬೇಕು.ಈ ಸಂಬಂದ ರಾಜ್ಯ ಹೈಕೋರ್ಟ್ ನಲ್ಲಿ ಸಾರ್ವಜನಿಕ ಹಿತಾಸಕ್ತಿ ಪ್ರಕರಣ ದಾಖಲಿಸಲಾಗುವುದು.ಜಿಲ್ಲೆಯ ಶಾಸಕರು ಸಚಿವರು ಈ ಕುರಿತು ದನಿ ಎತ್ತಬೇಕು ಎಂದು ಆಗ್ರಹಿಸಿದರು

ಪತ್ರಿಕಾಗೋಷ್ಠಿಯಲ್ಲಿ ಸರಕಾರಿ ಆಸ್ಪತ್ರೆ ಉಳಿಸಿ ಹೋರಾಟ ಸಮಿತಿಯ ಎಸ್ ಕೆ ರಾಜೂಗೌಡ ರಾಜೇಂದ್ರ ಸಿಂಗ್ ಬಾಬು. ಕರ್ನಾಟಕ ರಾಷ್ಟ ಸಮಿತಿ ಪಕ್ಷದ ಜಿಲ್ಲಾಧ್ಯಕ್ಷ ಎಸ್.ಶಿ ವದೇವಪ್ಪ, ಎಸ್.ಸಿದ್ದಯ್ಯ, ಚಿನ್ನಸ್ವಾಮಿ, ಮಾದೇಶ್. ರೈತಸಂಘದ ಸಾಮುಹಿಕ ನಾಯಕತ್ವದ ಮುಖಂಡ ಮಲ್ಲೇಶ್, ಮಂಜು ಕೊತ್ತಲವಾಡಿ ಹಾಜರಿದ್ದರು.

## ದಲಿತರು, ಮಹಿಳೆಯರು, ಕಾರ್ಮಿಕರ ಹಕ್ಕುಗಳ ಪರ ಹೋರಾಡಿದ ಅಂಬೇಡ್ಕರ್

**ಪಿ.ಮರಿಸ್ವಾಮಿ**



ಚಾಮರಾಜನಗರ, ಅಂಬೇಡ್ಕರ್ ಬರೀ ವ್ಯಕ್ತಿ ಅಲ್ಲ ಅವರು ಮಹಾನ್ ಶಕ್ತಿಯಾಗಿದ್ದಾರೆ ಎಂದು ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ ಅಭಿಪ್ರಾಯಪಟ್ಟರು.

ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಸಂವಿಧಾನ ಶಿಲ್ಪಿ ಭಾರತರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 135 ನೇ ಜಯಂತಿ ಕಾರ್ಯಕ್ರಮದಲ್ಲಿ ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದರು. ಅಂಬೇಡ್ಕರ್ ಇಡೀ ಜಗತ್ತು ಮೆಚ್ಚುವ ಸಂವಿಧಾನವನ್ನು ರಚಿಸಿದ್ದಾರೆ. ಈ ಮೂಲಕ ಭಾರತ ದೇಶದ ಆಡಳಿತ ವ್ಯವಸ್ಥೆಗೆ ಹೊಸ ಆಯಾಮ ತಂದುಕೊಟ್ಟಿದ್ದಾರೆ. ದಲಿತರು, ಮಹಿಳೆಯರು ಹಾಗೂ ಕಾರ್ಮಿಕರ ಪರವಾಗಿ ಹೋರಾಡಿದ್ದಾರೆ.

ಹೀಗಾಗಿ ನಾವೆಲ್ಲರೂ ಅವರನ್ನು ಸದಾ ಸ್ಮರಿಸಿಕೊಂಡು, ಅವರು ಸಾಗಿ ಬಂದ ದಾರಿಯಲ್ಲಿ ನಡೆಯಬೇಕಿದೆ ಎಂದು ತಿಳಿಸಿದರು.

ಚುಡಾ ಅಧ್ಯಕ್ಷ ಮಹಮದ್ ಅಸ್ಗರ್, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ.ಕೆ. ರವಿಕುಮಾರ್, ಕೆಪಿಸಿಸಿ ರಾಜ್ಯ ಕಾರ್ಯದರ್ಶಿ ವಕೀಲ ಚಿನ್ನಸ್ವಾಮಿ, ಕೆಪಿಸಿಸಿ ಸದಸ್ಯ ಸೈಯದ್ ರಫಿ, ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಆರ್. ಮಹದೇವ್, ಜಿಲ್ಲಾ ಕಾಂಗ್ರೆಸ್ ಗ್ರಾಮಾಂತರ ಅಧ್ಯಕ್ಷ ಎ.ಎಸ್.ಗುರುಸ್ವಾಮಿ, ಪಿ,ಎಲ್,ಡಿ,ಬ್ಯಾಂಕ್ ನಿರ್ದೇಶಕ ಬಿಸಲವಾಡಿ ರವಿ, ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಅಧ್ಯಕ್ಷ ಹೆಚ್.ವಿ.ಚಂದ್ರು, ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ತಾಲ್ಲೂಕು ಅಧ್ಯಕ್ಷ ಸೋಮೇಶ್ವರ್, ಸದಸ್ಯರಾದ ಮರಿಯಾಲದಹುಂಡಿ ಕುಮಾರ್ ರಾಜೇಶ್, ಚಿನ್ನಸ್ವಾಮಿ, ಕುಮಾರ್ ಸ್ವಾಮಿ, ಜಿಲ್ಲಾ ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ನಾಗರತ್ನ, ಗ್ರಾಮಾಂತರ ಮಹಿಳಾ ಬ್ಲಾಕ್ ಅಧ್ಯಕ್ಷೆ ಶಕುಂತಳಾ, ಚುಡಾ ಸದಸ್ಯ ರಾಜು, ಪುಟ್ಟಸ್ವಾಮಿ, ನಾಗವಳ್ಳಿ ನಾಗಯ್ಯ, ಜಿಲ್ಲಾ ಕಾಂಗ್ರೆಸ್ ಪಕ್ಷದ ಕಚೇರಿ ಕಾರ್ಯ ದರ್ಶಿ ಎ,ಎಚ್, ನಸ್ರುಲ್‌ಖಾನ್, ಎಪಿಎಂಸಿ ಅಧ್ಯಕ್ಷ ಗುರುಸ್ವಾಮಿ, ಸದಸ್ಯ ಸೋಮೇಶ್, ನಗರಸಭೆ ಮಾಜಿ ಅಧ್ಯಕ್ಷೆ ಚಿನ್ನಮ್ಮ, ಚುಡಾ ಮಾಜಿ ಅಧ್ಯಕ್ಷ ಸುಹೇಲ್ ಆಲಿಖಾನ್, ನಗರಸಭೆ ಮಾಜಿ ಸದಸ್ಯರಾದ ಮಹದೇವಯ್ಯ, ಕಲಾವತಿ, ಲತಾ ಜತ್ತಿ, ಮಹೇಶ್, ಕೆ,ಎಸ್,ರೇವಣ್ಣ, ಆಯುಬ್ ಖಾನ್, ಇಮ್ರಾನ್‌ಅಹಮದ್, ಅಪ್ಸರ್ ಅಹಮದ್, ಸೈಯದ್‌ಇರ್ಷಾದ್, ಜಿಲ್ಲಾ ಪ್ರಚಾರ ಸಮಿತಿ ಅಧ್ಯಕ್ಷ ಮಧುಸೂದನ್, ಆಯ್ಯನಪುರ ಶಿವಕುಮಾರ್, ಚಂಗುಮಣಿ , ವಕೀಲ ಪೃಥ್ವೀ, ಗೋವಿಂದರಾಜು, ಪವನ್‌ಮೂರ್ತಿ, ಅಶೋಕ್, ಪಿ.ಕುಮಾರ್ನಾಯಕ್, ರಾಮಸಮುದ್ರ ಬಸವಣ್ಣ ಕೊತ್ತನಹುಂಡಿ, ಸೋಮಣ್ಣ ಹರವೆ ನಾಗೇಶ್, ಜಿಲ್ಲಾ ಡಾ.ಬಾಬು ಜಗಜೀವನರಾಮ್ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಎಚ್.ಎಚ್.ನಾಗರಾಜು, ಪ್ರಧಾನ ಕಾರ್ಯದರ್ಶಿ ಸುಂದರ್, ಶಿವಕುಮಾರ್ ರಾಮಸಮುದ್ರ, ಮಲ್ಲಯ್ಯನ ಹುಂಡಿ ಚನ್ನಬಸವಯ್ಯ, ಗ್ರಾ,ಪಂ ಮಾಜಿ ಅಧ್ಯಕ್ಷ ಮಹದೇವಯ್ಯ, ಸಿದ್ದರಾಜು, ಪಕ್ಷದ ಕಾರ್ಯಕರ್ತರು, ಮುಖಂಡರು ಹಾಜರಿದ್ದರು.

# 30ರಿಂದ ಅನಿರ್ದಿಷ್ಟಾವಧಿ ಮುಷ್ಕರ

## ಮಾಸಿಕ ವೇತನಕ್ಕೆ ಅರಣ್ಯ ಇಲಾಖೆ ಹೊರಗುತ್ತಿಗೆ ನೌಕರರ ಆಗ್ರಹ



ಮೈಸೂರು: ಅವೈಜ್ಞಾನಿಕ ಹೊರಗುತ್ತಿಗೆ ನಿಯೋಜನೆ ಕೈ ಬಿಟ್ಟು ಮಾಸಿಕ ವೇತನ ಜಾರಿ ಸೇರಿ ತಮ್ಮ ಹಲವು ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಏ.30ರಿಂದ ಕೆಲಸ ಸ್ಥಗಿತಗೊಳಿಸಿ ಅನಿರ್ಧಿಷ್ಟ ಧರಣಿ ಕೈಗೊಳ್ಳಲು ಬೆಂಗಳೂರಿನ ಕರ್ನಾಟಕ ರಾಜ್ಯ ಅರಣ್ಯ ಇಲಾಖೆ ವನ್ಯಜೀವಿ ಘಟಕಗಳ ದಿನಗೂಲಿ ಹೊರಗುತ್ತಿಗೆ ನೌಕರರ ಸಂಘ ನಿರ್ಧರಿಸಿದೆ.

ಈ ಸಂಬಂಧ ನಗರದ ಖಾಸಗಿ ಹೋಟೆಲ್ ನಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಸಂಘದ ರಾಜ್ಯಾಧ್ಯಕ್ಷ ಎ.ಎಂ.ನಾಗರಾಜು, ಮಾಸಿಕ ವೇತನ ಜಾರಿಗೊಳಿಸಬೇಕು. ಹತ್ತು ವರ್ಷ ಸೇವೆ ಪೂರ್ಣಗೊಳಿಸಿರುವ ನೌಕರರಿಗೆ ದಿನಗೂಲಿ ಕ್ಷೇಮಾಭಿವೃದ್ಧಿ ಸೌಲಭ್ಯ ಜಾರಿಗೊಳಿಸಬೇಕು. ಕರ್ತವ್ಯದ ವೇಳೆ ನಿಧನರಾದ ಕಲ್ಲಹಾಲ ವಲಯದ ನೌಕರ ಗೋಪಾಲ ಸಾವಿನ ಬಗ್ಗೆ ತನಿಖೆಯಾಗಬೇಕೆಂದರು.

ನೌಕರರ ಇಪಿಎಫ್ ಹಾಗೂ ಇಎಸ್ ಐ ಹಣ ಬಿಡುಗಡೆಗೊಳಿಸಬೇಕು. ಪರಿಹಾರ ಭತ್ಯೆ ಹಣ ಬಿಡುಗಡೆ ಮಾಡಬೇಕು. ಈ ವಿಚಾರದಲ್ಲಿ ಟೆಂಡರ್ ದಾರರಿಂದ ಆಗಿರುವ ವಂಚನೆ ಸರಿಪಡಿಸಬೇಕು. ಮಾಸಿಕ ಹೆಚ್ಚುವರಿ ಮುಂದುವರೆಸಬೇಕು ಎಂದು ಆಗ್ರಹಿಸಿದರು.

ರಾಜ್ಯದ 13 ವೃತ್ತಗಳಲ್ಲಿ 3 ಸಾವಿರಕ್ಕಿಂತಲೂ ಹೆಚ್ಚಿನ ಮಂದಿ 1996 ರಿಂದಲೂ ಸೇವೆ ಸಲ್ಲಿಸುತ್ತಿದ್ದೇವೆ. ಆನೆ ಕಾರ್ಯಾಚರಣೆ, ಬೆಂಕಿ ನಂದಿಸುವ ಕಾರ್ಯ ಸೇರಿ ಹಲವು ಸವಾಲಿನ ಕೆಲಸ ಮಾಡುತ್ತಿದ್ದಾರೆ. 8 ತಾಸೂ ಕೂಲಿ ಪಡೆದು 24 ತಾಸು ದುಡಿಸಿಕೊಳ್ಳಲಾಗುತ್ತಿದೆ. ಈ ಕಾರ್ಯದೊತ್ತಡದಿಂದ ಅನೇಕರು ಬ್ರೈನ್ ಸ್ಟ್ರೋಕ್, ಪಾರ್ಶ್ವವಾಯು ಪೀಡಿತಕ್ಕೆ ಒಳಗಾಗಿದ್ದಾರೆಂದು ದೂರಿದರು. ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಹಲವು ಬಾರಿ ಹೋರಾಟ ಮಾಡಿ ಮನವಿ ಸಲ್ಲಿಸಿದ್ದೇವೆ. ಕಳೆದ ನವೆಂಬರ್ ನಲ್ಲಿ ಹೋರಾಟ ಮಾಡಿದ್ದೇವೆ. ಅಲ್ಲದೆ ಏ.1 ರಿಂದಲೇ ಅನಿರ್ಧಿಷ್ಟಾವಧಿ ಹೋರಾಟಕ್ಕೆ ನಿರ್ಧರಿಸಿದ್ದೇವು. ಇಲಾಖೆಯವರು ಸಭೆ ನಡೆಸಿ ನಮ್ಮ ಬೇಡಿಕೆಗಳನ್ನು ಕೇವಲ ಹಾಳೆಗಳಲ್ಲಿ ಮುದ್ರಿಸಿಟ್ಟುಕೊಂಡು ಸಮಸ್ಯೆ ಬಗೆಹರಿಸುವ ದೊಂಬರಾಟ, ಕಪಟ ನಾಟಕದಿಂದ ಬೇಸತ್ತು ಹೋರಾಟ ತೀರ್ಮಾನ ಮಾಡಿದ್ದೇವೆಂದರು. ವೇತನ ಚೀಟಿ ಕೊಡಬೇಕು, ಆಹಾರ ಭತ್ಯೆ ಹಣ ನೇರವಾಗಿ ಖಾತೆಗೆ ಹೋಗಬೇಕು. ಆರೋಗ್ಯ ಸೇವೆ ನೀಡಬೇಕು. ಕರ್ನಾಟಕ ಸೇವಾ ಅಧಿನಿಯಮದಡಿ ನಮ್ಮನ್ನು ಖಾಯಂ ಮಾಡಬೇಕು. ನಮ್ಮ ಬೇಡಿಕೆ ಈಡೇರದಿದ್ದರೆ ಮೇ 1 ರಂದು ಕಪ್ಪು ಪಟ್ಟಿ ಧರಿಸಿ ಕರಾಳ ದಿನ ಆಚರಣೆ ಮಾಡಲು ನಿರ್ಧರಿಸುತ್ತೇವೆಂದರು. ಸಭೆಯಲ್ಲಿ ವೀರೇಶ್ ದಾಂಡೇಲಿ, ಬಂಡಿಪುರದ ಅಣ್ಣಯ್ಯ ಸ್ವಾಮಿ, ಕೃಷ್ಣರಾಜು, ರಾಜೇಶ್, ನಾಗರಹೊಳೆಯ ನರಸಿಂಹ, ನಿಸ್ಸಾರ್, ಮಡಿಕೇರಿಯ ಮಹೇಶ್, ಮಂಜು, ಬಳ್ಳಾರಿ ಮುಕ್ತಾರ್, ಎನ್.ಬೇಗೂರು ರಾಜು, ವೀರನಹೊಸಹಳ್ಳಿ ಚನ್ನಯ್ಯ, ಪುಷ್ಪಗಿರಿ ಕುಶಾಲಪ್ಪ, ಮದ್ದೂರು ಸಿದ್ದಲಿಂಗು, ಅಂತರಸಂತೆ ನಾಗೇಗೌಡ ಇನ್ನಿತರರು ಉಪಸ್ಥಿತರಿದ್ದರು.

**690 ರೂ. ಸಂಬಳ ಸಾಲಲ್ಲ.**

ರಾಜ್ಯ ಉಪಾಧ್ಯಕ್ಷ ಹರೀಶ್ ಮಾತನಾಡಿ, ಯಾವುದೇ ಎಲ್ಲರೂ ಬಂಡಿಪುರದಲ್ಲಿ ಜಮಾವಣೆಗೊಂಡು ಅನಿರ್ದಿಷ್ಟಾವಧಿ ಹೋರಾಟ ಮಾಡುತ್ತೇವೆ. ಈಗ ನೀಡುತ್ತಿರುವ 690 ರೂ. ಸಂಬಳ ಸಾಲಲ್ಲ. ಅನೇಕರು ಹುಲಿ, ಆನೆ ದಾಳಿಗೆ ತುತ್ತಾಗಿದ್ದು ಅವರ ಕುಟುಂಬಕ್ಕೆ ಪರಿಹಾರ ಸಹ ಸಿಕ್ಕಿಲ್ಲ. ಕೊಡಗು ವೃತ್ತ 220, ಮೈಸೂರು ವೃತ್ತದ 280 ಮತ್ತು ಚಾಮರಾಜನಗರದ 650 ಸೇರಿ ರಾಜ್ಯದ ವಿವಿಧೆಡೆಯಿಂದ ಧರಣಿಯಲ್ಲಿ ಭಾಗವಹಿಸುವರು. ನಮ್ಮ ಗೈರಿನಿಂದ ಇದರಿಂದ ಕೇರಳ ಗಡಿ ಸೇರಿ ಮೊದಲಾದ ಕಡೆಗಳಲ್ಲಿ ಅಕ್ರಮ ಗಂಧದ ಮರ ಕಳವು ಸೇರಿ ಅನೇಕ ಅಕ್ರಮ ನಡೆಯುವ ಸಾಧ್ಯತೆಯಿದೆ. ಜತೆಗೆ ಆನೆ, ಹುಲಿ ಹಾಗೂ ಚಿರತೆಗಳು ಸೇರಿ ಅನೇಕ ಕಾಡು ಪ್ರಾಣಿಗಳು ನಗರಕ್ಕೆ ಆಗಮಿಸಿ ತೊಂದರೆ ಹಾಗೂ ಪ್ರಾಣ ಹಾನಿಯಾದರೂ ಅದಕ್ಕೆ ಸರ್ಕಾರ ಹಾಗೂ ಅಧಿಕಾರಿಗಳೇ ಹೊಣೆ ಆಗಲಿದ್ದಾರೆ. ನಾವು ನಮ್ಮ ಬೇಡಿಕೆ ಈಡೇರುವವರೆಗೂ ಹೋರಾಟದಿಂದ ಹಿಂದೆ ಸರಿಯುವ ಪ್ರಶ್ನೆಯೇ ಇಲ್ಲ ಎಂದರು.

### ವಿಶ್ವ ಬಾಯಿ ಆರೋಗ್ಯ ದಿನಾಚರಣೆ

## ದಂತ ತಪಾಸಣಾ ಶಿಬಿರ ಯಶಸ್ವಿ

ಕೆ.ಆರ್.ಪೇಟೆ: ತಾಲ್ಲೂಕಿನ ಗಂಜಿಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ 'ವಿಶ್ವ ಬಾಯಿ ಆರೋಗ್ಯ ದಿನಾಚರಣೆ'ಯ ಅಂಗವಾಗಿ ಸಾರ್ವಜನಿಕರಿಗಾಗಿ ಹಮ್ಮಿಕೊಳ್ಳಲಾಗಿದ್ದ ಉಚಿತ 'ದಂತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ'ವು ಅತ್ಯಂತ ಯಶಸ್ವಿಯಾಗಿ ಜರುಗಿತು.

ದಂತ ಆರೋಗ್ಯದ ಮಹತ್ವದ ಬಗ್ಗೆ ಜನರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಈ ಶಿಬಿರವನ್ನು ಆಯೋಜಿಸಲಾಗಿತ್ತು. ಗಂಜಿಗೆರೆ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಸಾರ್ವಜನಿಕರು ಈ ಶಿಬಿರದ ಪ್ರಯೋಜನ ಪಡೆದುಕೊಂಡರು. ಶಿಬಿರದಲ್ಲಿ ಪಾಲ್ಗೊಂಡಿದ್ದ ಸಾರ್ವಜನಿಕರಿಗೆ ಬಾಯಿ ಮತ್ತು ಹಲ್ಲುಗಳ ತಪಾಸಣೆ ನಡೆಸಿ, ಅಗತ್ಯವಿದ್ದವರಿಗೆ ಹಲ್ಲು ಕೀಳುವುದು, ಹಲ್ಲು ಸ್ವಚ್ಛಗೊಳಿಸುವುದು ಹಾಗೂ ಸಿಮೆಂಟ್ ತುಂಬುವ ಚಿಕಿತ್ಸೆಗಳನ್ನು ಸಂಪೂರ್ಣ ಉಚಿತವಾಗಿ ನೀಡಲಾಯಿತು.

ಇದೇ ಸಂದರ್ಭದಲ್ಲಿ ಬಾಯಿ ಕ್ಯಾನ್ಸರ್ ಹರಡುವಿಕೆ ಮತ್ತು ಅದರ ತಡೆಗಟ್ಟುವಿಕೆಯ ಬಗ್ಗೆ ವೈದ್ಯರು ಜನರಿಗೆ ಜಾಗೃತಿ ಮೂಡಿಸಿದರು.

ಕಾರ್ಯಕ್ರಮದಲ್ಲಿ ಜಿಲ್ಲಾ ದಂತ ನೋಡಲ್ ಅಧಿಕಾರಿಗಳಾದ ಡಾ. ಇಂದ್ರಾಣಿ, ತಾಲ್ಲೂಕು ಆರೋಗ್ಯಾಧಿಕಾರಿಗಳಾದ ಡಾ. ಅಜಿತ್.ಜೆ. ಅವರು ಭಾಗವಹಿಸಿದ್ದರು. ದಂತ ವೈದ್ಯರಾದ ಡಾ. ಸುಪ್ರೀತ್, ಡಾ. ಕೋಮಲ ಹಾಗೂ ಡಾ. ಪುಟ್ಟಸ್ವಾಮಿ,ಗಂಜಿಗೆರೆ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿ ಡಾ. ವಿನಯ್ ಭಾಗವಹಿಸಿದ್ದರು, ಹಾಗೂ ಈ ಶಿಬಿರದಲ್ಲಿ ಆಸ್ಪತ್ರೆಯ ಸಿಬ್ಬಂದಿಗಳು ಹಾಗೂ ಆಶಾ ಕಾರ್ಯಕರ್ತೆಯರು ಹಾಜರಿದ್ದರು.



## ಟಿಪ್ಪರ್–ಕಾರಿನ ನಡುವೆ ಡಿಕ್ಕಿ: ಚಿಕಿತ್ಸೆ ಫಲಕಾರಿಯಾಗದೇ ಮಗು ಸಾವು

ಗುಂಡ್ಲುಪೇಟೆ, ಏ.15–ಪಟ್ಟಣದ ಹೊರವಲಯದ ಮಲ್ಲಯ್ಯನಪು ಗೇಟ್ ಬಳಿ ಮಂಗಳವಾರ ಟಿಪ್ಪರ್ ಕಾರಿನ ನಡುವೆ ಡಿಕ್ಕಿಯಾಗಿ ಮೂವರು ಮೃತಪಟ್ಟಿದ್ದರು. 9 ವರ್ಷದ ಬಾಲಕ ತೀವ್ರ ಗಾಯಗೊಂಡಿದ್ದರಿಂದ ಆಸ್ಪತ್ರೆಗೆ ದಾಖಲಿಸಲಾಗಿತ್ತು. ರಾತ್ರಿ 10.30 ರ ಸಮಯದಲ್ಲಿ ಚಿಕಿತ್ಸೆ ಫಲಕಾರಿಯಾಗದೇ ಮಗು ಮೃತಪಟ್ಟಿದೆ.

ಅಪಘಾತದಲ್ಲಿ ತಾಯಿ ಅನಿಶಾ ನೂರಿ ಹಾಗೂ ಮಗಳು ನೂಹಾ ಮತ್ತು ತಮ್ಮ ಮಹಮ್ಮದ್ ಅಜೀರ್ ಮೃತಪಟ್ಟಿದ್ದರು ಮಗ ನಹಿಯಾನ್ ತೀವ್ರ ಗಾಯಗೊಂಡು ಅಸ್ಪತ್ರೆಗೆ ದಾಖಲಿಸಲಾಗಿತ್ತು ಚಿಕಿತ್ಸೆ ಫಲಿಸದೆ ಮಗನೂ ಮೃತಪಟ್ಟಿರುವ ಘಟನೆ ನಡೆದಿದೆ.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## ಆಟೋ ಚಾಲಕರ ಸಂಕಷ್ಟಕ್ಕೆ ಸ್ಪಂದಿಸಿ



ಮೈಸೂರು: ಇರಾನ್, ಇಸ್ರೇಲ್, ಅಮೇರಿಕಾಗಳ ನಡುವೆ ನಡೆಯುತ್ತಿರುವ ಯುದ್ಧದಿಂದಾಗಿ ಉಂಟಾಗಿರುವ ಗ್ಯಾಸ್ ಅಭಾವದ ಕಾರಣ ರಾಜ್ಯದಲ್ಲಿ ಆಟೋ ಚಾಲಕರು ಸಂಕಷ್ಟಕ್ಕೊಳಗಾಗಿದ್ದಾರೆ. ಹೀಗಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರ ಇವರ ನೆರವಿಗೆ ಬರಬೇಕೆಂದು ಪ್ರಬುದ್ಧ ಭಾರತ ಭೀಮ್ ಸೇನೆ ಅಧ್ಯಕ್ಷ ಸಿದ್ದರಾಜು ಆಗ್ರಹಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಗ್ಯಾಸ್ ಅಭಾವದಿಂದಾಗಿ ಆಟೋಗಳನ್ನು ರಸ್ತೆಗಿಳಿಸಲು ಸಾಧ್ಯವಾಗದೇ ಆಟೋ ಚಾಲಕರು ತಮ್ಮ ಮಕ್ಕಳ ಶಾಲಾ, ಕಾಲೇಜು ಶುಲ್ಕ, ಫೈನಾನ್ಸ್ ಕಂಪನಿಗಳ ಸಾಲದ ಕಂತು, ದಿನನಿತ್ಯದ ಅಗತ್ಯ ವಸ್ತು ಖರೀದಿ ಸಾಧ್ಯವಾಗದೇ ಸಂಕಷ್ಟಕ್ಕೊಳಗಾಗಿದ್ದಾರೆ. ಹೀಗಾಗಿ ರಾಜ್ಯದಿಂದ ಆಯ್ಕೆಯಾಗಿರುವ ಸಂಸದರು, ಕೇಂದ್ರ ಸಚಿವರು, ಸಿಎಂ ಮೊದಲಾದವರು ಇತ್ತ ಗಮನ ಹರಿಸಿ, ಇವರ ಖಾತೆಗೆ ಹತ್ತು ಸಾವಿರ ರೂ, ಜಮಾ ನೆರವು ನೀಡಬೇಕು, ಪಡಿತರ ಕಿಟ್ ನೀಡಬೇಕೆಂದು ಕೋರಿದರು. ಇನ್ನಿತರ ಮುಖಂಡರಾದ ಮಹದೇವಸ್ವಾಮಿ, ಜೈಪ್ರಕಾಶ್, ರಂಗಣ್ಣ ಹಾಗೂ ರಾಮು ಇದ್ದರು.

## ಶಿಕ್ಷಕರ ಸಂಘದಿಂದ ಅಂಬೇಡ್ಕರ್ ಜಯಂತಿ ಆಚರಣೆ



ಚಾಮರಾಜನಗರ: ಬಾಬಾ ಸಾಹೇಬ್ ಡಾ. ಬಿ.ಆರ್. ಅಂಬೇಡ್ಕರ್ ಅವರು ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವದ ತತ್ವಗಳನ್ನು ಪ್ರತಿಪಾದಿಸಿದ ಮಹಾನ್ ಮಾನವತಾವಾದಿಯಾಗಿದ್ದಾರೆ ಎಂದು ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಕೆ.ಎಸ್.ಮಾದಪ್ಪ ಬಣ್ಣಿಸಿದರು.

ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾ ಘಟಕದ ವತಿಯಿಂದ ಡಾ.ಬಿ.ಆರ್.ಅಂಬೇಡ್ಕರ್ ರವರ 135 ಜನ್ಮದಿನಾಚರಣೆ ಅಂಗವಾಗಿ ನಗರದ ಜಿಲ್ಲಾಡಳಿತ ಭವನದ ಮುಂಭಾಗದಲ್ಲಿರುವ ಅಂಬೇಡ್ಕರ್ ಪುತ್ಥಳಿ ಗೆ ಮಾಲಾರ್ಪಣೆ ಮಾಡಿ ಗೌರವ ನಮನ ಸಲ್ಲಿಸಿ ಮಾತನಾಡಿದರು. ಅಂಬೇಡ್ಕರ್ ಅವರು ಜಾತಿ, ಲಿಂಗ, ಧರ್ಮದ ಭೇದವಿಲ್ಲದೆ, ಪ್ರತಿಯೊಬ್ಬರಿಗೂ ಸಮಾನ ಅವಕಾಶಗಳು, ಹಕ್ಕುಗಳು ಮತ್ತು ಗೌರವ ಸಿಗಬೇಕು ಎಂದು ಪ್ರತಿಪಾದಿಸಿದರು. ಅವರು ಸಂವಿಧಾನದ ಮೂಲಕ ಎಲ್ಲರಿಗೂ ಸಮಾನತೆ, ಶಿಕ್ಷಣ, ಮತ್ತು ಸಾಮಾಜಿಕ ನ್ಯಾಯವನ್ನು ಖಾತರಿಪಡಿಸಿದರು ಎಂದರು.

ಜ್ಞಾನದ ಮೂಲಕ ಸಬಲೀಕರಣ, ಇದು ಸಾಮಾಜಿಕ ಗುಲಾಮಗಿರಿಯನ್ನು ಹೋಗಲಾಡಿಸುವ ಅಸ್ತ್ರ ಎಂದು ನಂಬಿದ್ದರು. ದೀನ ದಲಿತರು, ಹಿಂದುಳಿದವರು ಮತ್ತು ಮಹಿಳೆಯರಿಗೆ ಸಮಾನ ಅವಕಾಶ ಕಲ್ಪಿಸಿದರು.

ಪ್ರತಿಯೊಬ್ಬ ವ್ಯಕ್ತಿಗೂ ಸ್ವಾಭಿಮಾನ ಮತ್ತು ಘನತೆಯಿಂದ ಬದುಕುವ ಹಕ್ಕು ನೀಡಿದರು. ಅಂಬೇಡ್ಕರ್ ಅವರು ಸಂವಿಧಾನದ ಮೂಲಕ ಭಾರತೀಯರಲ್ಲಿ ಪ್ರಜಾಪ್ರಭುತ್ವದ ಮೌಲ್ಯಗಳನ್ನು ಎತ್ತಿಹಿಡಿದರು. ಅವರ ಆದರ್ಶಗಳನ್ನು ನಾವೆಲ್ಲರೂ ಮೈಗೂಡಿಸಿಕೊಂಡು ಅವರ ಮಾರ್ಗದಲ್ಲಿ ಸಾಗೋಣ ಎಂದರು. ಈ ಸಂದರ್ಭದಲ್ಲಿ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮಹಾದೇವ ಸ್ವಾಮಿ, ತಾಲೂಕು ಅಧ್ಯಕ್ಷ ಸಿ. ಕೆ.ರಾಮಸ್ವಾಮಿ, ಕಾರ್ಯದರ್ಶಿ ಸುಧಾ ಪದಾಧಿಕಾರಿಗಳಾದ ಎಂ.ಡಿ ಮಹಾದೇವಯ್ಯ ಡಿ ಎನ್. ಭಾರತ್ , ಬಿ. ಕೃಷ್ಣಮೂರ್ತಿ ,ರಾಜು ,ಎಸ್ ಜಿ ವಿ ಶಾಂತರಾಜ್, ಶಿವಕುಮಾರ್ , ಎಸ್.ಬಿ ರಾಜು, ಸಮೀಉಲ್ಲಾ, ಧನಂಜಯ್, ಎಂ.ಪುಟ್ಟಸ್ವಾಮಿ, ಸಿ.ಎಂ. ಮುರುಗೇಶ್ ಕುಮಾರ್,ನಂಜುಂಡಸ್ವಾಮಿ, ಬಿ.ಎಸ್.ಲತಾ, ಇತರರು ಹಾಜರಿದ್ದರು.

## ಕರವೇಯಿಂದ ಅಂಬೇಡ್ಕರ್ ಜಯಂತಿ



ಗುಂಡ್ಲುಪೇಟೆ:– ಕರ್ನಾಟಕ ರಕ್ಷಣಾ ವೇದಿಕೆ( ಪ್ರವೀಣ್ ಶೆಟ್ಟಿ) ಬಣದ ವತಿಯಿಂದ ಜಿಲ್ಲಾ ಘಟಕದ ಪ್ರಧಾನ ಕಚೇರಿಯಲ್ಲಿ, ಸಂವಿಧಾನ ಶಿಲ್ಪಿ, ಭಾರತ ರತ್ನ ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ರವರ 135ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು,

ಈ ಸಂದರ್ಭದಲ್ಲಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಘಟಕದ ಅಧ್ಯಕ್ಷ. ಆರ್ ಮೋಹನ್ ಮಾತನಾಡಿ, ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ರವರು ಇಡೀ ಪ್ರಪಂಚವೇ ಮೆಚ್ಚುವಂತಹ ಮಹಾನ್ ಹೋರಾಟಗಾರರು ಸಂವಿಧಾನದ ಪಿತಾಮಹ, ಸಮಾನತೆಯ ಹರಿಕಾರರು ಅರ್ಥಶಾಸ್ತ್ರಜ್ಞರು, ಚಿಂತಕರು, ಇಂತಹ ಮಹಾನ್ ನಾಯಕರ ನೆರಳಿನಲ್ಲಿ ನಾವು ಉಸಿರಾಡುತ್ತಿದ್ದೇವೆ ಎಂದರು

ಸೂರ್ಯ ಚಂದ್ರನಿರುವ ತನಕ, ಡಾಕ್ಟರ್ ಬಾಬಾ ಸಾಹೇಬ್ ಅಂಬೇಡ್ಕರ್ ರವರ ಹೆಸರು ಚಿರಾಯುವಾಗಿರುತ್ತದೆ ಎಂದು ಹೇಳಿದರು ಈ ಸಂದರ್ಭದಲ್ಲಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲಾ ಘಟಕದ ಪ್ರಧಾನ ಕಾರ್ಯದರ್ಶಿ ರಿಯಾಜ್ ಪಾಷಾ , ಚಾಮರಾಜನಗರ ಜಿಲ್ಲಾ ಘಟಕದ ಕಾನೂನು ಸಲಹೆಗಾರ ಜವರಾಜ್ ಪಾಳ್ಯ, ಜಿಲ್ಲಾ ಸಂಘಟನಾ ಕಾರ್ಯದರ್ಶಿ ತೆರಕಣಾಂಬಿ ಆರ್ ಗಣೇಶ್, ಜಿಲ್ಲಾ ಘಟಕದ ಪದಾಧಿಕಾರಿ. ರಘು, ವಕೀಲ ಪುಟ್ಟಸ್ವಾಮಿ, ಗುಂಡ್ಲುಪೇಟೆ ತಾಲೂಕು ಘಟಕದ ಅಧ್ಯಕ್ಷ ಮಂಜು ಆರ್, ತಾಲೂಕು ಕಾರ್ಯದರ್ಶಿ ಬೆಟ್ಟದ ಮಾದಳ್ಳಿ ರಾಜೇಶ್, ಪದಾಧಿಕಾರಿ ಮಾದ ಶೆಟ್ಟಿ ಸೇರಿದಂತೆ ಸಂಘಟನೆಯ ಹಲವಾರು ಪದಾಧಿಕಾರಿಗಳು ಉಪಸ್ಥಿತರಿದ್ದರು

### ಡಾ.ಬಾಬು ಜಗಜೀವನರಾಮ್ ಸಂಘಟನೆಗಳ ಒಕ್ಕೂಟದಿಂದ ಆಯೋಜನೆ

## ಡಾ.ಬಿ.ಆರ್.ಅಂಬೇಡ್ಕರ್ ಜಯಂತಿ ಆಚರಣೆ

ಚಾಮರಾಜನಗರ: ಡಾ.ಬಾಬುಜಗಜೀವನರಾಂ ಸಂಘಟನೆಗಳ ಒಕ್ಕೂಟದ ವತಿಯಿಂದ ನಗರದಲ್ಲಿ ಡಾ.ಬಿ. ಆರ್. ಅಂಬೇಡ್ಕರ್ ಅವರ 135ನೇ ಜಯಂತಿ ಯನ್ನು ಆಚರಿಸಲಾಯಿತು.

ನಗರದ ಚಾಮರಾಜೇಶ್ವರ ಉದ್ಯಾನವನ ಮುಂಭಾಗದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಂಘದ ಪದಾಧಿಕಾರಿಗಳು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಗೌರವ ನಮನ ಸಲ್ಲಿಸಿದರು.ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾಧ್ಯಕ್ಷ ಹೆಚ್.ಹೆಚ್.ನಾಗರಾಜು ಮಾತನಾಡಿ, ಬಾಬಾ ಸಾಹೇಬ್ ಡಾ.ಬಿ.ಆರ್. ಅಂಬೇಡ್ಕರ್ ಅವರು ಬಾಲ್ಯದಲ್ಲೇ ತುಂಬಾ ಕಷ್ಟದಿಂದ ವಿದ್ಯಾಭ್ಯಾಸ ಮಾಡಿದರು. ವಿದೇಶದಲ್ಲಿ ಉನ್ನತ ಶಿಕ್ಷಣ ಪಡೆದು ಅಪಾರ ವಿದ್ವತ್ ಹೊಂದಿ ವಿವಿಧ ದೇಶಗಳ ಸಂವಿಧಾನ ಅಧ್ಯಯನ ಮಾಡಿ ದೇಶಕ್ಕೆ ಉತ್ಕೃಷ್ಟವಾದ ಸಂವಿಧಾನ ಬರೆದು ಕೊಡುವ ಮೂಲಕ ಸರ್ವರಿಗೂ ಸಮಾನತೆ ಕಲ್ಪಿಸಿಕೊಟ್ಟಿದ್ದಾರೆ ಎಂದರು.

ಗೌರವಾಧ್ಯಕ್ಷ ಬಸವನಪುರ ರಾಜಶೇಖರ ಪುಷ್ಪಾರ್ಚನೆ ಮಾಡಿ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರು ಭಾರತದ ಸಂವಿಧಾನವನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿ, ಮೂಲಭೂತ ಹಕ್ಕುಗಳು ಮತ್ತು ದುರ್ಬಲ ವರ್ಗದವರಿಗೆ ಮೀಸಲಾತಿಯನ್ನು ಕಲ್ಪಿಸಿದರು. ಜಾತಿ ಆಧಾರಿತ ತಾರತಮ್ಯದ ವಿರುದ್ಧ ಹೋರಾಡಿದರು ಎಂದರು.




ರಾಮಸಮುದ್ರ ಶಿವಣ್ಣ ಮಾತನಾಡಿ, ಹಿಂದೂ ಕೋಡ್ ಬಿಲ್ ಮೂಲಕ ಮಹಿಳೆಯರಿಗೆ ಆಸ್ತಿ ಹಕ್ಕು, ವಿಚ್ಛೇದನ ಹಕ್ಕು ಮತ್ತು ಸಮಾನತೆಗಾಗಿ ಹೋರಾಡಿದರು ಎಂದರು. ಕಾರ್ಯಕ್ರಮದಲ್ಲಿ ಒಕ್ಕೂಟದ ಉಪಾಧ್ಯಕ್ಷ ಚನ್ನಬಸಪ್ಪ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಶಿವಕುಮಾರ್, ಸಹ ಕಾರ್ಯದರ್ಶಿ ಶಿವಕುಮಾರ್, ನಿವೃತ್ತ ಶಿಕ್ಷಕ ಚಿಕ್ಕಮಾದಯ್ಯ, ಗ್ರಾ.ಪಂ.ಮಾಜಿ ಅಧ್ಯಕ್ಷ ಮಹದೇವಯ್ಯ,ನಗರಸಭಾ ಮಾಜಿ ಸದಸ್ಯ ಶಿವಣ್ಣ, ಬಂಗಾರನಾಯಕ, ಪಣ್ಯದಹುಂಡಿ ರಾಜು, ಲಿಂಗರಾಜು, ಡ್ರೈವರ್ ಮಹದೇವಯ್ಯ, ಕರಿನಂಜನಪುರ ಸಿದ್ದರಾಜು, ಕೃಷ್ಣಪ್ಪ, ಸುಂದರ್, ಶಿವಕುಮಾರ್ ಹಾಜರಿದ್ದರು.

# ಛಲವೊಂದಿದ್ದರೆ ಸಾಧನೆ ಸಾಧ್ಯ

## ಹೆತ್ತವರ ಪರಿಶ್ರಮಕ್ಕೆ ತಕ್ಕ ಪ್ರತಿಫಲ | ಹಾಸನದ ಪ್ರತಿಭಾವಂತ ವಿದ್ಯಾರ್ಥಿನಿ ಹೇಮಲತಾ

**ಹಾಸನ:** ಆರ್ಥಿಕ ಪರಿಸ್ಥಿತಿ ಎಷ್ಟೇ ಕಠಿಣವಾಗಿದ್ದರೂ ಸತತ ಪ್ರಯತ್ನ ಮತ್ತು ಶ್ರದ್ಧೆಯಿದ್ದರೆ ಉನ್ನತ ಸಾಧನೆ ಮಾಡಬಹುದು ಎಂಬುದನ್ನು ನಗರದ ಪ್ರತಿಭಾವಂತ ವಿದ್ಯಾರ್ಥಿನೀ ಹೇಮಲತಾ ಸಾಬೀತುಪಡಿಸಿದ್ದಾರೆ. ನಗರದ ಎಂ. ಕೃಷ್ಣ ಕಾನೂನು ಕಾಲೇಜಿನಲ್ಲಿ ಅಟೆಂಡರ್ ಆಗಿ ಕಾರ್ಯನಿರ್ವಹಿಸುತ್ತಿರುವ ತಾಯಿ ರೂಪ ಹಾಗೂ ಎಂ.ಸಿ.ಇ ಕಾಲೇಜಿನಲ್ಲಿ ಲ್ಯಾಬ್ ಅಸಿಸ್ಟೆಂಟ್ ಆಗಿ ಸೇವೆ ಸಲ್ಲಿಸುತ್ತಿರುವ ತಂದೆ ನಾಗರಾಜ್ ಪುತ್ರಿಯಾದ ಹೇಮಲತಾ , ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 580 ಅಂಕಗಳನ್ನು ಗಳಿಸುವ ಮೂಲಕ ಜಿಲ್ಲೆಯ ಗಮನ ಸೆಳೆದಿದ್ದಾರೆ. ಹೆತ್ತವರು ಶಿಕ್ಷಣ ಸಂಸ್ಥೆಗಳಲ್ಲಿ ಕೆಳಹಂತದ ಸಿಬ್ಬಂದಿಯಾಗಿ ಕೆಲಸ ಮಾಡುತ್ತಿದ್ದರೂ, ಮಗಳ ವಿದ್ಯಾಭ್ಯಾಸಕ್ಕೆ ಯಾವುದೇ ಕೊರತೆಯಾಗದಂತೆ ಹಗಲಿರುಳು ಶ್ರಮಿಸುತ್ತಿದ್ದರು. ಪೋಷಕರ ಈ ಬೆವರಿನ ಹನಿಗಳಿಗೆ ಇಂದು ಮಗಳು ಶೈಕ್ಷಣಿಕ ಸಾಧನೆಯ ಮೂಲಕ ಸಾರ್ಥಕತೆ ತಂದುಕೊಟ್ಟಿದ್ದಾರೆ.ನಗರದ ಪ್ರತಿಷ್ಠಿತ ಎಪಿಜೆ ಕಾಲೇಜಿನ ವಿದ್ಯಾರ್ಥಿನಿಯಾಗಿರುವ ಹೇಮಲತಾ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ 600ಕ್ಕೆ 580 ಅಂಕಗಳನ್ನು ಪಡೆಯುವ ಮೂಲಕ ಅತ್ಯುತ್ತಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ. ಇವರ ಶೈಕ್ಷಣಿಕ ಪಯಣ ಮೊದಲಿನಿಂದಲೂ ಅತ್ಯಂತ ಶಿಸ್ತುಬದ್ಧವಾಗಿದ್ದು, ಈ ಹಿಂದೆ ಮಲೆನಾಡು ಈಪ್ಪೋ ಕ್ಯಾಂಪಸ್‌ನಲ್ಲಿ ವ್ಯಾಸಂಗ ಮಾಡುವಾಗಲೂ ಶೇಕಡಾ 93 ರಷ್ಟು ಅಂಕಗಳನ್ನು ಗಳಿಸಿ ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದ್ದರು. ಅಂದಿನಿಂದಲೂ ಪಠ್ಯ ಚಟುವಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದ ಇವರು, ಈಗ ಪಿಯುಸಿಯಲ್ಲೂ ಅದೇ ಸಾಧನೆಯನ್ನು ಮುಂದುವರಿಸಿದ್ದಾರೆ. ಮನೆಯ ಜವಾಬ್ದಾರಿಗಳ ನಡುವೆಯೂ ಶಿಕ್ಷಕರ ಮಾರ್ಗದರ್ಶನ ಹಾಗೂ ಪೋಷಕರ ನಿರಂತರ ಪ್ರೋತ್ಸಾಹದಿಂದ ಈ ಯಶಸ್ಸು ಸಾಧ್ಯವಾಗಿದೆ ಎಂದು ವಿದ್ಯಾರ್ಥಿನಿ ಹರ್ಷ ವ್ಯಕ್ತಪಡಿಸಿದ್ದಾರೆ. ಸಾಮಾನ್ಯ ಕುಟುಂಬದ ಹಿನ್ನೆಲೆಯಿಂದ ಬಂದು ಇಷ್ಟೊಂದು ದೊಡ್ಡ ಮಟ್ಟದ ಸಾಧನೆ ಮಾಡಿದ ಈ ವಿದ್ಯಾರ್ಥಿನಿಯ ಶ್ರಮವನ್ನು ಕಾಲೇಜು ಮಂಡಳಿ ಹಾಗೂ ಸಾರ್ವಜನಿಕರು ಶ್ಲಾಘಿಸಿದ್ದಾರೆ.





| Name | HEMALATHA R N | | |
|---|---|---|---|
| Reg. No. | 20269526051 | | |
| **Part A** | | | |
| Subject | Theory Marks | Practical/Internal Marks | Total Marks |
| KANNADA | 78 | 20 | 98 |
| ENGLISH | 76 | 20 | 96 |
| Part A - TOTAL | | | 194 |
| **Part B** | | | |
| Subject | Theory Marks | Practical/Internal Marks | Total Marks |
| PHYSICS | 68 | 30 | 98 |
| CHEMISTRY | 65 | 30 | 95 |
| MATHEMATICS | 78 | 20 | 98 |
| BIOLOGY | 65 | 30 | 95 |
| Part B - TOTAL | | | 386 |
| TOTAL MAXIMUM MARKS | 600 | | |
| TOTAL OBTAINED MARKS | 580 | | |
| FINAL RESULT | Distinction | | |

P-PASS , F-FAIL , X-EXEMPTED, AA- ABSENT, NC-NOT

# ಡಾ.ಯತೀಂದ್ರ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸೂಚನೆ

## ಕುಡಿಯುವ ನೀರಿನ ಸಮಸ್ಯೆಯಾಗದಂತೆ ಎಚ್ಚರಿಕೆ ವಹಿಸಿ

ಮೈಸೂರು; ಬೇಸಿಗೆ ಕಾಲ ಪ್ರಾರಂಭವಾಗಿದ್ದು, ಜಿಲ್ಲೆಯಲ್ಲಿ ಜನರಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು ಎಂದು ವಿಧಾನಪರಿಷತ್ ಶಾಸಕ ಡಾ: ಯತೀಂದ್ರ ಸಿದ್ದರಾಮಯ್ಯ ಅವರು ತಿಳಿಸಿದರು.

ಅವರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದರು, ಅಧಿಕಾರಿಗಳು ಈಗಾಗಲೇ ಕುಡಿಯುವ ನೀರಿನ ಸಮಸ್ಯೆ ಉಂಟಾಗಬಹುದಾದ ಗ್ರಾಮಗಳನ್ನು ಗುರುತಿಸಿರುತ್ತೀರಿ, ಈ ಗ್ರಾಮಗಳಿಗೆ ನಿಗದಿತವಾಗಿ ಭೇಟಿ ನೀಡಿ ಕುಡಿಯುವ ನೀರಿನ ಸ್ಥಿತಿ ಗರಿಗಳನ್ನು ತಿಳಿದುಕೊಂಡು ಅಗತ್ಯ ವ್ಯವಸ್ಥೆ ಮಾಡಿ ಎಂದರು. ಬಹುಗ್ರಾಮ ಕುಡಿಯುವ ನೀರಿನ ಯೋಜನೆಗಳ ಕಾರ್ಯನಿರ್ವಹಣೆಯ ಬಗ್ಗೆ ಪರಿಶೀಲನೆ ನಡೆಸಿ, ಯಾವುದಾದರೂ ತೊಂದರೆ ಇದ್ದಲ್ಲಿ ಸರಿಪಡಿಸಿಕೊಳ್ಳಿ, ಖಾಸಗಿ ಬೋರ್ ವೆಲ್ ಗಳ ಪಟ್ಟಿ ಹಾಗೂ ಟ್ಯಾಂಕರಗಳ ಮೂಲಕ ನೀರು ಸರಬರಾಜು ಮಾಡಬೇಕಿರುವ ಗ್ರಾಮಗಳನ್ನು ಪಟ್ಟಿ ಮಾಡಿಕೊಂಡು ಯೋಜನೆ ರೂಪಿಸಿಕೊಳ್ಳಿ ಎಂದರು. ಕುಡಿಯುವ ನೀರಿನ ಯೋಜನೆಗಳಿಗೆ ಸಂಬಂಧಿಸಿದಂತೆ ಅನುದಾನದ ಕೊರತೆ ಅಥವಾ ಯಾವುದೇ ತೊಂದರೆ ಇದ್ದಲ್ಲಿ ಕೂಡಲೇ ಮೇಲಾಧಿಕಾರಿಗಳ ಗಮನಕ್ಕೆ ತನ್ನಿ, ಕುಡಿಯುವ ನೀರಿನ ಸಮಸ್ಯೆಗಳನ್ನು ಮೊದಲ ಆದ್ಯತೆ ನೀಡಿ ಪರಿಹರಿಸಬೇಕು ಎಂದರು. ಸಭೆಯ ನಂತರ ಸಾರ್ವಜನಿಕರು, ಸ್ಮಶಾನಕ್ಕೆ ಸ್ಥಳ, ಹಕ್ಕು ಪತ್ರ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಸಮಸ್ಯೆಗಳ ಬಗ್ಗೆ ಕುಂದು ಕೊರತೆಗಳನ್ನು ಸಲ್ಲಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿ ಕಾಂತ ರೆಡ್ಡಿ, ಜಿಲ್ಲಾ ಪಂಚಾಯತ್ ಸಿಇಒ ಎಸ್. ಯುಕೇಶ್ ಕುಮಾರ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.



# ಮನೆಯಲ್ಲಿ ಪುಸ್ತಕ ಸಂಸ್ಕೃತಿ ಬೆಳೆಸಿ; ಅಜ್ಜಿನಿಕಂಡ ಮಹೇಶ್ ನಾಚಯ್ಯ

**ಮಡಿಕೇರಿ:** ಪ್ರತಿಯೊಬ್ಬರೂ ಮನೆಯಲ್ಲಿ ಪುಸ್ತಕ ಸಂಸ್ಕೃತಿಯನ್ನು ಬೆಳೆಸಿಕೊಳ್ಳಿ ಎಂದು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಅಜ್ಜಿನಿಕಂಡ ಮಹೇಶ್ ನಾಚಯ್ಯ ಕರೆ ನೀಡಿದರು.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ವತಿಯಿಂದ ಸೋಮವಾರಪೇಟೆ ಕೊಡವ ಸಮಾಜದಲ್ಲಿ ಏರ್ಪಡಿಸಿದ್ದ 6ನೇ ಕೊಡವ ಪುಸ್ತಕ ಪತ್ತಾಯ ಸ್ಥಾಪನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಮಹೇಶ್ ನಾಚಯ್ಯ, ಜ್ಞಾನವೊಂದಿದ್ದರೆ ಸಕಲ ಐಶ್ವರ್ಯ ಇದ್ದಂತೆ. ಜ್ಞಾನಾರ್ಜನೆಗೆ ಪುಸ್ತಕ ಸಂಸ್ಕೃತಿ ಅತ್ಯವಶ್ಯ ಎಂದರು.

ಕೊಡವರ ಸಾಮಾಜಿಕ ವ್ಯವಸ್ಥೆಯಲ್ಲಿ ತಮ್ಮದೇ ಆದ ?ಸಂಸ್ಕೃತಿ? ಇರುವಂತೆ ಪುಸ್ತಕ ಸಂಸ್ಕೃತಿಯನ್ನು ಒಗ್ಗಿಸಿಕೊಳ್ಳುವುದರಿಂದ ಕೆಲವೊಂದು ?ಅನಿಷ್ಟ ಸಂಸ್ಕೃತಿ?ಗಳಿಂದ ದೂರವಾಗಲು ಸಹಕಾರಿಯಾಗಿದೆ ಎಂದು ದೃಢವಾಗಿ ನುಡಿದರು.

ಸೋಮವಾರಪೇಟೆ ಕೊಡವ ಸಮಾಜವು ಈ ಭಾಗದ ಜನಾಂಗ ಬಾಂಧವರಿಗೆ ಐನ್‌ಮನೆ ಇದ್ದಂತೆ. ಇಂತಹ ಜಾಗದಲ್ಲಿ ಪುಸ್ತಕ ಪತ್ತಾಯ ಸ್ಥಾಪಿಸಲು ಮುಂದಾಗಿರುವ ಅಧ್ಯಕ್ಷ ಮಾಳೇಟಿರ ಅಭಿಮನ್ಯುಕುಮಾರ್ ಹಾಗೂ ನಿರ್ದೇಶಕರ ಪುಸ್ತಕ ಪ್ರೀತಿಯಿಂದ ಕೊಡವ ಸಂಸ್ಕೃತಿಯು ಬೆಳಗಲಿ ಎಂದು ಹಾರೈಸಿದರು.

ಕಾರ್ಯಕ್ರಮಕ್ಕೆ ಅತಿಥಿಗಳಾಗಿ ಆಗಮಿಸಿದ್ದ ಹಿರಿಯರಾದ ಕಲ್ಲೇಂಗಡ ಅಪ್ಪಚ್ಚು ಮಾತನಾಡಿ, ಸಾಹಿತ್ಯ ರಚನೆಯಿಂದಾಗಿ ಸಂಸ್ಕೃತಿ ಉಳಿಯಲು ಸಾಧ್ಯವಾಗಿದೆ. ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ನೀಡಿ ಮುಂದಿನ ದಿನಗಳಲ್ಲಿ ಆದಷ್ಟು ತಮ್ಮ ಮೂಲ ಸ್ಥಳದಲ್ಲಿ ಇರುವಂತೆ ಹಿರಿಯರು ಪ್ರೋತ್ಸಾಹಿಸಬೇಕು. ಆ ಮೂಲಕ ತಮ್ಮ ಸಂಸ್ಕೃತಿಯ ಪರಿಸರದಲ್ಲಿ ಬೆಳೆಯುವಂತಾಗಬೇಕು. ನಮ್ಮ ಸಂಘ–ಸಂಸ್ಥೆ, ಸಮಾಜಗಳು ಉಳಿಯಬೇಕಾದರೆ ಮಕ್ಕಳು ತಮ್ಮ ತಾಯ್ನೆಲದಲ್ಲಿ ಬದುಕು ಕಟ್ಟಿಕೊಳ್ಳಬೇಕೆಂದರು. ಅಕಾಡೆಮಿಯ ಪುಸ್ತಕ ಪತ್ತಾಯ ಯೋಜನೆಯು ಅತ್ಯುತ್ತಮ ಕಾರ್ಯವಾಗಿದ್ದು ಸಾಹಿತ್ಯದ ಸೊಬಗು ಕಾಣುವಂತಾಗಿದೆ ಎಂದರು.

ಮತ್ತೋರ್ವ ಅತಿಥಿ ಕವಯಿತ್ರಿ ಹಂಚೆಟ್ಟಿರ ಫ್ಯಾನ್ಸಿ ಮುತ್ತಣ್ಣ ತಮ್ಮ ನುಡಿಗಳಲ್ಲಿ, ಇತ್ತೀಚೆಗೆ ನಮ್ಮ ಬದುಕಿನ ನಡೆ ತಪ್ಪುತ್ತಿದೆ. ಇದಕ್ಕೆ ಕಾರಣ ನಾವು ನಮ್ಮ ಬದುಕಿನ ಸಾಹಿತ್ಯವನ್ನು ಮರೆತ್ತಿರುವುದು. ಮಕ್ಕಳಿಗೆ ಸಾಹಿತ್ಯದ ಬಗ್ಗೆ ಅಭಿಮಾನ ಹುಟ್ಟಿಸುವ ಒಳ್ಳೆಯ ಮಾರ್ಗ ಅಕಾಡೆಮಿಯಿಂದ ಯೋಜಿತವಾಗಿರುವ ಪುಸ್ತಕ ಪತ್ತಾಯ. ಪುಸ್ತಕ ಓದುವ ಮೂಲಕ ಸಾಹಿತ್ಯ, ಸಂಸ್ಕೃತಿಯ ಮೇಲೆ ಅಭಿಮಾನ ಹೆಚ್ಚಿಸಿಕೊಳ್ಳುವಂತಾಗಬೇಕು. ಮಕ್ಕಳಲ್ಲಿ ಸಂಸಾರದ ಸಾಮರಸ್ಯ ಹಾಗೂ ಹೊಂದಾಣಿಕೆಯ ಮೇರೆಗೆ ಅರಿವು ಮೂಡಿಸಬೇಕು.




ನಮ್ಮ ಮೂಲ ಪದ್ಧತಿಯನ್ನು ತಿಳಿಸಿಕೊಡಬೇಕು ಎಂದರು.

ಕೊಡಗಿನ ಏಕೈಕ ಶಾಸ್ತ್ರಜ್ಞೆ, ಸಾಹಿತಿ ಕರೋಟಿರ ಶಶಿ ಸುಬ್ರಮಣಿ ವಿರಚಿತ, ?ನಂಬಿಕೆ ಪುರಾಣತ್‌ರ ನಡುಲ್ ಕೊಡವಡ ಸಾಂಸ್ಕೃತಿಕ ಬದ್‌ಕ್? ಪುಸ್ತಕದ 2ನೇ ಮುದ್ರಣವನ್ನು ಅಕಾಡೆಮಿ ವತಿಯಿಂದ ಈ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಯಿತು. ನಂತರ ಮಾತನಾಡಿದ ಶಶಿ ಸುಬ್ರಮಣಿ, ಕೊಡವ ಸಾಹಿತ್ಯ ರಚನೆಯಿಂದ ಕೊಡವ ಸಂಸ್ಕೃತಿ ಹಾಗೂ ನಿಜವಾದ ನಂಬಿಕೆಗಳು ಜೀವಂತ ಉಳಿದುಕೊಳ್ಳಲು ಕಾರಣವಾಗಿದೆ. ಕೊಡವ ಭಾಷೆಯಲ್ಲಿ ಸಂಶೋಧನಾ ಸಾಹಿತ್ಯ ಹೆಚ್ಚು ರಚನೆಯಾಗಬೇಕು ಎಂದರು.

ಅಕಾಡೆಮಿಯ ಮಾಜಿ ಸದಸ್ಯ ತೇಲಪಂಡ ಕವನ್ ಕಾರ್ಯಪ್ಪ ?ಕೊಡವ ಪುಸ್ತಕತ್‌ರ ಅವಶ್ಯಕತೆ ಪಿಞ್ಞ ಪ್ರಯೋಜನ? ವಿಷಯವಾಗಿ ವಿಚಾರ ಮಂಡಿಸಿದರು.

ಪಟ್ಟೋಲೆ ಪಳಮೆಯಂತಹ ಜಾನಪದ ಸಾಹಿತ್ಯದಿಂದಾಗಿ ಇವತ್ತು ಕೊಡವರ ಸಂಸ್ಕೃತಿ, ಪದ್ಧತಿ, ಆಚರಣೆಗಳು ಉಳಿದುಕೊಳ್ಳಲು ಕಾರಣವಾಗಿದೆ. ಐ.ಮಾ.ಮುತ್ತಣ್ಣ, ಬಿ.ಡಿ.ಗಣಪತಿ, ಅಪ್ಪಚ್ಚ ಕವಿಗಳಂತ ಸಾಹಿತಿಗಳಿಂದ ಹಿಡಿದು ಆಧುನಿಕ ಸಾಹಿತ್ಯವೆಲ್ಲವೂ ಕೊಡವಾಮೆಯನ್ನು ಉಳಿಸಿಕೊಳ್ಳುವಲ್ಲಿ ಸಹಕಾರಿಯಾಗಿದೆ. ಪೂಮಾಲೆ ಕೊಡವ ಪತ್ರಿಕೆ ಸೇರಿದಂತೆ ಹಲವು ಪ್ರಕಟಣೆಗಳಿಂದ ಕೊಡವಾಮೆ ಉಳಿದುಕೊಂಡಿದೆ ಎಂದು ಅಭಿಪ್ರಾಯಪಟ್ಟರು.

ಅಧ್ಯಕ್ಷತೆ ವಹಿಸಿದ್ದ ಕೊಡವ ಸಮಾಜದ ಅಧ್ಯಕ್ಷ, ವಕೀಲರಾದ ಮಾಳೇಟಿರ ಅಭಿಮನ್ಯು ಕುಮಾರ್ ಮಾತನಾಡಿ, ಕೊಡವ ಸಮಾಜದಲ್ಲಿ ಗ್ರಂಥಾಲಯ ಸ್ಥಾಪನೆ ನಮ್ಮ ಬಹುಕಾಲದ ಆಕಾಂಕ್ಷೆಯಾಗಿತ್ತು. ಕೊಡವ ಸಾಹಿತ್ಯ ಅಕಾಡೆಮಿಯ ಅತ್ಯುತ್ತಮವಾಗಿರುವ ಈ ಒಂದು ಯೋಜನೆಯಿಂದ ನಮ್ಮ ಆಸೆ ಈಡೇರಿದಂತಾಗಿದೆ ಎಂದರು.

ಕೊಡವ ಸಮಾಜಗಳಲ್ಲಿ ಪುಸ್ತಕ ಪತ್ತಾಯ ಸ್ಥಾಪಿಸುವುದರಿಂದ ನಮ್ಮ ಸಂಸ್ಕೃತಿ ಹಾಗೂ ನಾಡಿನ ಬಗೆಗಿನ ಹಲವು ಆಚರಣೆ, ಹಬ್ಬಗಳ ವಿಚಾರವಾಗಿ ತಿಳಿದುಕೊಳ್ಳಲು ಅನುಕೂಲವಾಗುವುದು. ಸೋಮವಾರಪೇಟೆ ವಿಭಾಗದಿಂದ ಬಹುದೊಡ್ಡ ಸಂಖ್ಯೆಯ ಸಾಹಿತ್ಯಾಭಿಮಾನಿಗಳು ಕಾರ್ಯಕ್ರಮಕ್ಕೆ ಬಂದಿರುವುದು ಇಲ್ಲಿನ ಜನರಲ್ಲಿರುವ ಸಾಂಸ್ಕೃತಿಕ ಹಾಗೂ ಸಾಹಿತ್ಯಿಕವಾದ ಅಭಿರುಚಿ ತೋರಿಸುತ್ತಿದೆ. ಇಂದು ಜಿಲ್ಲೆಯಲ್ಲಿ ಸಾಹಿತ್ಯಪರ ಚಟುವಟಿಕೆಗಳು ಹೆಚ್ಚುತ್ತಿದ್ದು, ಇನ್ನಷ್ಟು ಮೌಲ್ಯಯುತ ಬರಹಗಳನ್ನೊಳಗೊಂಡ, ಸಮಾಜಕ್ಕೆ ಉತ್ತಮ ಸಂದೇಶವನ್ನು ನೀಡತಕ್ಕಂತಹ ಬರವಣಿಗೆಗಳ ಅವಶ್ಯಕತೆ ಇದೆ ಎಂದರು.

ಈ ವೇಳೆ ಜಾನಪದ ಹಾಡುಗಾರ ನಾಪಂಡ ಚಿಣ್ಣಪ್ಪ ಸ್ವರಚಿತ ?ಕೊಡವ್ ನಾಡ್? ಗೀತೆಯನ್ನು ಹಾಡಿ ಎಲ್ಲರನ್ನು ಚಕಿತಗೊಳಿಸಿದರು. ಕೊಡವ ಸಮಾಜದ ವತಿಯಿಂದ ಸಮಾಜಕ್ಕಾಗಿ ದುಡಿಯುತ್ತಿರುವ ಹಾಗೂ ದುಡಿದ ಹಲವರನ್ನು ಗುರುತಿಸಿ ಇದೇ ವೇದಿಕೆಯಲ್ಲಿ ಗೌರವಿಸಲಾಯಿತು.

ಮಚ್ಚಂಡ ಪ್ರಕಾಶ್ ಸ್ವಾಗತಿಸಿದರು. ಹಂಚೆಟ್ಟಿರ ಸಾರಿಕ ತಮ್ಮಯ್ಯ ಪ್ರಾರ್ಥಿಸಿದರು. ಕೊಡವ ಅಕಾಡೆಮಿ ಸದಸ್ಯೆ ಕಂಬೆಯಂಡ ಡೀನಾ ಬೋಜಣ್ಣ ನಿರೂಪಿಸಿದರು. ವೇದಿಕೆಯಲ್ಲಿ ಕೊಡವ ಸಮಾಜದ ಕಾರ್ಯದರ್ಶಿ ಕೊಚ್ಚೆರ ಅನಿಲ್‌ಕುಮಾರ್, ಖಜಾಂಚಿ ಪಾಡೆಯಂಡ ಮುತ್ತಣ್ಣ, ಕೊಡವ ಪೊಮ್ಮಕ್ಕಡ ಸಂಘದ ಅಧ್ಯಕ್ಷೆ ಬಾಚಿನಾಡಂಡ ಇಂದಿರಾ ಚಿಂಗಪ್ಪ ಇತರರು ಇದ್ದರು.

# ಹೊಳಲಿನಲ್ಲಿ ಅದ್ದೂರಿಯಾಗಿ ನಡೆದ ಅಂಬೇಡ್ಕರ್ 135 ನೇ ಜಯಂತೋತ್ಸವ

**ಮಂಡ್ಯ:** ತಾಲೂಕು ಹೊಳಲು ಗ್ರಾಮದ ಭಾರತ ರತ್, ಸಂವಿಧಾನ ಶಿಲ್ಪಿ. ಡಾ. ಬಿ.ಆರ್. ಅಂಬೇಡ್ಕರ್ ಪರಿವರ್ತನಾ ಟ್ರಸ್ಟ್ ಹಾಗೂ ಜೈ ಭೀಮ್ ಗೆಳೆಯರ ಬಳಗ ಹಾಗೂ ಹೊಳಲು ಗ್ರಾಮಸ್ಥರಿಂದ ಅದ್ದೂರಿಯಾಗಿ ಡಾ. ಬಿ.ಆರ್.ಅಂಬೇಡ್ಕರ್ ಅವರ 135ನೇ ಜಯಂತಿಯನ್ನು ಆಚರಿಸಲಾಯಿತು.

ಕಾರ್ಯಕ್ರಮದ ಉದ್ಘಾಟನೆಯನ್ನು ಮೇಲುಕೋಟೆ ಕ್ಷೇತ್ರದ ಶಾಸಕರಾದ ದರ್ಶನ್ ಪುಟ್ಟಣ್ಣಯ್ಯನವರ ಅನುಪಸ್ಥಿತಿಯಲ್ಲಿ ಅವರ ಸಹೋದರ ರೈತ ನಾಯಕ ರಾಘವ ಪ್ರಕಾಶ್ ರವರು ಜ್ಯೋತಿ ಬೆಳಗಿಸುವುದರ ಮೂಲಕ ಹಾಗೂ ಡಾ. ಬಿ.ಆರ್.ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವುದರ ಮುಖಾಂತರ ವಿಜ್ರಂಬಣೆಯಿಂದ ಜನ್ಮೋತ್ಸವವನ್ನು ಆಚರಿಸಲಾಯಿತು.

ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಅಂಬೇಡ್ಕರ್ ಅವರು ಒಬ್ಬ ಮಹಾನ್ ವ್ಯಕ್ತಿ ಈ ದಿನ ಅವರ ಜಯಂತಿಯನ್ನು ಆಚರಿಸುತ್ತಿರುವುದು ಬಹಳ ಸಂತೋಷ ಹಾಗೂ ಈ ಒಂದು ಕಾರ್ಯಕ್ರಮದಲ್ಲಿ ನಾನು ಭಾಗವಹಿಸುತ್ತಿರುವುದು ಹೆಮ್ಮೆ. ಆದ್ದರಿಂದ ಅವರ ಜೀವನವನ್ನು ಇವತ್ತಿನ ಯುವಕರು ಮೈಗೂಡಿಸಿಕೊಂಡು ಮುಂದೆ ಬರಬೇಕು ಇವತ್ತು ನಾವುಗಳು ರಾಜಕೀಯದಲ್ಲಿ ಬೆಳೆಯುತ್ತಿರುವುದು ಅವರು ಹಾಕಿಕೊಟ್ಟ ಸಂವಿಧಾನದ ಮಹತ್ವದ ಕೊಡುಗೆಯಾಗಿದೆ ಎಂದರು.

ಮುಖ್ಯ ಅತಿಥಿಗಳಾಗಿ ಮಂಡ್ಯ ಜಿಲ್ಲಾ ಮಾಜಿ ಮುದ್ರಾಣಾಲಯ ನಿರ್ದೇಶಕರಾದ ಎಚ್.ಎಸ್.ನಂದೀಶ್ ರವರು ಮಾತನಾಡುತ್ತಾ

ಡಾ.ಬಿ. ಆರ್.ಅಂಬೇಡ್ಕರ್ ಅವರು ಒಂದು ವರ್ಗಕ್ಕೆ ಒಂದು ಜಾತಿಗೆ ಸೀಮಿತವಾಗಬಾರದು ಅವರು ಧೀಮಂತ ನಾಯಕ, ರಾಷ್ಟ್ರನಾಯಕ, ಸಂವಿಧಾನ ಶಿಲ್ಪಿ, ಅವರು ಚಿಕ್ಕನಿಂದ ಹೋರಾಟ ಮಾಡುತ್ತಾ ಕಷ್ಟದಲ್ಲೇ ಬೆಳೆದು ಬಂದವರು ಆದ್ದರಿಂದ ಎಲ್ಲರೂ ಅವರನ್ನ ಸ್ಮರಿಸಿ ಅವರ ಮಾರ್ಗದರ್ಶನವನ್ನು ಜೀವನದಲ್ಲಿ ಅಳವಡಿಸಿಕೊಂಡು ಮುಂದೆ ಬರಬೇಕು ಎಂದರು.

ಮಂಡ್ಯ ಆರ್.ಎ.ಪಿ.ಸಿ.ಎಂ.ಎಸ್. ನಿರ್ದೇಶಕರಾದ



ಎಚ್.ಎಸ್. ಯೋಗೇಶ್ ಕುಮಾರ್ ರವರು ಅಂಬೇಡ್ಕರ್ ಅವರ ಜೀವನ ಚರಿತೆಯ ಬಗ್ಗೆ ಮಾತನಾಡಿದರು.

ಸಂವಿಧಾನ ಶಿಲ್ಪಿ, ಭಾರತ ರತ್ನ, ಡಾ.ಬಿ.ಆರ್. ಅಂಬೇಡ್ಕರ್ ಅವರ ಪುತ್ಥಳಿಗೆ ಪುಷ್ಪಾರ್ಚನೆ ಸಲ್ಲಿಸುವ ಮುಖಾಂತರ ಮೆರವಣಿಗೆಗೆ ಸೊಸೈಟಿ ಅಧ್ಯಕ್ಷರಾದ ಎಚ್.ಪಿ. ಸಚ್ಚಿದಾನಂದ (ಪಪ್ಪಿ) ರವರು ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನಿಸಿ ಅಭಿನಂದಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಗ್ರಾಮದ ಮುಖಂಡರಾದ ಎಚ್. ಸಿ. ಹರಿಪ್ರಸಾದ್, ಗ್ರಾಮ ಪಂಚಾಯಿತಿ ಮಾಜಿ ಅಧ್ಯಕ್ಷ ಎಚ್.ಎಲ್. ಅಭಿನಂದನ್, ಮಾಜಿ ಉಪಾಧ್ಯಕ್ಷರಾದ ನಾರಾಯಣಪ್ಪ,

ಮಾಜಿ ಉಪಾಧ್ಯಕ್ಷ ಜಯಪ್ರಕಾಶ್ ನಾರಾಯಣ್, ಡೈರಿ ಅಧ್ಯಕ್ಷ ಸಾವಿತ್ರಮ್ಮ, ಜೆಟ್ಟಿಕುಮಾರ್, ಚಂದನ್, ನಾರಾಯಣ, ಪಟೇಲ್ ರಾಮ್, ಸೊಸೈಟಿ ನಿರ್ದೇಶಕರಾದ ಸದಾಶಿವಮೂರ್ತಿ,

ಡಾ.ಬಿ.ಆರ್. ಅಂಬೇಡ್ಕರ್ ಅವರ ಪರಿವರ್ತನಾ ಟ್ರಸ್ಟ್ ಅಧ್ಯಕ್ಷರಾದ ಎಚ್.ಬಿ.ಮೂರ್ತಿ, ಗೌರವ್ಯಾಧ್ಯಕ್ಷ ಎಚ್.ಎಸ್.ಶ್ರೀನಿವಾಸ್ ಮೂರ್ತಿ, ಕಾರ್ಯದರ್ಶಿ ಜಯಶಂಕರ್, ಹೆಚ್.ಬಿ.ಕೃಷ್ಣ, ಯುವ ನಾಯಕ ಎಚ್.ಎಸ್ .ಮಂಜು, ಹರಿಕುಮಾರ್, ಮಾಸ್ಟರ್ ಸಿದ್ದರಾಜ್, ಪರಿವರ್ತನಾ ಟ್ರಸ್ಟ್ ಪದಾಧಿಕಾರಿಗಳು ಹಾಗೂ ಜೈ ಭೀಮ್ ಗೆಳೆಯರ ಬಳಗದ ಪದಾಧಿಕಾರಿಗಳು ಹೊಳಲು ಗ್ರಾಮಸ್ಥರು ಉಪಸ್ಥಿತರಿದ್ದರು.

# ವಧು ವರರ ಸಮಾವೇಶಕ್ಕೆ ವಿಶ್ವಕರ್ಮ ಜನಾಂಗದವರು ಭಾಗವಹಿಸಲು ಕೊಟ್ಟ ರಾಜ್ಯ ಉಪಾಧ್ಯಕ್ಷ ಬಸವರಾಜು ಕರೆ

**ಹನೂರು :** ನಮ್ಮ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ದೊರಕಿಸುವುದೆ ನಮ್ಮ ಸಂಘಟನೆಯ ಆದ್ಯ ಕರ್ತವ್ಯವಾಗಿದೆ, ಹಾಗೇಯೆ ಇದೇ ತಿಂಗಳಲ್ಲಿ ದಿನಾಂಕ 24/4/2026 . 25/4/2026..26/4/2026 . ರಂದು ನಡೆಯುವ ಅಖಿಲ ಕರ್ನಾಟಕ ವಿಶ್ವಕರ್ಮ ಮಹಾ ಸಭಾ ದಿಂದ ಅಯೋಜಿಸಿರುವ ಮೂರನೆ ರಾಜ್ಯ ಮಟ್ಟದ ವದು ವರರ ಸಮಾವೇಶವನ್ನು ಬೆಂಗಳೂರಿನ ಶಿವಾನಂದ ಸರ್ಕಲ್ ನ ರೇಸ್ ಕೋರ್ಸ್ ರಸ್ತೆಯ ಚಲನಚಿತ್ರ ವಾಣಿಜ್ಯ ಮಂಡಳಿಯ ಪಕ್ಕದ ಗುರುರಾಜ ಕಲ್ಯಾಣ ಮಂಟಪದಲ್ಲಿ ನಡೆಯುತ್ತಿರುವುದರಿಂದ ಸಮುದಾಯದ ಎಲ್ಲಾ ಪಂಗಡದವರು ಭಾಗವಹಿಸಿ ಕಾರ್ಯಕ್ರಮ ಯಶಸ್ವಿಯಾಗಿ ನಡೆಸಿಕೊಡಬೇಕೆಂದು ರಾಜ್ಯ ಉಪಾಧ್ಯಕ್ಷರಾದ ಬಸವರಾಜು ತಿಳಿಸಿದರು.

ಹನೂರು ಪಟ್ಟಣದ ಸಿದ್ದಪ್ಪಾಜಿ ದೇವಾಲಯದ ಆವರಣದಲ್ಲಿ ವಿಶ್ವಕರ್ಮ ಜನಾಂಗದವರು ಆಯೋಜಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದ ರಾಜ್ಯ ಉಪಾಧ್ಯಕ್ಷರಾದ ಬಸವರಾಜು ಬೆಂಗಳೂರಿನಲ್ಲಿ ನಡೆಯುವ ಕಾರ್ಯಕ್ರಮಕ್ಕೆ ರಾಜ್ಯದ ವಿವಿಧ ಭಾಗದಿಂದ ಪ್ರತಿಯೊಬ್ಬರು ಆಗಮಿಸಬೇಕು. ಕಾರ್ಯಕ್ರಮಕ್ಕೆ ಆಗಮಿಸುವವರಿಗೆ ಯಾವುದೇ ಶುಲ್ಕವನ್ನು ವಿಧಿಸುವುದಿಲ್ಲ ದಯವಿಟ್ಟು ಆಸಕ್ತ ಯುವಕರು ಯುವತಿಯರು ಸಕಾಲದಲ್ಲಿ ಆಗಮಿಸತಕ್ಕದ್ದು. ಕಾರ್ಯಕ್ರಮಕ್ಕೆ ಬರುವವರಿಗೆ ವಸತಿ ವ್ಯವಸ್ಥೆಯನ್ನು ಮಾಡಿರುವುದಿಲ್ಲ ಇನ್ನೂಳಿದಂತೆ ಪುರೋಹಿತರು ಸೇರಿದಂತೆ ಊಟ ತಿಂಡಿ ಎಲ್ಲಾ ವ್ಯವಸ್ಥೆಯನ್ನು ಮಾಡಲಾಗುವುದು ಇದರ ಸದುಪಯೋಗವನ್ನು ನಮ್ಮ ಜನಾಂಗದವರು ಪಡೆದುಕೊಳ್ಳಬೇಕೆಂದು ತಿಳಿಸಿದರು.

ಇದೇ ಕಾರ್ಯಕ್ರಮಕ್ಕೆ ಆಗಮಿಸಿ ಮಾತನಾಡಿದ ಮಾಜಿ ರಾಜ್ಯಾದ್ಯಕ್ಷೆ ಯವರಾದ ಗುಂಡ್ಲುಪೇಟೆಯ ಸೌಭಾಗ್ಯ ರವರು ಮಾತನಾಡಿ .ನಮ್ಮ ಜನಾಂಗವು ಹೆಚ್ಚು ಹೆಚ್ಚು ಹಳ್ಳಿಗಳಲ್ಲಿ ಇರುವುದರಿಂದ ಎಲ್ಲಾರಿಗೂ ಮಾಹಿತಿ ದೊರೆಯಬೇಕು , ಕಡಿಮೆ ಜನ ಇರುವ ಕಡೆಯು ಪ್ರಚಾರ ಮಾಡಬೇಕು,ಈ ಶುಭ ಕಾರ್ಯವನ್ನು



ನಮ್ಮ ಅಧ್ಯಕ್ಷರು ಎರಡು ವರ್ಷಗಳ ಕಾಲ ಪೂರೈಸಿ ಮೂರನೆ ವರ್ಷಕ್ಕೆ ಕಾಲಿಡುವಂತೆ ಮಾಡಿದ್ದರೆ ,ಸಮುದಾಯದವರಿಂದ ಸಂಘವು ಯಾವುದೇ ಹಣ ತೆಗೆದುಕೊಳ್ಳುವುದಿಲ್ಲ , ವಧು ವರರ ವೇದಿಕೆಯ ಮುಖಾಂತರ ಅನುಭವದ ಬ್ರಾಹ್ಮಣ ಅರ್ಚಕರ ಸಹಯೋಗದಲ್ಲಿ ಸ್ಥಳದಲ್ಲೆ ವಧು ವರರ ಜಾತಕಗಳನ್ನು ನೋಡಿ ಬಗೆಹರಿಸಲಾಗುವುದು. ನಮ್ಮ

ಸಂಘಟನೆಯು ರಾಜ್ಯಕ್ಕೆ ಮಾಧರಿಯಾಗಿ ಮಾಡಿದವರು ನಮ್ಮ ನಾಯಕರಾದ ಕೆ ಪಿ ನಂಜುಂಡಿಯವರು ನಮ್ಮ ಜನಾಂಗದ ಸಂಘವು ಹಲವಾರು ಕಾರ್ಯಗಳನ್ನು ಮಾಡುತ್ತಿದ್ದು ಅದರ ಮುಂದುವರಿದ ಭಾಗವಾಗಿ ವಿಶ್ವಕರ್ಮ ಜನಾಂಗದ ಪಧಾದಿಕಾರಿಗಳ ,ಸ್ವಾಮಿಗಳ ಜೊತೆಗೂಡಿ ಅಧ್ಯಕ್ಷರ ಅದೇಶದಂತೆ ಸಮುದಾಯದ ಜನಾಂಗದ ಮುಖಂಡರುಗಳ ಸಮ್ಮುಖದಲ್ಲಿ ಕಾರ್ಯಕ್ರಮ ಮಾಡು ತ್ತಿದ್ದೇವೆ ,ನಮಗೆ ಅಧ್ಯಕ್ಷರ ಇಚ್ಚೆಯಂತೆ ನಾಡಿನ ವಿವಿಧ ಭಾಗಗಳಿಂದ ಸಮುದಾಯದ ಎಲ್ಲಾ ಮುಖಂಡರು ಆಗಮಿಸುವ ಹಿನ್ನಲೆಯಲ್ಲಿ ಕಾರ್ಯಕ್ರಮದಲ್ಲಿ ಎಲ್ಲಾವು ಉಚಿತವಾಗಿರುತ್ತದೆ ಸರ್ವರು ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಮಾಡೋಣ . ಹನೂರು ಭಾಗದಲ್ಲಿ ನಮ್ಮ ಜನಾಂಗದವರು ಉತ್ತಮ ಸಂಘಟನೆ ಶಕ್ತಿಯಿದೆ ಅಲ್ಲದೆ ಜನರು ಹಿಂದುಳಿದಿದ್ದಾರೆ ,, ಎಲ್ಲಾರನ್ನು ಒಗ್ಗೂಡಿಸುವ ಪ್ರಯತ್ನ ನಮ್ಮ ಸಂಘದಿಂದ ನಡೆಯುತ್ತದೆ , ರಾಜ್ಯ ಸಂಘದ ಉಪಾಧ್ಯಕ್ಷರಾದ ಬಸವರಾಜು ಮದ್ದುರುರವರನ್ನು ಚಾಮರಾಜನಗರ ಜಿಲ್ಲೆಯ ಉಸ್ತುವಾರಿಯಾಗಿ ನೇಮಕ ಮಾಡಿದ್ದಾರೆ ಅವರಿಂದ ಅದ್ಭುತ ಸಂಘಟನೆಯಾಗಿದೆ ಎಂದು ತಿಳಿಸಿದರು .

ಕಾರ್ಯಕ್ರಮದಲ್ಲಿ ರಾಜ್ಯ ಪ್ರಧಾನ ಕಾರ್ಯದರ್ಶಿಗಳಾದ ಭೈರನತ್ತ ರಾಚಪ್ಪ ಮಾತನಾಡಿ

ಕೆಪಿ ನಂಜುಂಡಿ ರವರ ಸಾರಥ್ಯದಲ್ಲಿ ರಾಜ್ಯಾದ್ಯಂತ ಉತ್ತಮ ಸಂಘಟನೆಯನ್ನು ಮಾಡುವ ಉದ್ದೇಶದಿಂದ ಜನಾಂಗದ ಹಿತ ಕಾಯಲು ಕೆ ಪಿ ನಂಜುಂಡಿಯವರು ಒತ್ತು ನೀಡಿದರು . ಕೆಲವು ದಿನಗಳಿಂದ ಸಂಘಟನೆಯ ಕುಂಠಿತವಾಗಿದೆ ಮುಂದಿನ ದಿನಗಳಲ್ಲಿ ಸಂಘವನ್ನು ಮುನ್ನೇಡೆಸೋಣ ,ಈಗಾಗಲೇ ನಾವು ಶೈಕ್ಷಣಿಕವಾಗಿ,ರಾಜಕೀಯವಾಗಿ ಹಿಂದುಳಿದಿದ್ದೆವೆ ನಮ್ಮ ಜನಾಂಗದವರು ಮುಂದಿನ ದಿನಗಳಲ್ಲಿ ರಾಜಕೀಯವಾಗಿ ಆರ್ಥಿಕವಾಗಿ ಸಬಲರಾಗಬೇಕು . ಕಳೆದ ಎಪ್ಪತ್ತು ವರ್ಷಗಳ ಕಾಲದಿಂದ ನಮಗೆ ಸರ್ಕಾರದ ವತಿಯಿಂದ ಯಾವುದೇ ರೀತಿಯ ಸವಲತ್ತುಗಳನ್ನು ಪಡೆಯಲು ಅವಕಾಶವಾಗಿಲ್ಲ , ಶಾಲಾ ಕಾಲೇಜುಗಳಲ್ಲಿ ಮೀಸಲಾತಿ ಪಡೆಯಲು ನಾವು ಮುಂದಾಗಬೇಕು . ಕಟ್ಟಕಡೆಯ ವ್ಯಕ್ತಿಗೆ ಸರ್ಕಾರದ ಸವಲತ್ತುಗಳನ್ನು ಪಡೆದರೆ ಮಾತ್ರ ಸಮಾಜದ ಅಭಿವೃದ್ಧಿ ಸಾದ್ಯವೆಂದು ತಿಳಿಸಿದರು.

# ಬಾಬಾ ಸಾಹೇಬರು ಇಡೀ ವಿಶ್ವ ಮೆಚ್ಚುವಂತಹ ಮಹನಾಯಕ: ದುನಿಯಾ ವಿಜಯ್

**ಹನೂರು :** ಬಾಬಾ ಸಾಹೇಬರು ಈ ದೇಶ ಕಂಡಂತಹ ಅದ್ಭುತವಾದಂತಹ ಇಡೀ ವಿಶ್ವ ಮೆಚ್ಚುವಂತಹ ಮಹನಾಯಕ ಅವರು ಹಾಕಿಕೊಟ್ಟಂತಹ ಮಾರ್ಗದರ್ಶನದಲ್ಲಿ ನಾವು ನಡೆದಾಗ ಮಾತ್ರ ಇಂತಹ ಕಾರ್ಯಕ್ರಮಗಳಿಗೆ ಅರ್ಥ ಸಿಗುತ್ತದೆ ಎಂದು ನಟ ದುನಿಯಾ ವಿಜಯ್ ತಿಳಿಸಿದರು.

ಹನೂರು ಪಟ್ಟಣದಲ್ಲಿ ಮೂರು ದಿನಗಳ ಕಾಲ ನಡೆಯುವ ಅಂಬೇಡ್ಕರ್ ಹಬ್ಬದ ಮೊದಲ ದಿನ ಕಾರ್ಯಕ್ರಮಕ್ಕೆ ಚಾಲನೆ ನೀಡಿ ನಂತರ ಅವರು ಮಾತನಾಡಿದರು.

ಬಾಬಾ ಸಾಹೇಬರು ಹೇಳಿದಂತೆ ತಾವು ಮತ ಚಲಾವಣೆ ಮಾಡುವಾಗ ರಾಜಕಾರಣಿಗಳ ಬಳಿ ಯಾವುದೇ ಆಸೆ ಆಮಿಷಗಳಿಗೆ ಬಲಿಯಾಗದೆ ನನ್ನ ಮತ ನನ್ನ ವಯಕ್ತಿಕವಾದಂತಹ ಇಚ್ಛೆ ನನ್ನ ನಾಯಕನನ್ನ ಆಯ್ಕೆ ಮಾಡಿಕೊಳ್ಳುವುದು ನನ್ನ ಧರ್ಮ. ನಾನು ಯಾವುದೇ ಆಸೆಗಳಿಗೆ ಆಮಿಷಗಳಿಗೆ ಬಲಿಯಾಗದೆ ಮತ ಚಲಾವಣೆ ಮಾಡುತ್ತೇನೆ ಎಂಬ ಪ್ರತಿಜ್ಞೆ ಮಾಡಿದಾಗ ಮಾತ್ರ ಇಂತಹ ಕಾರ್ಯಕ್ರಮಗಳಿಗೆ ಮೌಲ್ಯ ಹೆಚ್ಚಾಗುತ್ತದೆ . ಜೊತೆಗೆ ಯುವಕರು ವಿದ್ಯಾರ್ಥಿಗಳು ಬಾಬಾ ಸಾಹೇಬರ ಪುಸ್ತಕಗಳನ್ನ ಹೆಚ್ಚು ಹೆಚ್ಚು ಓದುವ ಮೂಲಕ ಅವರ ಮೌಲ್ಯಗಳನ್ನು ತಮ್ಮಲ್ಲಿ ತಾವು ಬೆಳೆಸಿಕೊಳ್ಳಬೇಕು ಜೊತೆಗೆ ಅಂಬೇಡ್ಕರ್ ಅವರು ಇಡೀ ಮಾನವ ಕುಲದ ಸಂಕುಲದ ಒಳಿತಿಗಾಗಿ ಯಾವ ರೀತಿ ತಮ್ಮ ಜೀವನವನ್ನು ತಾವು ತ್ಯಾಗ ಮಾಡಿದರು ಎಂಬುದನ್ನು ನಾವೆಲ್ಲರೂ ಕೂಡ ಅರ್ಥ ಮಾಡಿಕೊಳ್ಳಬೇಕಾಗಿದೆ. ಹಾಗಾಗಿ ಓದುವ ಮಕ್ಕಳು ಹೆಚ್ಚೆಚ್ಚು ಬಾಬಾ ಸಾಹೇಬರ ಆದರ್ಶ ಗುಣಗಳನ್ನು ಅಳವಡಿಸಿಕೊಳ್ಳಬೇಕು ಎಂದರು.

ಸಾಹಿತಿ ಹನೂರು ಚನ್ನಪ್ಪ ಮಾತನಾಡಿ ದುನಿಯಾ ವಿಜಯ್ ಅವರು ಇತ್ತೀಚಿನ ದಿನಗಳಲ್ಲಿ ಬಾಬಾ ಸಾಹೇಬರ ಪುಸ್ತಕಗಳನ್ನು ಸುಧೀರ್ಘವಾಗಿ ಅಧ್ಯಯನ ಮಾಡುವ ಮೂಲಕ ಅವರ ಮೌಲ್ಯಗಳನ್ನು ತಮ್ಮಲ್ಲಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುತ್ತಿದ್ದಾರೆ. ಅದರಂತೆ ಇತರರಿಗೂ ಕೂಡ ಪ್ರೇರಣೆಯಾಗಿದ್ದಾರೆ. ಲ್ಯಾಂಡ್ ಲಾರ್ಡ್ ಎಂಬ ಮೂವಿ ಸಾಕಷ್ಟು ಜನರನ್ನ ಪ್ರೇರೆಪಣೆ ಗೊಳಿಸಿದೆ ಹಾಗಾಗಿ ಬಾಬಾ ಸಾಹೇಬರು ವಿಶ್ವ ನಾಯಕ ಎಂದು ನಾವೆಲ್ಲರೂ



ಕೂಡ ಅರಿತುಕೊಳ್ಳಬೇಕಾಗಿದೆ. ಹನೂರಿನಲ್ಲಿ ನಡೆಯುತ್ತಿರುವ ಅಂಬೇಡ್ಕರ್ ಹಬ್ಬ ಇತಿಹಾಸದ ಪುಟಗಳಲ್ಲಿ ಸೇರಲಿದೆ ಎಂದರು.


ಚಿಂತಕ ಸಾಹಿತಿ ಹ ರಾ ಮಹೇಶ್ ಮಾತನಾಡಿ ಜಾತಿ ವ್ಯವಸ್ಥೆ ಹಾಗೂ ಅಸ್ಪೃಶ್ಯತೆ ದೇಶ ದಲ್ಲಿ ಇನ್ನೂ ಸಹ ಜೀವಂತವಾಗಿದೆ ಇದು ಬದಲಾವಣೆಯಾದರೆ ಮಾತ್ರ ಪ್ರಬುದ್ಧ ಭಾರತ ವನ್ನು ನಿರ್ಮಾಣ ಮಾಡಲು ಸಾಧ್ಯ. ಈ ದೇಶದಲ್ಲಿ ಸುಮಾರು 6ಸಾವಿರ ಜಾತಿ ಗಳಿವೆ ಆದರೆ ಜಾತಿ ವ್ಯವಸ್ಥೆ ಯಲ್ಲಿ ತಾರತಮ್ಯ ಬದಲಾಗಿಲ್ಲ.

ಸಂವಿಧಾನ ಜಾರಿಗೆ ಬಂದು 78ವರ್ಷ ಗಳು ಕಳೆದರೂ ಸಹ ನಮ್ಮ ದೇಶದಲ್ಲಿ ಇನ್ನೂ ಜಾತಿ ತಾರತಮ್ಯ ಹಾಗೂ ಅಸ್ಪೃಶ್ಯತೆ ಜೀವಂತ ವಾಗಿದೆ ಇದು ಬದಲಾವಣೆ ಯಾಗಬೇಕು, ಬಾಬಾ ಸಾಹೇಬ್ ಅಂಬೇಡ್ಕರ್ ಅವರು ಜಾತಿ ವ್ಯವಸ್ಥೆ ಯನ್ನು ಹೋಗಲಾಡಿಸಬೇಕು ಎಂದು ಬೌದ್ಧ ಧರ್ಮದ ಬುದ್ಧನ ಮಾರ್ಗವನ್ನು ಅನುಸರಿಸಿ ಎಂದು ಕರೆಯನ್ನು ನೀಡಿದ್ದರು ಜಾತಿ ವಿನಾಶಕ್ಕೆ ಕಾರಣ ಎಲ್ಲರೂ ಸಮಾನರು ಎಂಬ ಭಾವನೆ ಬರಬೇಕು ಸಮ ಸಮಾಜ ನಿರ್ಮಾಣ ಮಾಡಬೇಕು ಎಂಬುದು ಅವರ ಆಶಯ ವಾಗಿತ್ತು, ಮನುವಾದಿ ಸರ್ಕಾರ ಗಳು ನೀಡುವ

ಹಣ ಹೆಂಡ ಆಮಿಷ ಗಳಿಗೆ ಬಲಿಯಾಗದೆ ತಮ್ಮದೇ ಅದ ರಾಜ್ಯಧಿಕಾರವನ್ನು ಹಿಡಿಯಬೇಕು ಈ ಗಾಗಲೇ ಸದ್ದಿಲ್ಲದೇ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಸಂವಿಧಾನ ವನ್ನು ಬದಲಾವಣೆ ಮಾಡಬೇಕು ಎನ್ನುವ ಹುನ್ನಾರ ನಡೆಯುತ್ತಿದೆ ಆದ್ದರಿಂದ ಪ್ರತಿಯೊಬ್ಬರು ಸಹ ಪ್ರಜ್ಞಾವಂತರಾಗಬೇಕು ಈ ಮನುವಾದಿ ಸರ್ಕಾರ ಗಳಿಗೆ ತಕ್ಕ ಪಾಠ ವನ್ನು ಕಲಿಸಬೇಕು ಜಾತಿ ರಹಿತ ಬಡತನ ರಹಿತ ಸಂವಿಧಾನ ನಿರ್ಮಾಣ ವಾಗಬೇಕು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಆಶಯ ವನ್ನು ಉಳಿಸಿ ಬೆಳೆಸುವ ಕೆಲಸ ವಾಗಬೇಕು ಮುಂದಿನ ಪೀಳಿಗೆಗೆ ಅನುಕೂಲ ವಾಗುವ ನಿಟ್ಟಿನಲ್ಲಿ ಸಂವಿಧಾನ ವನ್ನು ಅರಿತು ಕೊಳ್ಳಬೇಕು ಎಂದರು.

ಇದೇ ಸಂದರ್ಭದಲ್ಲಿ ಮೈಸೂರು ಮಾಜಿ ಮೇಯರ್ ಪುರುಷೋತ್ತಮ್, ಡಿ ವೈ ಎಸ್ ಪಿ ಮಹಾನಂದ್,ತುಮಕೂರು ಜಿಲ್ಲಾ ಅಪರ ಪೊಲೀಸ್ ವರಿಷ್ಠಾಧಿಕಾರಿ ಗೋಪಾಲ್, ಹನೂರು ಪಟ್ಟಣದ ಯಜಮಾನರುಗಳು,ಕುಲಬಾಂಧವರು, ಪಟ್ಟಣ ಪಂಚಾಯಿತಿ ಮಾಜಿ ಸದಸ್ಯರು, ಹಾಗೂ ಯುವಕರು, ಮಹಿಳೆಯರು ಉಪಸ್ಥಿತರಿದ್ದರು.

# ಕನ್ನಡದ ಪ್ಲೀಟರ್ ಡಾ.ಕ್ಯಾತನಹಳ್ಳಿ ರಾಮಣ್ಣ



ಯಾವಾಗಲೂ ಜಾನಪದ ತಿಳಿನೀರು ಆಗಿರಬೇಕು. ಆದರೆ ನಗರೀಕರಣ, ವಾಣಿಜ್ಯಕರಣ, ಆಧುನೀಕರಣದಿಂದಾಗಿ ಹಳ್ಳಿಗಳಲ್ಲೂ ಜಾನಪದದ ತಿಳಿನೀರು ಬಗ್ಗಡವಾಗುತ್ತಿದೆ. ತಿಳಿನೀರಾಗಿಯೇ ಜಾನಪದವನ್ನ ಉಳಿಸಿ ಬೆಳೆಸಬೇಕಿದೆ– ಈ ಸ್ಪಷ್ಟೋಕ್ತಿ ಡಾ. ಕ್ಯಾತನಹಳ್ಳಿ ರಾಮಣ್ಣ ಅವರದು.

ಡಾ.ಕ್ಯಾತನಹಳ್ಳಿ ರಾಮಣ್ಣ ಅವರು ನಾಡು ಕಂಡ ಜಾನಪದದ ಘನ ವಿದ್ವಾಂಸರು.

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಕ್ಯಾತನಹಳ್ಳಿಯಲ್ಲಿ ದಾಸೇಗೌಡ, ಮಾದಮ್ಮ ಅವರ ಪುತ್ರನಾಗಿ ಜನಿಸಿದ್ದು 1942 ರಲ್ಲಿ.

ಹುಟ್ಟೂರು, ಪಾಂಡವಪುರ, ಮೈಸೂರಿನಲ್ಲಿ ಪ್ರಾಥಮಿಕದಿಂದ ಎಂ.ಎ.ವರೆಗೆ ಕಲಿತ ರಾಮಣ್ಣ ಹೈಸ್ಕೂಲಿನಲ್ಲಿ ದ್ದಾಗಲೇ ಕತೆ, ನಾಟಕ ಬರೆದಿದ್ದರು. ಇವರ ಮೊದಲ ಕತೆ ಪ್ರಕಟವಾಗಿದ್ದು 1962 ರಲ್ಲಿ.

ಕ್ಯಾತನಹಳ್ಳಿಯಲ್ಲೇ ಸೋಬಾನೆ ಪದ, ಕುಯ್ಲು, ಒಕ್ಕಣೆ ಪದ ಕೇಳುತ್ತಾ, ಪೌರಾಣಿಕ ನಾಟಕ ನೋಡುತ್ತಾ ಬೆಳೆದ ರಾಮಣ್ಣರಿಗೆ ಜಾನಪದ ಚಿಕ್ಕಂದಿನಿಂದಲೇ ತನುಮನ ವ್ಯಾಪಿಸಿತ್ತು.

ಕನ್ನಡ ಎಂಎಗೆ ಮಾನಸಗಂಗೋತ್ರಿಗೆ ಸೇರಿದರು.ಅಲ್ಲಿಂದಾಚೆಗೆ ಇವರ ವೃತ್ತಿ, ಜೀವನ, ಬದುಕಿನ ಸಂಗಾತಿಯಾದುದು ಜಾನಪದ.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಜಾನಪದ ಸಂಶೋಧಕರಾಗಿ, ಇಡೀ ರಾಜ್ಯದ ಮೂಲೆಮೂಲೆ ಅಲೆದು, ಹೊಟ್ಟೆಗಿಲ್ಲದೆ, ಭಿಕ್ಷುಕರು ಬೇತಿಸಿದ್ದನ್ನೇ ತಿಂದು, ಹೊಲಗದ್ದೆಯಲ್ಲಿ ಮಲಗಿ, ಅಲ್ಲಲ್ಲಿನ ಜಾನಪದ ಕತೆ, ಲಾವಣಿ, ಗಾದೆ, ಸಂಸ್ಕೃತಿಯನ್ನೆಲ್ಲ ಸಂಗ್ರಹಿಸಿದರು.

ಅವರು ಸಂಗ್ರಹಿಸಿದೆಲ್ಲ ಈಗ ಜಾನಪದ ಮೂಲದ್ರವ್ಯವಾಗಿವೆ. ಜಾನಪದ ವಿದ್ಯಾರ್ಥಿಗಳಿಗೆ ದಾರಿದೀಪವಾಗಿವೆ. ಸಂಗ್ರಹ ರೂಪದ ಇವರ ಕೃತಿಗಳು ಪ್ರತೀವರ್ಷ ಒಂದಿಲ್ಲೊಂದು ವಿ.ವಿ.ಯ ಪಠ್ಯಪುಸ್ತಕವಾಗುತ್ತಲೇ ಇವೆ!

ಅಡವಿಯಲ್ಲಿ ದೊರೆಯ ಮಕ್ಕಳು, ಹಲಗಲಿಯ ಬೇಡರು, ಗೊಂದಲಿಗರು, ಕೊಂತಿಪೂಜೆ, ಕಬ್ಬಾಳು ಕುಳಿಯಲ್ಲಿ ಹುಲಿ, ಕ್ಷೇತ್ರ ಕಾರ್ಯದ ಹಾದಿಯಲ್ಲಿ, ಜಾನಪದ ವಿಹಾರ, ಪ್ಲೇಟರನ ಲಾವಣಿಗಳ ಸಂಗ್ರಹ ಹೀಗೆ ಹಲವು ಜಾನಪದ ಕೃತಿ ರಚನೆ ಇವರಿಂದಾಗಿದ್ದು, ಅನೇಕ ಪ್ರಶಸ್ತಿ ಗೌರವಗಳಿಗೆ ಭಾಜನವಾಗಿವೆ.

ಕನ್ನಡದಲ್ಲಿ ಪ್ರಪ್ರಥಮವಾಗಿ ಜಾನಪದ ನಿಘಂಟು ರೂಪಿಸಿಕೊಟ್ಟ ರಾಮಣ್ಣ, ಜಾನಪದ ಸಾಹಿತ್ಯ ಇತಿಹಾಸವನ್ನ ಕಾಲಮಾನಾನುಸಾರವಾಗಿ ಕೃತಿ ರೂಪಕ್ಕೆ ತಂದಿರುವ ಏಕೈಕ ಜಾನಪದ ತಜ್ಞ.

ವರ್ಷಗಳು ಎಂಬತ್ತಾದರೂ ಜಾನಪದ ಕುರಿತ ಕೃತಿ ತರುತ್ತಲೇ ಇರುವ, ಬಹುಮುಖ ಪ್ರತಿಭೆಯ ರಾಮಣ್ಣ ಅವರು, ಜಾನಪದ ವಿ.ವಿ.ಯ ಮಂಡ್ಯ ಕೇಂದ್ರದ ನಿರ್ದೇಶಕರಾಗಿ ಸೇವೆ ಸಲ್ಲಿದ್ದಾರೆ, ಜಾನಪದ ವಿವಿಯಿಂದ ಗೌರವ ಡಾಕ್ಟರೇಟ್ ಗೆ ಭಾಜನರಾಗಿದ್ದಾರೆ.

ಮೈಸೂರು ದಸರಾ ಮೆರವಣಿಗೆಯ ಜಾನಪದ ಕಲಾ ತಂಡಗಳ ಆಯ್ಕೆ ಮತ್ತು ತೀರ್ಪುಗಾರರಾಗಿ25 ವರ್ಷಗಳು ಸೇವೆ ಸಲ್ಲಿಸಿರುವ ಡಾ, ಕ್ಯಾತನಹಳ್ಳಿ ರಾಮಣ್ಣ ಅವರಿಗೆ 'ಜಾನಪದ ತಿಳಿನೀರು' ಗೌರವ ಗ್ರಂಥ ಸಮರ್ಪಿಸಿ ಅಭಿನಂದಿಸುವ ಕಾರ್ಯಕ್ರಮ ದಿನಾಂಕ 16–4–2026 ರಂದು ನಡೆಯುತ್ತಿಧ.

ಪಾಂಡವಪುರದ ಟಿಎಪಿಸಿಎಂಎಸ್ ಆವರಣದಲ್ಲಿ ಬೆಳಗ್ಗೆ 10 ಕ್ಕೆ ನಿಗದಿಯಾಗಿರುವ ಕಾರ್ಯಕ್ರಮದಲ್ಲಿ ಆದಿ ಚುಂಚನಗಿರಿ, ಸುತ್ತೂರು ಮಠಾಧೀಶರು ಸೇರಿದಂತೆ ನಾಡಿನ ಗಣ್ಯರು ಉಪಸ್ಥಿತರಿರುತ್ತಾರೆ.

ಕನ್ನಡದ ಫ್ಲೀಟರ್ ಎಂದೂ ಗುರುತಿಸಬಹುದಾದ ಡಾ.ಕ್ಯಾತನಹಳ್ಳಿ ರಾಮಣ್ಣ ನಮ್ಮ ನಿಮ್ಮ ನಡುವೆ ಇರುವ ಶ್ರೇಷ್ಠ ವಿದ್ವಾಂಸರು. ಉಸಿರುಸಿರಲ್ಲೂ ಜಾನಪದನ್ನಿಟ್ಟುಕೊಂಡಿರುವ ಆದಮ್ಯ ಚೇತನಕ್ಕೆ ಸಮರ್ಪಿಸುವ ಗೌರವದ ಘಳಿಗೆಗೆ ತಾವೂ ಸಾಕ್ಷಿಯಾಗಿದ್ದರೆ, ಕಾರ್ಯಕ್ರಮಕ್ಕೆ ವಜನ್ನು ಸಿಗಲಿದೆ.

। ಜಿ.ಆರ್.ಸತ್ಯಲಿಂಗರಾಜು

# ಪ್ರಪಂಚದ ಎರಡು ಅತ್ಯದ್ಭುತ ಭಾಷೆಗಳು : ನಗು ಮತ್ತು ಅಳು

ಈ ಪ್ರಪಂಚದಲ್ಲಿ ಸಾವಿರಾರು ಭಾಷೆಗಳಿವೆ. ಪ್ರತಿಯೊಂದು ಭಾಷೆಗೂ ತನ್ನದೇ ಆದ ವ್ಯಾಕರಣ, ಲಿಪಿ ಮತ್ತು ಇತಿಹಾಸವಿದೆ. ನಾವು ಹುಟ್ಟಿದ ಮೇಲೆ ತಂದೆ–ತಾಯಿ, ಗುರುಗಳು ಅಥವಾ ಪರಿಸರದಿಂದ ಒಂದು ಭಾಷೆಯನ್ನು ಕಲಿಯುತ್ತೇವೆ. ಆದರೆ, ಮನುಷ್ಯನ ಅಂತರಂಗದ ಭಾವನೆಗಳನ್ನು ವ್ಯಕ್ತಪಡಿಸಲು ಯಾವುದೇ ತರಬೇತಿ ಅಥವಾ ಶಾಲೆಯ ಅಗತ್ಯವಿಲ್ಲದ ಎರಡು ಅದ್ಭುತ ಭಾಷೆಗಳಿವೆ. ಅವುಗಳೆಂದರೆ: ನಗು ಮತ್ತು ಅಳು.

ಮಾನವ ವಿಕಾಸದ ಇತಿಹಾಸದಲ್ಲಿ ಭಾಷೆಯ ಉಗಮವು ಒಂದು ಮಹತ್ವದ ಘಟ್ಟ. ಸಂವಹನಕ್ಕಾಗಿ ನಾವು ಲಿಪಿಗಳನ್ನು, ಶಬ್ದಗಳನ್ನು ಮತ್ತು ವ್ಯಾಕರಣಗಳನ್ನು ರೂಪಿಸಿಕೊಳ್ಳುವ ಮೊದಲೇ, ಪ್ರಕೃತಿಯು ನಮಗೆ ಎರಡು ಜಾಗತಿಕ ಸಂವಹನ ಮಾಧ್ಯಮಗಳನ್ನು ಉಡುಗೊರೆಯಾಗಿ ನೀಡಿದೆ.

ಯಾವುದೇ ಮಗು ಹುಟ್ಟಿದ ತಕ್ಷಣ ಮೊದಲು ಮಾಡುವುದು ಅಳುವುದು. ಅದಕ್ಕೆ ಯಾರೂ ಅಳಲು ಕಲಿಸಿಕೊಡುವುದಿಲ್ಲ. ಹಾಗೆಯೇ, ಕೆಲವೇ ತಿಂಗಳುಗಳಲ್ಲಿ ಮಗು ತನ್ನ ತಾಯಿಯನ್ನು ನೋಡಿ ನಗಲು ಪ್ರಾರಂಭಿಸುತ್ತದೆ. ಈ ನಗು ಮತ್ತು ಅಳು ಕೇವಲ ದೈಹಿಕ ಕ್ರಿಯೆಗಳಲ್ಲ; ಅವು ಸಂವಹನದ ಅತ್ಯಂತ ಪ್ರಾಚೀನ ಮತ್ತು ಶಕ್ತಿಯುತ ಮಾಧ್ಯಮಗಳು.

ವಿಶ್ವದ ಯಾವುದೇ ಮೂಲೆಯಲ್ಲಿರುವ ವ್ಯಕ್ತಿಯೇ ಆಗಿರಲಿ, ಆತ ಆಡುವ ಮಾತು ನಮಗೆ ಅರ್ಥವಾಗದಿದ್ದರೂ, ಆತನ ಮುಖದ ಮೇಲಿನ 'ನಗು' ನಮಗೆ ಸಂತೋಷದ ಸಂದೇಶ ನೀಡುತ್ತದೆ. ಕಣ್ಣಿನ ಹನಿಗಳು ಆತನ ನೋವನ್ನು ನಮಗೆ ಮನವರಿಕೆ ಮಾಡಿಕೊಡುತ್ತವೆ. ಈ ಭಾಷೆಗಳಿಗೆ ಗಡಿಯಿಲ್ಲ, ಧರ್ಮವಿಲ್ಲ, ಮತ್ತು ಜಾತಿ–ಬೇಧಗಳ ಹಂಗಿಲ್ಲ.

ನಗು ಮತ್ತು ಅಳು ನಮಗೆ ಯಾರೂ ಕಲಿಸಿಕೊಡದ ?ಇನ್‌ಸ್ಟಾಲ್ಡ್ ಸಾಫ್ಟ್‌ವೇರ್? ಇದ್ದಂತೆ. ಇವುಗಳ ಹಿಂದೆ ಸಂಕೀರ್ಣವಾದ ಶಾರೀರಿಕ ಮತ್ತು ನರಮಂಡಲದ ಪ್ರಕ್ರಿಯೆಗಳಿವೆ.

ಅಳುವಿನ ವಿಜ್ಞಾನ: ನಮ್ಮ ಕಣ್ಣೀರಿನಲ್ಲಿ ಮೂರು ವಿಧಗಳಿವೆ: ಮೂಲಭೂತ (Basal), ಪ್ರತಿಫಲಿತ (Reflex) ಮತ್ತು ಭಾವನಾತ್ಮಕ (Emotional). ಭಾವನಾತ್ಮಕ ಕಣ್ಣೀರು ಕೇವಲ ಮಾನವರಲ್ಲಿ ಮಾತ್ರ ಕಂಡುಬರುತ್ತದೆ.

* ಒತ್ತಡ ನಿರ್ವಹಣೆ: ನಾವು ಅತ್ತಾಗ ನಮ್ಮ ದೇಹದಲ್ಲಿ ಒತ್ತಡವನ್ನು ಉಂಟುಮಾಡುವ 'ಕಾರ್ಟಿಸೋಲ್' ಮತ್ತು 'ಅಡ್ರಿನಾಲಿನ್' ಹಾರ್ಮೋನ್ ಮಟ್ಟ ಕಡಿಮೆಯಾಗುತ್ತದೆ.
* ಎಂಡೋರ್ಫಿನ್‌ಗಳ ಬಿಡುಗಡೆ: ಅಳುವುದು ದೇಹದಲ್ಲಿ 'ಎಂಡೋರ್ಫಿನ್' ಮತ್ತು 'ಆಕ್ಸಿಟೋಸಿನ್' ಎಂಬ ಹಾರ್ಮೋನ್‌ಗಳನ್ನು ಬಿಡುಗಡೆ ಮಾಡುತ್ತದೆ. ಇವು ನೈಸರ್ಗಿಕ ನೋವು ನಿವಾರಕಗಳಂತೆ ಕೆಲಸ ಮಾಡಿ, ಮನಸ್ಸನ್ನು ಹಗುರಗೊಳಿಸುತ್ತವೆ.

**ನಗುವಿನ ವಿಜ್ಞಾನ:** ನಗುವು ಕೇವಲ ಮನಸ್ಸಿನ ಸಂತೋಷವಲ್ಲ, ಅದು ಇಡೀ ದೇಹದ ವ್ಯಾಯಾಮ.

* ಮೆದುಳಿನ ಸ್ಪಂದನೆ: ನಾವು ನಕ್ಕಾಗ ಮೆದುಳಿನ 'ಲಿಂಬಿಕ್ ಸಿಸ್ಟಮ್' (Limbic System)ಸಕ್ರಿಯವಾಗುತ್ತದೆ. ಇದು ಡೋಪಮೈನ್ ಎಂಬ 'ಫೀಲ್ ಗುಡ್' ಹಾರ್ಮೋನ್ ಅನ್ನು ಬಿಡುಗಡೆ ಮಾಡುತ್ತದೆ.
* ರೋಗನಿರೋಧಕ ಶಕ್ತಿ: ಸಂಶೋಧನೆಗಳ ಪ್ರಕಾರ, ಮನಸಾರೆ ನಗುವುದು ದೇಹದಲ್ಲಿ ಆಂಟಿಬಾಡಿಗಳನ್ನು ಹೆಚ್ಚಿಸಿ ರೋಗನಿರೋಧಕ ಶಕ್ತಿಯನ್ನು ವೃದ್ಧಿಸುತ್ತದೆ.

ಮೌನದಲ್ಲೂ ಮಾತನಾಡುವ ಸಂವಹನ



ನಮ್ಮ ಸಮಾಜದಲ್ಲಿ ಮಾತಿಗೆ ಹೆಚ್ಚಿನ ಮಹತ್ವವಿದೆ. ಆದರೆ ಹಲವು ಸಂದರ್ಭಗಳಲ್ಲಿ ಮಾತು ಸೋಲುತ್ತದೆ. ಅತೀವ ದುಃಖವಾದಾಗ ಅಥವಾ ಮಿತಿಮೀರಿದ ಸಂತೋಷವಾದಾಗ ನಮಗೆ ಶಬ್ದಗಳು ಸಿಗುವುದಿಲ್ಲ. ಆಗ ಅಳು ಅಥವಾ ನಗು ಆ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತವೆ.

* ನಗು: ಇದು ಸೌಹಾರ್ದತೆಯ ಸಂಕೇತ. ಅಪರಿಚಿತರ ನಡುವೆ ಸ್ನೇಹದ ಸೇತುವೆ ನಿರ್ಮಿಸಲು ಒಂದು ಪುಟ್ಟ ನಗು ಸಾಕು. ಇದು ಒತ್ತಡವನ್ನು ಕಡಿಮೆ ಮಾಡುವುದಲ್ಲದೆ, ಎದುರಿಗಿರುವವರಿಗೆ ಭರವಸೆಯನ್ನು ನೀಡುತ್ತದೆ.
* ಅಳು: ಅಳುವುದು ದೌರ್ಬಲ್ಯದ ಸಂಕೇತವಲ್ಲ. ಅದು ಮನಸ್ಸಿನ ಭಾರವನ್ನು ಇಳಿಸಿಕೊಳ್ಳುವ ಒಂದು ಸ್ವಾಭಾವಿಕ ಕ್ರಿಯೆ. ನೋವು, ಹತಾಶೆ ಅಥವಾ ಕೃತಜ್ಞತೆಯ ಭಾವ ಉಕ್ಕಿ ಬಂದಾಗ ಕಣ್ಣೀರು ಹರಿಯುವುದು ಸಹಜ.

ನಮ್ಮ ಸಂಸ್ಕೃತಿಯಲ್ಲಿ ಭಾವನೆಗಳಿಗೆ ವಿಶೇಷ ಸ್ಥಾನವಿದೆ. ಭಾರತೀಯ ಸಾಹಿತ್ಯದ 'ನವರಸ'ಗಳಲ್ಲಿ ಹಾಸ್ಯ (ನಗು) ಮತ್ತು ಕರುಣ (ಅಳು) ಅತಿ ಮುಖ್ಯವಾದವು.

* ಸಹಿಷ್ಣುತೆ: ನಮ್ಮಲ್ಲಿ ಕಷ್ಟ ಕಾಲದಲ್ಲೂ ಸ್ಥಿತಪ್ರಜ್ಞತೆಯನ್ನು ಕಾಪಾಡಿಕೊಳ್ಳುವ ಗುಣವನ್ನು ಗೌರವಿಸುತ್ತೇವೆ. "ಬಂದದ್ದೆಲ್ಲ ಬರಲಿ" ಎಂಬ ಮನೋಭಾವ ನಗುವಿನ ಹಿಂದಿನ ದೊಡ್ಡ ತತ್ವ.
* ಮಾನವೀಯತೆ: ಪರರ ಕಷ್ಟಕ್ಕೆ ಕರಗುವ ಕಣ್ಣೀರು ನಮ್ಮಲ್ಲಿರುವ ಮಾನವೀಯತೆಯನ್ನು ದೃಢೀಕರಿಸುತ್ತದೆ. ಹಬ್ಬ ಹರಿದಿನಗಳ ಸಂಭ್ರಮದ ನಗು ಮತ್ತು ಕಷ್ಟದ ಸಂದರ್ಭದಲ್ಲಿ ಹಂಚಿಕೊಳ್ಳುವ ಕಣ್ಣೀರು ನಮ್ಮನ್ನು ಪರಸ್ಪರ ಬೆಸೆಯುವ ಸಾಮಾಜಿಕ ಗೊಂದುಗಳಾಗಿವೆ.
* ಉದಾಹರಣೆ: ಒಬ್ಬ ಕನ್ನಡಿಗ ಮತ್ತು ಒಬ್ಬ ವಿದೇಶಿ ಪ್ರಜೆಗೆ ಪರಸ್ಪರರ ಭಾಷೆ ತಿಳಿಯದಿದ್ದರೂ, ಆಸ್ಪತ್ರೆಯಲ್ಲೋ ಅಥವಾ ಸಂಭ್ರಮದ ವೇದಿಕೆಯಲ್ಲೋ ಅವರ ಕಣ್ಣೀರು ಅಥವಾ ನಗು ಪರಸ್ಪರರ ಮನಸ್ಸನ್ನು ತಲುಪುತ್ತದೆ. ಇಲ್ಲಿ 'ಮಿರರ್ ನ್ಯೂರಾನ್‌ಗಳು' (ಒಡಿಡಿಂಡಿ ಓಜಣಡಿಂಟಿ) ಕೆಲಸ ಮಾಡುತ್ತವೆ, ಇದು ನಾವು ಇನ್ನೊಬ್ಬರ ಭಾವನೆಯನ್ನು ಶಬ್ದಗಳಿಲ್ಲದೆಯೇ ಗ್ರಹಿಸಲು ಸಹಕರಿಸುತ್ತದೆ.

ಇಂದಿನ ಡಿಜಿಟಲ್ ಯುಗದಲ್ಲಿ ನಾವು 'ಎಮೋಜಿ' (Emoji) ಗಳ ಮೂಲಕ ನಗು ಮತ್ತು ಅಳುವನ್ನು ಸಂಕೇತಿಸುತ್ತಿದ್ದೇವೆ. ಇದು ಈ ಎರಡು ಭಾವನೆಗಳ ಸಾರ್ವತ್ರಿಕತೆಗೆ ಅತಿದೊಡ್ಡ ಸಾಕ್ಷಿ. ಆದರೆ, ಕೃತಕ ನಗು ಮತ್ತು ಯಾಂತ್ರಿಕ ಜೀವನದ ನಡುವೆ ನೈಜ ಭಾವನೆಗಳು ಕಳೆದುಹೋಗುತ್ತಿವೆ.

ಮಾನಸಿಕ ಆರೋಗ್ಯದ ದೃಷ್ಟಿಯಿಂದ, ಅಳುವನ್ನು ಹತ್ತಿಕ್ಕುವುದು ಅಥವಾ ಯಾವಾಗಲೂ ಮುಖವಾಡದ ನಗು ಧರಿಸುವುದು ಅಪಾಯಕಾರಿ. ಸಹಜವಾಗಿ ಸ್ಪಂದಿಸುವುದೇ ಆರೋಗ್ಯದ ಲಕ್ಷಣ. ಒಬ್ಬ ವ್ಯಕ್ತಿ ತನ್ನ ಭಾವನೆಗಳನ್ನು ವ್ಯಕ್ತಪಡಿಸಲು ಹಿಂಜರಿಯಬಾರದು.

ನಗು ಮತ್ತು ಅಳು ಪ್ರಕೃತಿಯು ಮನುಕುಲಕ್ಕೆ ನೀಡಿದ ಸಮಾನತೆಯ ಸೂತ್ರಗಳು. ಶ್ರೀಮಂತನಿಗೂ ಅದೇ ಅಳು, ಬಡವನಿಗೂ ಅದೇ ನಗು. ಭಾಷೆಗಳು ನಮ್ಮನ್ನು ವಿಭಾಗಿಸಬಹುದು, ಆದರೆ ನಗು ಮತ್ತು ಅಳು ನಮ್ಮನ್ನು ಒಂದೇ 'ಮಾನವ ಜನಾಂಗ'ವಾಗಿ ಉಳಿಸುತ್ತವೆ.

ನಾವು ಎಷ್ಟು ಭಾಷೆಗಳನ್ನು ಕಲಿತರೂ, ಈ ಎರಡು ಮೂಲ ಭಾಷೆಗಳನ್ನು ಸರಿಯಾಗಿ ಬಳಸುವುದನ್ನು ಮರೆಯಬಾರದು. ಇನ್ನೊಬ್ಬರ ಕಣ್ಣೀರನ್ನು ಒರೆಸುವ ಸಂವೇದನೆ ಮತ್ತು ಇನ್ನೊಬ್ಬರ ಮುಖದಲ್ಲಿ ನಗು ಮೂಡಿಸುವ ಹಂಬಲವೇ ಮನುಷ್ಯ ಜನ್ಮದ ಸಾರ್ಥಕತೆ.

ಕೊನೆಗೂ, ನಾವು ಮನುಷ್ಯರಾಗಿ ಒಬ್ಬರನ್ನೊಬ್ಬರು ಅರ್ಥಮಾಡಿಕೊಳ್ಳಲು ಈ ಎರಡು ಸಾಂಕೇತಿಕ ಭಾಷೆಗಳೇ ಸಾಕು. ಮಾತುಗಳು ಮರೆತರೂ, ಈ ಭಾವನೆಗಳ ಭಾಷೆ ಎಂದಿಗೂ ಜೀವಂತ.

ಆತ್ಮೀಯ ಓದುಗರೇ, ಮುಂದಿನ ಬಾರಿ ನೀವು ನಕ್ಕಾಗ ಅಥವಾ ಅತ್ತಾಗ ನೆನಪಿರಲಿ, ನೀವು ಈ ಪ್ರಪಂಚದ ಅತ್ಯಂತ ಪುರಾತನ ಮತ್ತು ಪವಿತ್ರವಾದ ಭಾಷೆಯನ್ನು ಮಾತನಾಡುತ್ತಿದ್ದೀರಿ. ಈ ಭಾಷೆಗೆ ಯಾವ ಡಿಕ್ಷನರಿಯ ಅಗತ್ಯವೂ ಇಲ್ಲ.



। ರಚನೆ : ಸ್ವಾಮಿನಾಥನ್
ಮೊಬೈಲ್ : 9880041516
Email:Swamynathann@gmail.com



। ವೀಣಾ ಹೇಮಂತ್‌ಗೌಡ ಪಾಟೀಲ್



# ಬದುಕು ಒಡ್ಡಿದ ಸವಾಲನ್ನು ಸರಳವಾಗಿ ಸ್ವೀಕರಿಸಿದ ಜಸ್ಟಿಸ್ ಸೋನಿಯಾ

ಆ ದಿನ ಬೆಳಗಿನ ಜಾವವೇ ಆಕೆಯ ತಂದೆ ತಾಯಿಗಳು ಪರಸ್ಪರ ವಾದ ಮಾಡುತ್ತಿದ್ದರು. ಆಗ ಅವರ ಮಗಳು ಸೋನಿಯಾ ಒಂದು ನಿರ್ಧಾರವನ್ನು ಕೈಗೊಂಡಳು. ಅಂದು ಆಕೆ ಕೈಗೊಂಡ ನಿರ್ಧಾರವೇ ಇಂದಿಗೂ ಆಕೆಯನ್ನು ಬದುಕಿನಲ್ಲಿ ಮುಂದೆ ಸಾಗುವಂತೆ ಮಾಡಿದ್ದು ಪ್ರಪಂಚದ ಅತ್ಯಂತ ಬಲಿಷ್ಠ ದೇಶ ಎಂದೇ ಕರೆದುಕೊಳ್ಳುವ ಅಮೆರಿಕಾ ದೇಶದ ಸುಪ್ರೀಂಕೋರ್ಟ್ ನ ಜಡ್ಜ್ ಆಗಿ ನೇಮಕಗೊಳ್ಳುವಂತೆ ಮಾಡಿದ್ದು ಎಂದರೆ ಆಕೆಯ ಸಂಕಲ್ಪ ಶಕ್ತಿ ಅದ್ಭುತ.

ಅದು 1962ರ ಸಮಯ. ಏಳು ವರ್ಷ ವಯಸ್ಸಿನ ಸೋನಿಯಾ ತನ್ನ ಪಾಲಕರೊಂದಿಗೆ ದ ಬ್ರಾಂಕ್ಸ್ ಎಂಬ ಪಟ್ಟಣದಲ್ಲಿ ವಾಸವಾಗಿದ್ದಳು. ಕೇವಲ ಮೂರು ವಾರಗಳ ಹಿಂದೆ ಆಕೆಗೆ ಟೈಪ್ ಒನ್ ಡಯಾಬಿಟಿಸ್ ಇರುವುದು ಪತ್ತೆಯಾಗಿತ್ತು. ವೈದ್ಯರು ಪ್ರತ್ಯೇಕವಾಗಿ ಅವರ ಮಗಳ ಆಯಸ್ಸಿನ ಅವಧಿ ಅತ್ಯಂತ ಕಡಿಮೆಯದಾಗಿದೆ ಎಂದು ಪಾಲಕರನ್ನು ಕರೆದು ಹೇಳಿದ್ದರು. ಪ್ರತಿದಿನ ಆಕೆ ಕಡ್ಡಾಯವಾಗಿ ಇನ್ಸುಲಿನ್ ಇಂಜೆಕ್ಷನ್ ಪಡೆಯಲೇಬೇಕಾಗಿತ್ತು. ಆಲ್ಕೋಹಾಲ್ ಸೇವನೆಯ ಕಾರಣದಿಂದ ತನ್ನ ದೇಹದ ಮೇಲಿನ ಸ್ಥಿರತೆಯನ್ನು ಕಳೆದುಕೊಂಡಿದ್ದ ಆಕೆಯ ತಂದೆಯ ಕೈಗಳು ಇಂಜೆಕ್ಷನ್ ನ ಸಿರಿಂಜ್ ಹಿಡಿಯಲು ಸಾಧ್ಯವಾಗದಷ್ಟು ನಡುಗುತ್ತಿದ್ದವು. ಆಕೆಯ ತಾಯಿ ಎರಡೆರಡು ಶಿಫ್ಟ್ ಗಳಲ್ಲಿ ನರ್ಸ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಳು.ನಸುಕಿನ ಜಾವದಲ್ಲಿಯೇ ಮನೆಯನ್ನು ಬಿಡುತ್ತಿದ್ದ ಆಕೆ ಕತ್ತಲು ಕಂತಿದ ಮೇಲೆ ಮನೆಗೆ ಮರಳುತ್ತಿದ್ದಳು. ಮಗಳ ಆರೋಗ್ಯವನ್ನು ಕಾಯುವ ನಿಟ್ಟಿನಲ್ಲಿ, ಆಕೆಯ ಸಾವನ್ನು ಮುಂದೂಡುವ ಸಲುವಾಗಿ ಪ್ರತಿದಿನ ಮಗಳಿಗೆ ಇಂಜೆಕ್ಷನ್ ಯಾರು ಕೊಡಬೇಕು ಎಂಬ ವಿಷಯಕ್ಕೆ ಆ ದಿನ ಮುಂಜಾನೆಯೇ ದಂಪತಿಗಳಿಬ್ಬರ ನಡುವೆ ವಾಗ್ವಾದ ಆರಂಭವಾಗಿತ್ತು.

ತಂದೆ ತಾಯಿಯ ವಾಗ್ವಾದಕ್ಕೆ ಎಚ್ಚರವಾದ ಸೋನಿಯಾ ಅಡುಗೆ ಮನೆಯ ಕಟ್ಟೆಯ ಮೇಲೇರಿ ನಿಂತು ನೀವಿಬ್ಬರೂ ಚಿಂತಿಸಬೇಡಿ ಇನ್ನು ಮುಂದೆ ಸಮಯಕ್ಕೆ ಸರಿಯಾಗಿ ಇಂಜೆಕ್ಷನ್ ನಾನೇ ಮಾಡಿಕೊಳ್ಳುತ್ತೇನೆ ಎಂದು ಹೇಳುತ್ತಲೇ ನೀರು ತುಂಬಿದ ಪಾತ್ರೆಯನ್ನು ಸ್ಟೌ ನ ಮೇಲೆ ಇಟ್ಟು

ಬರ್ನರ್ ಗೆ ಉರಿ ತಾಗಿಸಿ ಅದರಲ್ಲಿ ಇನ್ಸುಲಿನ್ ಇಂಜೆಕ್ಷನ್ ನ ಸ್ಟೀಲ್ ಸಿರಿಂಜನ್ನು ಹಾಕಿ ಕುದಿಯಲಿಟ್ಟಳು. ಬಳಸಿ ಬಿಸಾಡುವ ಇಂಜೆಕ್ಷನ್ ಸಿರಿಂಜುಗಳಿಲ್ಲದ, ಹಳೆಯ ಶೈಲಿಯಲ್ಲಿ ಇಂಜೆಕ್ಷನ್ ನ ಸೂಜಿಯನ್ನು ಕುದಿಸಿ ಮತ್ತೆ ಮರುಬಳಕೆ ಮಾಡುವ ಪದ್ಧತಿ ಚಾಲ್ತಿಯಲ್ಲಿದ್ದ ಕಾಲ ಅದಾಗಿತ್ತು. ಆ ದಿನದಿಂದ ಮತ್ತೆ ಮುಂದೆ ಆಕೆ ಪ್ರತಿದಿನ ತನ್ನ ಇಂಜೆಕ್ಷನ್ನನ್ನು ತಾನೇ ಮಾಡಿಕೊಳ್ಳುವುದನ್ನು ಕಲಿತಳಷ್ಟೇ ಅಲ್ಲ ಬದುಕಿದ್ದಕ್ಕೂ ಇಂದಿಗೂ ಅದನ್ನು ಪಾಲಿಸುತ್ತಿದ್ದಾಳೆ.

ಇಂದಿನ ಗುಣಮಟ್ಟಕ್ಕೆ ಹೋಲಿಸಿದರೆ ಅಂದಿನ ಸೂಜಿಗಳು ಅಷ್ಟೇನು ಅಭಿವೃದ್ಧಿಯನ್ನು ಹೊಂದಿರಲಿಲ್ಲ. ಅದಲ್ಲದೆ ದೇಹದ ರಕ್ತದಲ್ಲಿರುವ ಸಕ್ಕರೆಯ ಅಂಶವನ್ನು ಪತ್ತೆ ಮಾಡಲು ಬೆರಳಿನ ತುದಿಯಲ್ಲಿ ರೇಜರ್ ಬ್ಲೇಡನ್ನು ಬಳಸಬೇಕಿತ್ತು.

ಮೊದಲ ಬಾರಿ ಆಸ್ಪತ್ರೆಯ ಪ್ರಯೋಗಾಲಯದ ತಂತ್ರಜ್ಞರು ಆಕೆಯ ಕೈಯ ಬೆರಳಿನಲ್ಲಿ ಸೂಜಿಯನ್ನು ಚುಚ್ಚಿ ರಕ್ತದ ಮಾದರಿಯನ್ನು ಸಂಗ್ರಹಿಸಲು ಹೋದಾಗ ಆಕೆ ಭಯಪಟ್ಟು ಆಸ್ಪತ್ರೆಯಿಂದಲೇ ಓಡಿ ಹೊರಗೆ ಹೊರಟು ಹೋಗಿ ಕಾರೊಂದರ ಅಡಿಯಲ್ಲಿ ಬಚ್ಚಿಟ್ಟುಕೊಂಡಿದ್ದಳು. ಆಕೆಯ ಪಾದವನ್ನು ಹಿಡಿದು ಆಕೆಯನ್ನು ಹೊರಗೆ ಎಳೆಯುವ ಸಾಹಸವನ್ನು ಮಾಡಿದ್ದರು.

ಆದರೆ ಇದೀಗ ಪ್ರತಿದಿನ ಮುಂಜಾನೆ ಆಕೆ ಕುದಿಯುತ್ತಿರುವ ನೀರಿನಿಂದ ಸಿರಿಂಜ್ ಅನ್ನು ತೆಗೆದು ಅದರಲ್ಲಿ ನಿಗದಿತ ಪ್ರಮಾಣದ ಇನ್ಸುಲಿನ್ ಅನ್ನು ತುಂಬಿಸಿ ನನ್ನ ತೊಡೆಯ ಭಾಗದಲ್ಲಿ ಇಂಜೆಕ್ಷನ್ ಚುಚ್ಚಿ ಕೊಳ್ಳುತ್ತಿದ್ದಳು.ನಂತರ ತನ್ನ ಪುಸ್ತಕಗಳನ್ನು ಜೋಡಿಸಿಕೊಂಡು ಬಸ್ ಹಿಡಿಯಲು ಓಡುತ್ತಿದ್ದಳು. ಇದು ಅತ್ಯಂತ ಸೂಕ್ಷ್ಮತೆಯನ್ನು ಸಾರುವ ಅಥವಾ ಸ್ಪೂರ್ತಿಯನ್ನು ನೀಡುವ ಕಥೆಯಲ್ಲ ಆಕೆಯ ಬದುಕಿನ ದಿನನಿತ್ಯದ ಕ್ರಿಯೆಗಳಲ್ಲಿ ಒಂದಾಗಿತ್ತು.

ತನ್ನ 9ನೇ ವಯಸ್ಸಿನಲ್ಲಿ ವಿಪರೀತ ಆರೋಗ್ಯ ಸಮಸ್ಯೆಯಿಂದ ಬಳಲುತ್ತಿದ್ದ ತಂದೆಯನ್ನು ಆಕೆ ಕಳೆದುಕೊಂಡಳು. ಆಕೆಯ ತಾಯಿ ಸೆಲಿನ ತನ್ನ ಇಬ್ಬರು ಮಕ್ಕಳನ್ನು ಅತ್ಯಂತ ಕಡಿಮೆ ಅನುಕೂಲಗಳನ್ನು ಹೊಂದಿರುವ ಸಾರ್ವಜನಿಕರಿಗೆ ಸರ್ಕಾರ ಇಲ್ಲವೇ ಸ್ಥಳೀಯ ಸಂಸ್ಥೆಗಳು ನೀಡುವ ಸಾರ್ವಜನಿಕ ವಸತಿಯಲ್ಲಿ ವಾಸಿಸುತ್ತ ಒತ್ತಡದ ಕೆಲಸ ಕಾರ್ಯಗಳನ್ನು ನಿರ್ವಹಿಸುತ್ತಾ ಬದುಕನ್ನು ಸಾಗಿಸಿದಳು. ಅವರು ವಾಸಿಸುತ್ತಿದ್ದ ವಸತಿ ಸಮುಚ್ಚಯವು ಚಳಿಗಾಲದಲ್ಲಿ ವಿಪರೀತ ಚಳಿ ಹಾಗೂ ಬೇಸಿಗೆಯಲ್ಲಿ ವಿಪರೀತ ಬಿಸಿಲಿನಿಂದ ಕೂಡಿರುತ್ತಿತ್ತು.

ಆದರೆ ಸೋನಿಯಾಗೆ ಅಲ್ಲಿ ಸಾಕಷ್ಟು ಪುಸ್ತಕಗಳು ದೊರೆಯುತ್ತಿದ್ದವು.. ಕೈಗೆ ಸಿಗುತ್ತಿದ್ದ ಎಲ್ಲ ಪುಸ್ತಕಗಳನ್ನು ಓದುತ್ತಿದ್ದ ಆಕೆ ಪುಸ್ತಕಗಳ ಲೋಕದಲ್ಲಿ ಕಳೆದು ಹೋಗುತ್ತಿದ್ದಳು. ನ್ಯಾನ್ಸಿ ಡ್ರಿವ್ ಎಂಬ ಡಿಟೆಕ್ಟಿವ್ ಪಾತ್ರವನ್ನು ಅತ್ಯಂತ ಪ್ರೀತಿಯಿಂದ ಆರಾಧಿಸುತ್ತಿದ್ದಳು.

ನ್ಯಾನ್ಸಿ ಡ್ರಿವ್ ಓರ್ವ ಪುಟ್ಟ ಯುವತಿಯಾಗಿದ್ದು ಹಿರಿಯರಿಗಿಂತ ವಿಭಿನ್ನವಾಗಿ ಯೋಚಿಸುತ್ತಿದ್ದ ಆಕೆ ಓರ್ವ ಡಿಟೆಕ್ಟಿವ್ ಆಗಿದ್ದು ತನ್ನ ಮುಂದೆ ಬರುವ ಯಾವುದೇ ತೊಂದರೆಗಳನ್ನು ಬೇಧಿಸಲು ಇತರರ

ಅನುಮತಿಗಾಗಿ ಕಾಯದ ದಿಟ್ಟ ಹೆಣ್ಣು ಮಗಳಾಗಿದ್ದಳು. ಪುಟ್ಟ ಸೋನಿಯಾ ಕೂಡ ಡಿಟೆಕ್ಟಿವ್ ಆಗಬಯಸಿದಳು. ಆಕೆ ಭೇಟಿಯಾದ ವೈದ್ಯರೊಬ್ಬರು ಡಿಟೆಕ್ಟಿವ್ ಕಾರ್ಯ ತುಂಬಾ ದೈಹಿಕ ಶ್ರಮವನ್ನುಬೇಡುವಂತಹದ್ದಾಗಿದ್ದು ಪ್ರಸ್ತುತ ಆಕೆ ಇರುವ ಆರೋಗ್ಯ ಸ್ಥಿತಿಗೆ ಅದು ಅಷ್ಟೇನೂ ಒಗ್ಗುವುದಿಲ್ಲ ಎಂದು ಸಲಹೆ ನೀಡಿದರು. ಇದು ಆಕೆಯಲ್ಲಿ ತುಸು ಬೇಸರವನ್ನು ಉಂಟುಮಾಡಿತು.

ಅದೊಂದು ದಿನ ಆಕೆ ದೂರದರ್ಶನದಲ್ಲಿ ಪೆರ್ರಿ ಮೇಸನ್ ಎಂಬ ವಕೀಲರ ವಾದ ವಿವಾದ ಕೋರ್ಟ್ ರೂಮ್ ಸನ್ನಿವೇಶಗಳು, ಅತ್ಯಂತ ತಾಳ್ಮೆ ಹಾಗೂ ಅಧಿಕಾರಯುತ ಸ್ವರದಲ್ಲಿ ಎಲ್ಲಾ ವಾದ ವಿವಾದಗಳನ್ನು ಆಲಿಸುತ್ತಿದ್ದ ನ್ಯಾಯಾಧೀಶರ ವರ್ತನೆಗಳನ್ನು ನೋಡಿ ಪ್ರಭಾವಿತಗೊಂಡಳು . ಡಯಾಬಿಟೀಸಿನಿಂದ ಬಳಲುತ್ತಿರುವವರು ಜಡ್ಜ್ ಆಗಬಾರದು ಎಂದು ಯಾರೂ ಆಕೆಗೆ ಹೇಳಿರಲಿಲ್ಲ ಅಲ್ಲವೇ!.

ತನ್ನ ಹತ್ತನೇ ವಯಸ್ಸಿನಲ್ಲಿ ಆಕೆ ಕೌಟುಂಬಿಕ ಹಾಗೂ ಆರ್ಥಿಕ ಒತ್ತಡಗಳಿಂದ ದಣಿಯುತ್ತಿದ್ದ ತನ್ನ ತಾಯಿಗೆ ನಾನು ಮುಂದೆ ಕಾನೂನು ವಿದ್ಯಾಭ್ಯಾಸವನ್ನು ಮಾಡಿ ಲಾಯರ್ ಆಗುವೆ ನಂತರ ನ್ಯಾಯಾಧೀಶರಾಗಲು ಇರುವ ಅರ್ಹತಾಪರೀಕ್ಷೆಯನ್ನು ಬರೆದು ನ್ಯಾಯಾಧೀಶಳಾಗುವೆ ಎಂದು ನಿರ್ಧಾರಯುತ ಸ್ವರದಿಂದ ಹೇಳಿದಳು.

ಅದು ಸಾಧ್ಯವಿಲ್ಲ ಎಂದು ಹೇಳಲು ಆಕೆಯ ತಾಯಿ ಸೆಲಿನಾಗೆ ಮಾತುಗಳೇ ಹೊರಬರಲಿಲ್ಲ. ತನ್ನ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದ ಆಕೆ ನಂತರ ಕಾರ್ಡಿನಲ್ ಸ್ಪೆಲ ಮನ್ ಹೈಸ್ಕೂಲಿನಲ್ಲಿ ವಿದ್ಯಾಭ್ಯಾಸವನ್ನು ಪೂರೈಸಿದಳು. ಹೈಸ್ಕೂಲಿನಲ್ಲಿ ಆಕೆ ಶಾಲೆಯ ಚರ್ಚೆಯ ಗುಂಪನ್ನು ಸೇರಿಕೊಂಡು ಅತ್ಯುತ್ತಮ ಚರ್ಚಾಪಟುವಾಗಿ ರೂಪುಗೊಂಡಳು. ಅಲ್ಲಿ ಆಕೆ ಮಂಡಿಸುತ್ತಿದ್ದ ವಾದಗಳನ್ನು ತೆಗೆದು ಹಾಕಲು ಯಾರೊಬ್ಬರಿಗೂ ಸಾಧ್ಯವಾಗುತ್ತಿರಲಿಲ್ಲ.

ಆಗ ಆಕೆ ಓದುತ್ತಿದ್ದ ಹೈಸ್ಕೂಲಿನ ಶಾಲೆಯ ಕೌನ್ಸಿಲರ್ ಒಬ್ಬರು ಆಕೆಗೆ ಐವಿ ಲೀಗ್ ವಿಶ್ವವಿದ್ಯಾಲಯಕ್ಕೆ ಅರ್ಜಿ ಹಾಕಲು ಸಲಹೆ ನೀಡಿದರು. ಪ್ರಿನ್ಸ್ ಟನ್ ಎಂಬ ಹೆಸರನ್ನೇ ಕೇಳದ ಸೋನಿಯಾ ಹಾಗೆಂದರೇನು ಎಂದು ಕೇಳಿದ್ದಳಾದರೂ ಅವರ ಸಲಹೆಗೆ ಒಪ್ಪಿ ಅರ್ಜಿ ಗುಜರಾಯಿಸಿದ್ದಳು. ಅಲ್ಲಿ ಆಕೆಯ ಪ್ರವೇಶಕ್ಕೆ ಅನುಮತಿ ದೊರೆಯಿತು.

1972 ರ ಸೆಪ್ಟಂಬರ್ ತಿಂಗಳಿನಲ್ಲಿ ಕೇವಲ ಒಂದು ಸೂಟ್ ಕೇಸ್ ಹಾಗೂ ಇನ್ಸುಲಿನ್ ಕಿಟ್ ನೊಂದಿಗೆ ಆಕೆ ಅಲ್ಲಿಗೆ ಬಂದಿಳಿದಳು. ತಮ್ಮ ಬೇಸಿಗೆಯ ರಜೆಗಳನ್ನು ಯುರೋಪ್ ಮತ್ತಿತರ ಭಾಗಗಳ ಪ್ರವಾಸದಲ್ಲಿ ಕಳೆದ, ಅತ್ಯಾಧುನಿಕ ಪ್ರೈವೇಟ್ ಶಾಲೆಗಳಲ್ಲಿ ಓದುತ್ತಿದ್ದ ಆಕೆಯ ಸಹಪಾಠಿಗಳು, ಆಕೆ ಗಿಂತ ಎಲ್ಲಾ ರೀತಿಯಲ್ಲಿ ಹೆಚ್ಚಿನ ಸವಲತ್ತುಗಳನ್ನು ಹೊಂದಿದವರ ಮಧ್ಯದಲ್ಲಿ ಆಕೆ ಓದಬೇಕಾಗಿತ್ತು. ಮೊದಲ ಸೆಮಿಸ್ಟರ್ ನಲ್ಲಿ ಆಕೆಗೆ ಅತ್ಯಂತ ಕಡಿಮೆ ಅಂಕಗಳು ಬಂದವು. ಬಹಳಷ್ಟು ವಿದ್ಯಾರ್ಥಿಗಳು ತೀವ್ರ ಆರೋಗ್ಯದ ತೊಂದರೆ ಇರುವಂತಹ ವ್ಯಕ್ತಿಗೆ ವಿಶ್ವವಿದ್ಯಾಲಯದಲ್ಲಿ ಜಾಗ ನೀಡುವ, ಶಿಕ್ಷಣ ಪಡೆಯುವ ಅವಶ್ಯಕತೆ ಇದೆಯೇ? ಎಂದು ಪ್ರಶ್ನಿಸಿ ಪತ್ರವನ್ನು ಕೂಡ ಬರೆದರು.

ಸೋನಿಯಾ ಆ ವರ್ಷದ ಬೇಸಿಗೆಯ ರಜೆಯಲ್ಲಿ ತನಗೆ ತಾನೇ ಶಿಕ್ಷಕಿಯಾಗಿದ್ದುಕೊಂಡು ಇತರರಿಗೆ ಈಗಾಗಲೇ ರೂಢಿಯಾಗಿದ್ದ ಎಲೈಟ್ ವಿದ್ಯಾರ್ಥಿಗಳು ಎಂದು ಅಂತಹ ಪ್ರತಿಷ್ಠಿತ ವಿಶ್ವವಿದ್ಯಾಲಯಗಳು ತಮ್ಮನ್ನು ತಾವು ಕರೆದುಕೊಳ್ಳಲು ಅತ್ಯವಶ್ಯಕವಾಗಿದ್ದ ವ್ಯಾಕರಣ, ಭಾಷೆಯ ಮೇಲಿನ ಹಿಡಿತ ಹಾಗೂ ಮಾತಿನ ಶೈಲಿ ಗಳನ್ನು ಕಲಿತಳು. ಅಂತಿಮವಾಗಿ ಅತ್ಯುನ್ನತ ಗೌರವದ ಅಂಕಗಳನ್ನು ಪಡೆದು ತರಗತಿಗೆ ಮೊದಲಿಗಳಾಗಿ ಆಕೆ ತನ್ನ ಪದವಿಯನ್ನು ಪೂರೈಸಿದಳು.

ನಂತರ ಬಂದದ್ದು ಯೇಲ್ ನ ಕಾನೂನು ವಿದ್ಯಾಲಯ.... ಅಲ್ಲಿಂದ ಆಕೆಯ ಪಯಣ ಮ್ಯಾನ್ ಹ್ಯಾಟನ ನ ಡಿಸ್ಟ್ರಿಕ್ಟ್ ಕಛೇರಿಗೆ ಸಾಗಿತು. ಅಲ್ಲಿ ಆಕೆ ಕೊಲೆ ಮತ್ತು ಮಾದಕ ವಸ್ತು ಕಳ್ಳ ಸಾಗಾಣಿಕೆಯ ಕೇಸ್ ಗಳನ್ನು ನಿರ್ವಹಿಸಿದರು.ತಾನು ಬೆಳೆದು ಬಂದ ಪರಿಸರದ ಸುತ್ತಲಿನಲ್ಲಿ ನಡೆಯುತ್ತಿದ್ದ ವಿದ್ಯಮಾನಗಳ, ಅಪರಾಧಗಳ ಕುರಿತು ಆಕೆಗೆ ಈಗಾಗಲೇ ಇದ್ದ ಅರಿವಿಗೆ ಕಾನೂನಿನ ಚಿಕಿತ್ಸಕ ಬುದ್ಧಿಯು ಸೇರಿತ್ತು. ಆಕೆಯ ವಾದ ವಿವಾದಗಳನ್ನು ಆಲಿಸಿದ ಆಕೆಯ ಸಹೋದ್ಯೋಗಿಯೊಬ್ಬರು ಕೋರ್ಟ್ ರೂಂನಲ್ಲಿ ತಾನು ಗಮನಿಸಿರುವ ಎದುರಿಸಲು ಅತ್ಯಂತ ಕಠಿಣವಾದ ವಕೀಲರಲ್ಲಿ ಆಕೆ ಒಬ್ಬಳು ಎಂದು ಪ್ರಶಂಸಿದ್ದರು.... ನಿಜ ಬದುಕು ಆಕೆಗೆ ಈ ಪಾಠವನ್ನು ಚಿಕ್ಕಂದಿನಲ್ಲೇ ಕಲಿಸಿದ್ದು ಇದೀಗ ಅದರ ಫಲವನ್ನು ಕಾಣಬಹುದಾಗಿತ್ತು.

ಮುಂದೆ 1992 ರಲ್ಲಿ ಅಮೆರಿಕದ ಅಧ್ಯಕ್ಷರಾದ ಜಾರ್ಜ್ ಎಚ್ ಡಬ್ಲ್ಯೂ ಬುಷ್ ಅವರು ಆಕೆಯನ್ನು ಫೆಡರಲ್ ಜಡ್ಜ್ ಎಂದು ನೇಮಕ ಮಾಡಿದರು. ಆಗ ಆಕೆಗೆ ಕೇವಲ 38 ವರ್ಷ ವಯಸ್ಸಾಗಿತ್ತು. ಅಲ್ಲಿಂದ ಸರಿ ಸುಮಾರು 30 ವರ್ಷಗಳ ಕಾಲ ಕಾರ್ಯನಿರ್ವಹಿಸಿದ ಆಕೆಯನ್ನು ಪುಟ್ಟ ಊರಾದ ದ ಬ್ರಾಂಕ್ಸ್ ನ ಜನರು ಪ್ರೀತಿಪೂರ್ವಕವಾಗಿ ಅಭಿನಂದಿಸಿದರು.

ಹದಿನಾಲ್ಕು ವರ್ಷಗಳ ನಂತರ ಮುಂದಿನ ಅಧ್ಯಕ್ಷರಾದ ಪ್ರೆಸಿಡೆಂಟ್ ಒಬಾಮಾ ಆಕೆಯನ್ನು ಅಮೆರಿಕ ಸಂಯುಕ್ತ ಸಂಸ್ಥಾನದ ಸುಪ್ರೀಂಕೋರ್ಟಿಗೆ ನೇಮಕ ಮಾಡಿದರು. ಅಲ್ಲಿ ಆಕೆಗೆ 68 ಪರವಾದ ಮತಗಳು ಹಾಗೂ 31 ವಿರೋಧದ ಮತಗಳು ದೊರೆತು ಲ್ಯಾಟಿನ್ ಭಾಷೆ ಮಾತನಾಡುವ ಮೊಟ್ಟಮೊದಲ ಸುಪ್ರೀಂ ಕೋರ್ಟ್ ನ್ಯಾಯಾಧೀಶರಾಗಿ ಆಯ್ಕೆಯಾಗಿ ಐತಿಹಾಸಿಕ ದಾಖಲೆಯನ್ನು ಮಾಡಿದರು. ಅಲ್ಲದೆ ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾದ ಮೂರನೇ ಮಹಿಳೆ ಮತ್ತು ಟೈಪ ಒನ್ ಡಯಾಬಿಟೀಸಿನಿಂದ ಬಳಲುತ್ತಿರುವ ಸುಪ್ರೀಂ ಕೋರ್ಟ್ ನ ಮೊದಲ ಮಹಿಳಾ ನ್ಯಾಯಾಧೀಶರು ಎಂದು ಗುರುತಿಸಿಕೊಂಡರು.

ಇದೀಗ 71 ರ ಹರೆಯದ ಜಸ್ಟಿಸ್ ಸೋನಿಯಾ ಪ್ರತಿದಿನ 4 ರಿಂದ 6 ಬಾರಿ ತನ್ನ ದೇಹದಲ್ಲಿ ಇನ್ಸುಲಿನ್ ಇಂಜೆಕ್ಷನ್ ಗಳನ್ನು ತಾನೇ ಮಾಡಿಕೊಳ್ಳುತ್ತಾರೆ. ಆಕೆಯು ತನ್ನ ದೇಹದ ಮೇಲೆ ಒಂದು ಇನ್ಸುಲಿನ್ ಮಾನಿಟರನ್ನ ಸದಾ ಧರಿಸಿರುತ್ತಾಳೆ. ಮೌಖಿಕವಾದ ವಾದಗಳನ್ನು ಆಲಿಸುವಾಗ ಒಂದಷ್ಟು ಗ್ಲುಕೋಸ್ ಚಾಕಲೇಟುಗಳನ್ನು ತನ್ನ ಜೇಬಿನಲ್ಲಿ ಇಟ್ಟುಕೊಂಡಿರುತ್ತಾರೆ. ತನ್ನಂತೆಯೇ ತೀವ್ರವಾದ ಆರೋಗ್ಯ ಸಮಸ್ಯೆ ಹೊಂದಿರುವ ಮಕ್ಕಳಿಗಾಗಿ ಪುಸ್ತಕವನ್ನು ಬರೆದಿರುವ ಆಕೆ ಅತ್ಯಂತ ಸರಳವಾಗಿ ಹೇಳುವುದು ಇಷ್ಟೇ .... ಅನಿವಾರ್ಯವಾಗಿಯಾದರೂ ನೀವು ಬದುಕಲೇಬೇಕಾದ ಜೀವನ ಶೈಲಿಯಿದು.ಇದನ್ನು ನೀವು ಒಪ್ಪಿ ಅಪ್ಪಿಕೊಳ್ಳಲೇಬೇಕು.

ಇಂದಿಗೂ ಆಕೆ ಸುಪ್ರೀಂ ಕೋರ್ಟ್ ನಲ್ಲಿ ಕುಳಿತುಕೊಳ್ಳುತ್ತಾರೆ. ಕೇಸುಗಳ ಕುರಿತು ನಿರ್ಣಯವನ್ನು ಕೈಗೊಳ್ಳುತ್ತಾರೆ 1962 ರಲ್ಲಿ ಇನ್ನು ಕೆಲವೇ ದಿನಗಳು ಮಾತ್ರ ಬದುಕಲು ಸಾಧ್ಯ ಎಂದು ಅಂದಿನ ವೈದ್ಯಕೀಯ ವ್ಯವಸ್ಥೆಯ ಮಿತಿಗಳ ಕಾರಣ ಆಕೆಯ ಭವಿಷ್ಯವನ್ನು ನಿರ್ಧರಿಸಿದ ವೈದ್ಯರ ನಿರೀಕ್ಷೆಯನ್ನು ಮೀರಿ ಆಕೆ ಬದುಕಿದ್ದಾಳೆ.... ತನ್ನ ಸ್ವಂತ ಬಲದ ಮೇಲೆ. ಪ್ರತಿದಿನ ಮುಂಜಾನೆ ಬೆಳಗಿನ ಬ್ರೇಕ್ ಫಾಸ್ಟ್ ಗೆ ಮುನ್ನ ಕಡ್ಡಾಯವಾಗಿ ಇನ್ಸುಲಿನ್ ಇಂಜೆಕ್ಷನ್ ಪಡೆಯಲೇಬೇಕು ಎಂಬ ವೈದ್ಯರ ಹೇಳಿಕೆಯ ಮೇರೆಗೆ ಪ್ರತಿದಿನ ಔಷಧಿಯನ್ನು ಯಾರು ಆಕೆಗೆ ಇಂಜೆಕ್ಟ್ ಮಾಡಬೇಕು ಎಂಬ ಹಿರಿಯರು ಬಗೆಹರಿಸಲಾಗದ ಹಾಗೂ ನಿರ್ಣಯಿಸಲಾಗದ ಸವಾಲೊಂದನ್ನು ಅತ್ಯಂತ ಚಿಕ್ಕ ವಯಸ್ಸಿನಲ್ಲಿ ಸಮಾಧಾನದಿಂದ ಹಾಗೂ ಶಾಂತಿಯುತವಾಗಿ ಬಗೆಹರಿಸಿದ ಅಂದಿನ ಪುಟ್ಟ ಬಾಲೆ ಇಂದಿಗೂ ಕೂಡ ತನ್ನನ್ನು ತಾನೇ ಸಂಭಾಳಿಸಿಕೊಳ್ಳುತ್ತಾಳೆ..... ತನಗೆ ತಾನೇ ಕೊಟ್ಟುಕೊಂಡ ಮಾತಿಗೆ. ಆಕೆಯ ಸಂಕಲ್ಪ ಶಕ್ತಿಗೆ ನಮ್ಮ ನಮನಗಳು.



Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,